ಶ್ರೀ ಡಿ. ನಾಗರಾಜಯ್ಯ : ಏನಾದರೂ ಚಕಮಕಿಯಾದರೆ ನಾವಿಬ್ಬರು ಇದ್ದೇವೆ. ಸಾರುಬಿಡಿ.

ಶ್ರೀ ಡಿ.ಕೆ. ಶಿವಕುಮಾರ್ : ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ.

ಶ್ರೀ ಎಂ. ನಾರಾಯಣಸ್ವಾಮಿ : ಏನೂದರೂ ಹೆಚ್ಚು ಕಡಿಮೆಯಾದರೆ ಅವರು ಇದ್ದಾರೆ. ನೀವು ಹೆದರಿಕೊಳ್ಳುವುದು ಬೇಡ.

ಅಧ್ಯಕ್ಷರು : ಶರಣಪ್ಪನವರೇ ನೀವು ಶುರುಮಾಡಿ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣಾ ಪ್ರಸ್ತಾಪದ ಮೇಲಿನ ಮುಂದುವರೆದ ಚರ್ಚೆ

ಶ್ರೀ ಕೆ. ಶರಣಪ್ಪ (ಕುಷ್ಟಗಿ) : ಮಾನ್ಯ ಅಧ್ಯಕ್ಷರೇ, ಮಾರ್ಚ್ 20ರಂದು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ಸಾಕಷ್ಟು ಹಿರಿಯ ಸದಸ್ಯರು ಪಾಲ್ಗೊಂಡು ಸಾಕಷ್ಟು ವಿಷಯಗಳನ್ನು ಅವರ ಭಾಷಣದ ಬಗ್ಗೆ ಮಾತನಾಡಿದ್ದಾರೆ. ಹಿರಿಯ ಸದಸ್ಯರು ಕೆಲವರು ವಿಷಯಗಳನ್ನು ಅವರ ಬಗ್ಗೆ ಮಾತನಾಡಿದ್ದಾರೆ. ಹಿರಿಯ ಸದಸ್ಯರು ಕೆಲವರು ರಾಜ್ಯಪಾಲರ ಭಾಷಣದ ಮೇಲೆ ಕಾಣಿಸಲಾದ ನೀತಿ ನಿರೂಪಣೆ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಕೆಲವರು ಸಹ ವಿರೋಧ ಮಾಡಬೇಕೆಂಬ ಏಕೈಕ ಉದ್ದೇಶದಿಂದ ಸಾಕಷ್ಟು ಮೆಚ್ಚಗೆಯನ್ನು ವ್ಯಕ್ತಮಾಡಲಾಗದೆ ಟೀಕೆ ಟಿಪ್ಪಣಿಗಳನ್ನು ಸಹ ಮಾಡಿದ್ದಾಗಿದೆ. ವಾಸ್ತವವಾಗಿ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಸರ್ಕಾರ ನೀತಿ ನಿರೂಪಣೆ ಬಗ್ಗೆ ಬಹಳ ಒಳ್ಳೆಯ ಮಹತ್ವದ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆತ. ನಾನು ಒಂದೊಂದಾಗಿ ಅವುಗಳನ್ನು ವಿವರಿಸುವುದಕ್ಕೆ ಹೋಗದೆ ಸಂಕ್ಷಿಪ್ತವಾಗಿ, ಎಲ್ಲರೂ ಹೇಳಿದ್ದಕ್ಕಿಂತ ಬೇರೆಯಾಗಿ ಒಂದು ಸಲಹೆಯ ಜೊತೆಗೆ ಹೇಳುವುದಾದರೆ, ಈದ್ಗಾ ಮೈದಾನದ ಬಗ್ಗೆ ನಿಜವಾಗಿಯೂ ಸರ್ಕಾರ ತೆಗೆದುಕೊಂಡಂಥ ನಿರ್ಣಯ ಇಡೀ ರಾಷ್ಟ್ರದಲ್ಲೇ ಮೆಚ್ಚುಗೆ ಯಾದಂಥ ವಿಷಯ. ಈ ಜ್ವಲಂತ ಸಮಸ್ಯೆ ಕಾಂಗ್ರೆಸ್ ಸರ್ಕಾರದಲ್ಲಿ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಇತ್ಯರ್ಥವಾಗದೆ ಉಳಿದಿದ್ದಂಥ ವಿಷಯವನ್ನು ಇವರು ಅಧಿಕಾರಕ್ಕೆ ಬಂದು ಮೂರು ತಿಂಗಳ ಒಳಗೆ ಈ ಸಮಸ್ಯೆಯನ್ನು ಬಗೆಹರಿಸಿದಂತಹ ಯಶಸ್ಸು ಈ ಸರ್ಕಾರದ್ದಾಗಿದೆ. ನಾನು ಈ ಸದನದ ಮುಖಾಂತರ ಹೇಳುವುದೇನೆಂದರೆ, ನಮ್ಮ ಸರ್ಕಾರ ಮಾಡಿದಂಥ ಈ ಕೆಲಸ ಇಡೀ ರಾಷ್ಟ್ರದಲ್ಲಿ ಜ್ವಲಂತ ಸಮಸ್ಯೆಯಾಗಿರುವ ರಾಮಮಂದಿರ,

ಬಾಬರಿ ಮಸೀದಿ ಸಮಸ್ಯೆಯ ಪರಿಹಾರಕ್ಕೆ ಮಾರ್ಗ ಕಲ್ಪಿಸಲಿ ಮತ್ತು ಈ ಮಾದರಿಯ ಮುಖಾಂತರ ಅದಕ್ಕೆ ಉಪಯೋಗವಾಗಲಿ ಎಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಎರಡನೆಯದಾಗಿ ಇಡೀ ಕಾಂಗ್ರೆಸ್ ಸರ್ಕಾರದಲ್ಲಿ ಐದುವರ್ಷಗಳಲ್ಲಿ ಪಂಚಾಯತ್ ಚುನಾವಣೆಯನ್ನು ಬಿಟ್ಟು ಬೇರೆ ಯಾವುದೇ ಚುನಾವಣೆಯನ್ನು ಸಹ ಮಾಡಿರಲಿಲ್ಲ, ಅದನ್ನು ಕೂಡ ಪಂಚಾಯತ್ ಚುನಾವಣೆ ಬಗ್ಗೆ ಕೋರ್ಟಿನಿಂದ ಆದೇಶಬಂದಮೇಲೆ ಮೂಡಿದರೇ ಹೊರತು ಸ್ವತಃ ತಾವಾಗಿ ಏನೂ ಮಾಡಲಿಲ್ಲ. ಆದರೆ ಈ ಸರ್ಕಾರ ಅಧಿ ಕಾರಕ್ಕೆ ಬಂದ ಸ್ವಲ್ಪ ದಿವಸಗಳಲ್ಲೇ ಚುನಾವಣೆಯಲ್ಲಿ ಭರವಸೆ ಕೊಟ್ಟಂತೆ ಎರಡು ತಿಂಗಳೊಳಗೇ ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಆಸಕ್ತಿ ವಹಿಸಿದ ಈ ಸರ್ಕಾರ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಬಹಳ ಶಾಂತತೆಯಿಂದ, ಕಾಯಿದೆ ಬದ್ಧವಾಗಿ ನಡೆಸಿದ್ದು ಈ ಯಶಸ್ಸು ಕೂಡ ಈ ಸರ್ಕಾರಕ್ಕೆ ಸಲ್ಲುತ್ತದೆ. ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಸರ್ಕಾರದ ಧೋರಣೆ ಏನಿದೆ, ಅದರಲ್ಲಿ ಎಷ್ಟರಮಟ್ಟಿಗೆ ಆಸಕ್ತಿಯನ್ನು ಹೊಂದಿದೆ ಎಂಬುದನ್ನು

ಅಧಿಕಾರಕ್ಕೆ ಬಂದ ಕೂಡಲೇ ನಡೆಸಿದ ಈ ಚುನಾವಣೆಗಳಿಂದ ತಿಳಿದು ಕೊಳ್ಳಬಹುದಾಗಿದೆ. ಈಗ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಈ ಸರ್ಕಾರ ಮಾಡಿದಮೇಲೆ, ಇದರ ಜೊತೆಗೆ ಬಹಳ ದಿವಸಗಳಿಂದ ನೆನೆಗುದಿಗೆ ಬಿದ್ದಿರುವಂಥ ಎ.ಪಿ.ಎಂ. ಸಿ. ಮತ್ತು ಉಳಿದ ಇನ್ನಿತರ ಸಂಘಸಂಸ್ಥೆಗಳ ಚುನಾವಣೆಗಳನ್ನು ಕೂಡ ಬೇಗನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಇನ್ನೂ ಸಾಕಷ್ಟು ವಿಷಯಗಳನ್ನು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಒಂದೊಂದು ಹೇಳಬೇಕೆಂದರೆ, ರೈತರ ಬಗ್ಗೆ ಸಾಕಷ್ಟು ಆದ್ಯತೆಯನ್ನು ಕೊಡಲಾಗಿದೆ. ಅವರ ಬಡ್ಡಿ ಮನ್ನಾ ಮಾಡಿದ್ದು ಮತ್ತು ಬಡ ರೈತರಿಗೆ ಅಕ್ಕಿಯನ್ನು ಹಂಚಿದ್ದು ಹಾಗೂ ಬೆಲೆ ಏರಿಕೆಯ ವಿಚಾರದಲ್ಲಿ ಟನ್ ಓವರ್ ಟ್ಯಾಕ್ಸ್ ತೆಗೆದದ್ದು, ಇವು ರೈತರ ಬಗ್ಗೆ ಕೈಗೊಂಡ ಒಳ್ಳೆಯ ಕಾರ್ಯಕ್ರಮಗಳು ಆಗಿವೆ. ಈ ವಿಷಯಗಳು ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿವೆ. ಇದಲ್ಲದೆ, ಇನ್ನೂ ನಮ್ಮ ರಾಜ್ಯದಲ್ಲಿರತಕ್ಕ ಸಮಸ್ಯೆಗಳು, ಅದು ಕುಡಿಯು ನೀರು ಇರಬಹುದು. ವಿದ್ಯುಚ್ಛಕ್ತಿ ಇರಬಹುದು, ಸಾರಿಗೆ ಇರಬಹುದು, ಇವೆಲ್ಲಾ ವಿಷಯಗಳಿಗೂ ಆದ್ಯತೆಯನ್ನು ಕೊಡಲಾಗಿದೆ. ಈ ವಿಷಯಗಳನ್ನು ಬರೀ ಭಾಷಣದಲ್ಲಿ ಕೂಡದೇ, ಬಜೆಟ್‌ನಲ್ಲೂ ಸಹಿತ ಕಾಣಿಸಿ, ನುಡಿದಂತೆ ನಡೆಯುವ ಸರ್ಕಾರ ಎನ್ನುವ ಧೋರಣೆಯನ್ನು ಕಂಡುಕೊಳ್ಳಲಾಗಿದೆ. ನೀರಾವರಿ ಬಗ್ಗೆಯೂ ಸಹಿತ ಸಾಕಷ್ಟು ಆದ್ಯತೆಯನ್ನು ಕೊಟ್ಟಿದ್ದಾರೆ. ಕೃಷ್ಣಾ ಭಾಗ್ಯ ಜಲ ನಿಗಮ ಯೋಜನೆಯನ್ನು ಹಾಕಿಕೊಂಡು, ಎರಡು ಸಾವಿರ ಇಸವಿಯೊಳಗೆ ಬಚಾವತ್ತ ವರದಿ ಪ್ರಕಾರ, ನೀರಿನ ಬಳಕೆ ಮಾಡುವಂತಥಾದ್ದು ನಮೂದಾಗಿದೆ. ಇದು ನಿಜವಾಗಿಯೂ ಒಳ್ಳೆಯ ವಿಷಯ, ಇದರಿಂದ ರಾಜ್ಯಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಆದ್ದರಿಂದ, ಇದು ಕೃತಿಯಲ್ಲಿ ಬರಲಿ ಎಂದು ಹಾರೈಸುತ್ತೇನೆ. ಇನ್ನು ಮಹಿಳೆಯರಿಗೆ ಮತ್ತು ಹರಿಜನ ಗಿರಿಜನರ ಕಲ್ಯಾಣ ಹೀಗೆ ಸಾಕಷ್ಟು ವಿಷಯಗಳು ಅವರ ಭಾಷಣದಲ್ಲಿ ಪ್ರಸ್ತಾಪವಾಗಿದೆ. ಇನ್ನು ಭಾಷಣದಲ್ಲಿ ನಮೂದು ಮಾಡಿದೆ. ಎಲ್ಲಾ ಮನುಷ್ಯನಿಗೂ ತಲೆಯ ಮೇಲೊಂದು ಸೂರು ಎಂಬಂತೆ ಎಲ್ಲರಿಗೂ ನಿವೇಶನ ಒದಗಿಸಿಕೊಡುವಂಥ ಪ್ರಸ್ತಾಪ ಸಹಿತ ರಾಜ್ಯಪಾಲರ ಭಾಷಣದಲ್ಲಿ ಇದೆ.ನಿಜವಾಗಿಯೂ ಇದು ಬಡವರ ಕಾರ್ಯಕ್ರಮ, ಇದು ಬಹಳ ಅವಶ್ಯ ಇದೆ. ಈ ಕಾರ್ಯಕ್ರಮ ಬರೀ ಭಾಷಣದಲ್ಲಿಯೇ ಅಲ್ಲದೆ, ತೀವ್ರಗತಿಯಲ್ಲಿ ಕೃತಿಯಲ್ಲಿಯೂ ಬರಲಿ ಎಂದು ಹೇಳುತ್ತೇನೆ. ಇನ್ನು ಹೊಸ ಸರ್ಕಾರ ಆಶ್ರಯ ಕಮಿಟಿಯ ಚೇರ್ಮನ್‌ಷಿಪ್ ಬಗ್ಗೆಯೂ ಸಹಿತ, ಈ ಸದನದ ಸದ್ಯರೇ ಆಗಬೇಕೆಂಬ ಸೂಚನೆಯನ್ನು ಇಟ್ಟಿದೆ. ಇನ್ನು ಆರೋಗ್ಯದ ಬಗ್ಗೆ ಶಿಕ್ಷಣದ ಬಗ್ಗೆ ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡಿರುವ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ನಮೂದಾಗಿದೆ. ಅವೆಲ್ಲವೂ ಕೃತಿಯಲ್ಲಿ ಬಂದೇ ತೀರತ್ತವೆಂಬ ಭಾವನೆಯನ್ನು ವ್ಯಕ್ತಮಾಡುತ್ತೇನೆ.

ಹಸಿರು ಕಾರ್ಡು ಇರಬಹುದು, ಬಡ್ಡಿ ಮನ್ನಾ ಮಾಡಿದ್ದು ಇರಬಹುದು ಹೀಗೆ, 3-4 ಅಂಶಗಳ ಬಗ್ಗೆ ಈಗಾಗಲೇ ಬಜೆಟ್‌ನಲ್ಲಿ ಸಹಿತ ದುಡ್ಡನ್ನು ಕಾದಿರಿಸಿ, 1995-96ನೇ ಇಸವಿಯಲ್ಲಿ ಜಾರಿಗೆ ತರತಕ್ಕ ಪ್ರಯತ್ನ ಮಾಡಿದೆ. ಈ ದಿಸೆಯಲ್ಲಿ ಹೇಳುವುದಾದರೆ, ರಾಜ್ಯಪಾಲರ ಭಾಷಣದಲ್ಲಿ ಏನೇನು ನಮೂದು ಮಾಡಿದೆ, ಅವೆಲ್ಲವೂ 1995-96ನೇ ಇಸವಿಯಲ್ಲಿ, ಚಾಚೂ ತಪ್ಪದೆ ಜಾರಿಗೆ ಬರುತ್ತವೆಂಬ ಆಶಾಕಿರಣವನ್ನು ಹೊಂದಿದ್ದೇವೆ. ಈ ದಿಸೆಯಲ್ಲಿ ನಾವೆಲ್ಲರೂ ಸಹಿತ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಬೇಕಾಗುತ್ತದೆ. ನನಗೆ, ಈ ರೀತಿ ವಂದನೆಯನ್ನು ಸಲ್ಲಿಸತಕ್ಕ ಪ್ರಸ್ತಾವದ ಮೇಲೆ ಮಾತನಾಡಲು ಸಮಯ ಕೊಟ್ಟಿದ್ದಕ್ಕೆ, ಅವರಿಗೆ ವಂದನೆಗಳನ್ನು ಸಲ್ಲಿಸಿ,ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೆಪಲ್ಲಿ) : ಸನ್ಮಾನ್ಯ ಅಧ್ಯಕ್ಷರೇ,ಕಳೆದ 4 ತಿಂಗಳಲ್ಲಿ ಜನತಾ ದಳದ ಸರ್ಕಾರ ಎರಡನೇ ಬಾರಿಗೆ ರಾಜ್ಯಪಾಲರ ಭಾಷಣದ ಮೇಲೆ ವಂದನೆಯನ್ನು ಸಲ್ಲಿಸತಕ್ಕ ಚರ್ಚೆಯನ್ನು ಮಾಡುತ್ತಿದ್ದೇವೆ. ಸಾಮಾನ್ಯವಾಗಿ ರಾಜ್ಯಪಾಲರ

ಭಾಷಣದ ಮೇಲೆ ಚರ್ಚೆ ಬಜೆಟ್‌ಗೆ ಮೊದಲು ನಡೆಯಬೇಕಾಗಿತ್ತು. ಅದು ಸರಿಯಾದ ಸಂಪ್ರದಾಯ ಕಾರಣ ಇಷ್ಟೆ, ರಾಜ್ಯಪಾಲರ ಭಾಷಣ ಎಂದು ಹೇಳಿದರೆ, ಸರ್ಕಾರದ ಒಂದು ಧೋರಣೆ ಬಜೆಟ್ ಎಂದು ಹೇಳಿದರೆ, ಸರ್ಕಾರದ ಕಾರ್ಯಕ್ರಮದ ಕಲ್ಪನೆ. ಧೋರಣೆ ಹೇಗಿರುತ್ತದೋ ಅದರ ಆಧಾರದ ಮೇಲೆ ಸರ್ಕಾರದ ಕಾರ್ಯಕ್ರಮಗಳು ನಡೆಯುತ್ತವೆ. ಮೊದಲಿಗೆ, ಧೋರಣೆ ಎನ್ನತಕ್ಕ ವಿಷಯವನ್ನು ಚರ್ಚೆ ಮಾಡದೆ, ಧೋರಣೆ ಏನು ಎನ್ನುವುದನ್ನೇ ತಿಳಿಯದೇ, ಕಾರ್ಯಕ್ರಮ ರೂಪಿಸುವುದು ಸಾಧ್ಯವಿಲ್ಲವೆನ್ನತಕ್ಕಂಥಾದ್ದು ನನ್ನಅಭಿಪ್ರಾಯ ಆದ್ದರಿಂದ ರಾಜ್ಯಪಾಲರ ಭಾಷಣದ ಮೇಲೆ ಮೊದಲು ಚರ್ಚೆಯಾಗಬೇಕಾಗಿತ್ತು. ಆಮೇಲೆ ಬಜೆಟ್ ಮೇಲೆ ನಡೆಯಬೇಕಾಗಿತ್ತು. ಈ ನಾಲ್ಕು ತಿಂಗಳಲ್ಲಿ, ಎರಡನೇ ಸಲ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುವಂಥಾದ್ದು ನಡೆದಿದೆ. ಪ್ರಥಮ ಸಂದರ್ಭದಲ್ಲಿ, ರಾಜ್ಯಪಾಲರ ಭಾಷಣದಲ್ಲಿ ಹೇಳಿದಂಥ ಹೆಚ್ಚಿನ ಅಂಶಗಳೇ, ಇದರಲ್ಲಿಯೂ ಪ್ರಸ್ತಾಪವಾಗಿದೆ. ಯಾವುದೇ ರೀತಿಯ ಹೊಸ ವಿಚಾರಗಳು ಇದರಲ್ಲಿ ಇಲ್ಲ. ಮತ್ತು ನಿರ್ದಿಷ್ಟವಾದ ಗುರಿ ಇಲ್ಲ. ಏನನ್ನು ಮಾಡಬೇಕೆಂಬ, ಯಾವ ಸಂದರ್ಭದಲ್ಲಿ, ಯಾವ ಸಮಸ್ಯೆಯನ್ನು, ಯಾವ ಹಂತದಲ್ಲಿ ,ಹೇಗೆ ನಿವಾರಣೆ ಮಾಡಬೇಕೆಂಬ ಬಗ್ಗೆ ಸ್ಪಷ್ಟವಾದ ಗುರಿ ಕೂಡ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ,ನಾನು ನಿವಾರಣೆ ಮಾಡಬೇಕೆಂಬ ಬಗ್ಗೆ ಸ್ಪಷ್ಟವಾದ ಗುರಿ ಕೂಡ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ನಾನು ಬಜೆಟ್ ಮೇಲೆ ಭಾಷಣ ಮಾಡುವಾಗ, ಎರಡು ಪ್ರಮುಖ ವಿಷಯಗಳನ್ನು ಈ ಬಜೆಟ್‌ನಲ್ಲಿ ಯಾವುದೇ ಕಾರ್ಯಕ್ರಮ ಇಲ್ಲ. ನಾನು ಬಜೆಟ್ ಮೇಲೆ ಮಾತನಾಡುವಾಗ, ಹೆಚ್ಚಿನ ಅಂಶ ಭೌತಿಕ ದಾರಿದ್ರ್ಯವನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಏನಾದರೂ ಕಾರ್ಯಕ್ರಮ ಹಾಕಿದೆಯೇ ಎನ್ನುವುದರ ಬಗ್ಗೆ ಚರ್ಚೆ ಮಾಡಿದೆ ಮತ್ತು ಈ ಭೌತಿಕ ದಾರಿದ್ರ್ಯವನ್ನು ನಿವಾರಣೆ ಮಾಡುವ ನಿಟ್ಟಿನಲ್ಲಿ ಸರ್ಕಾರದ ಯಾವುದೇ ರೀತಿಯ ಧೋರಣೆ ಸ್ಪಷ್ಟವಾಗಿಲ್ಲವೆಂದು ಹೇಳಿದೆ. ಎರಡನೇ ಅಂಶ, ಈ ರಾಜ್ಯದ ಭೌತಿಕ ದಾರಿದ್ರ್ಯವನ್ನು ಹಿಮ್ಮೆಟ್ಟಿಸುವುದರಲ್ಲಿ ಕಾರ್ಯಕ್ರಮ ಇಲ್ಲದೇ ಇರುವುದು ಒಂದು ಕಡೆಯಾದರೆ, ಇನ್ನೊಂದುಕಡೆ ಈ ಭೌತಿಕ ದಾರಿದ್ರ್ಯ ನಮ್ಮಲ್ಲಿ ಎಷ್ಟು ಹೆಚ್ಚಾಗುತ್ತಿದೆ ಎಂದು ಹೇಳಿದರೆ, ಇತ್ತೀಚೆಗೆ, ಸರ್ಕಾರ ಮಹಾಚೈತ್ರ ಪುಸ್ತಕವನ್ನು ಹಿಂದಕ್ಕೆ ತೆಗೆದುಕೊಂಡಿರತಕ್ಕಂಥಾದ್ದು ಸ್ಪಷ್ಟವಾದ ನಿದರ್ಶನ. ಈ ಸರ್ಕಾರಕ್ಕೆ ನಮ್ಮ ರಾಜ್ಯದಲ್ಲಿ, ಭೌತಿಕ ಬೆಳವಣಿಗೆಯಾಗತಕ್ಕ ದೃಷ್ಟಿಯಾಗಲೀ ಅಥವಾ ಅದನ್ನು ಬೆಳೆಸತಕ್ಕ ವಿಷಯವಾಗಲೀ ಈ ಸರ್ಕಾರದ ಮುಂದೆ ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಪಂಯಿಂಟ್ ಆಫ್ ಆರ್ಡರ್ ನಾನು ಸಭಾಧ್ಯಕ್ಷರನ್ನು ಕೇಳುವುದು ಇಷ್ಟೆ. ಪುಸ್ತಕ ಯಾರಾದರೂ ಬರೆಯಬಹುದು. ಏನು ಬೇಕಾದರೂ ಬರೆಯಬಹುದು. ಯಾವುದನ್ನು ಇಡಬೇಕೆಂದು ಇದ್ದರೆ, ಅದನ್ನು ಮಾಡುವುದಕ್ಕೆ ಸಾಧ್ಯವಿದೆ. ಆದರೆ, ಪುಸ್ತಕ ಬರೆದಾಗ, ಒಂದು ಸಂಪ್ರದಾಯವನ್ನು ಇಟ್ಟು, ಆ ಸಂಪ್ರದಾಯಕ್ಕೆ ಅನ್ವಯವಾಗುವಂತೆ ಬರೆಯಬೇಕು. ಇದರಲ್ಲಿ ಬಸವಣ್ಣನವರ ಬಗ್ಗೆ, ಅಲ್ಲಮ ಪ್ರಭುಗಳ ಬಗ್ಗೆ ಅಕ್ಕಮಹಾದೇವಿಯರ ಬಗ್ಗೆ ಮತ್ತು ಅನೇಕ ಶರಣರ ಬಗ್ಗೆ ಬರೆದಾಗ, ಈ ಪುಸ್ತಕವನ್ನು ಪಠ್ಯಪುಸ್ತಕ ಸಮಿತಿಯವರು ನೋಡದೇ ಕಣ್ಣುಮುಚ್ಚಿ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವನ್ನಾಗಿ ಇಟ್ಟಾಗ, ಅದನ್ನು ತೆಗೆಯಬೇಕಾದ ಸಂದರ್ಭ ಬಂದುದನ್ನು ನೀವು ಸರಿ ಎಂದು ಹೇಳುತ್ತೀರಾ ಅಥವಾ ಏನುಬೇಕಾದರೂ ಬರೆದು, ಅದನ್ನು ಮಕ್ಕಳಿಗೆ ಕೊಡಬಹುದು ಎಂದು ಹೇಳುತ್ತೀರಾ? ಹಾಗಿದ್ದರೆ ಈಗ ಬ್ಲೂ ಫಿಲಂ ಬಂದಿದೆ, ಅದನ್ನೂ ಮಕ್ಕಳಿಗೆ ಇಟ್ಟುಬಿಡಿ....

(ಗೊಂದಲ)

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯಸದಸ್ಯರು, ಅವರ ಅಭಿಪ್ರಾಯವನ್ನು ಹೇಳುತ್ತಿದ್ದಾರೆ, ಹೇಳಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಅಭಿಪ್ರಾಯವನ್ನು, ಅವರು ಹೇಳಬಹುದು, ಆದರೆ ನಮ್ಮ ಅಭಿಪ್ರಾಯವನ್ನು, ನಾವು ಹೇಳುತ್ತೇವೆ. ಈ ರೀತಿಯಾದರೆ ಹೇಗೆ? ಅವರು ನಾವು ಮಾತನಾಡುವ ಹಕ್ಕನ್ನು ಕಸಿದುಕೊಳ್ಳುತ್ತಿದ್ದಾರೆ. ತ ಪಾಯಿಂಟ್ ಆಫ್ ಆಡರ್ ಎಂದು ಹೇಳಬೇಕು. ಅವರು ಪಾಯಿಟ್ ಆಫ್ ಆರ್ಡರ್ ರೈಸ್ ಮಾಡಿ, ಅಷ್ಟಕ್ಕೆ ಬಿಟ್ಟರೆ ಹೇಗೆ, ನಾವು ಏನೇನು ಹೇಳಬಾರದು ಎಂಬುದನ್ನು ಅವರು ಹೇಳಲಿ

ಶ್ರೀಮತಿ ಪ್ರಮೀಳಾ ನೇಸರ್ಗಿ : ಸದನದಲ್ಲಿ ಹೇಳಬೇಕಾದರೆ ಮೂಲಭೂತ ಹಕ್ಕು Freedom of speech with resriction. ಎಲ್ಲಾ ಜವಾಬ್ದಾರಿಯಿಂದ ಮಾತನಾಡಬೇಕು.

ಶ್ರೀ ಹೆಚ್. ಶಿವಪ್ಪ : ನಾವು ಹಳ್ಳಿಗಾಡಿನಿಂದ ಬಂದವರು. ಇಲ್ಲಿ ಎಂಥೆಂಥವೋ ಹೊಸ ಪದಗಳು ಬರುತ್ತಿವೆ, ಈ ಪದಗಳಿಗೆ ಅರ್ಥ ಗೊತ್ತಿಲ್ಲ, ಭಾವನೆ ಗೊತ್ತಿಲ್ಲ ಈ ಪದಗಳನ್ನು ತೆಗೆದು ಹಾಕಿ. ಬ್ಲೂ ಫಿಲಂ ಎನ್ನುವುದನ್ನು ಸದಸ್ಯರಾದ ಪ್ರಮೀಳಾ ನೇಸರ್ಗಿಯವರು ಬಳಸಿದ್ದಾರೆ. ಅದನ್ನು ಕಡತದಿಂದ ತೆಗೆಯಿರಿ. That itself constitutes unparlimontary. That is not the word to be used here. please expunge it.

(ಗೊಂದಲ)

2 ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಪುಸ್ತಕ ತಂದಿದ್ದೇನೆ. ಅದರಲ್ಲಿ ಏನು ಇದೆ ಅಂತ ನಾನು ಹೇಳುತ್ತೇನೆ. ನನಗೆ ಅವಕಾಶ ಕೊಡಬೇಕು. ಕರ್ನಾಟಕ ರಾಜ್ಯದಲ್ಲಿ ಭೌತಿಕ ದಾರಿದ್ರ್ಯವನ್ನು ಮೊಟಕುಗೊಳಿಸಲಿಕ್ಕೆ ಸರ್ಕಾರ ಒಂದು ಕಡೆ ಪ್ರಯತ್ನ ಮಾಡುತ್ತಿದ್ದರೆ ಭೌತಿಕ ದಾರಿದ್ರ್ಯವನ್ನು ಬೆಳೆಸಲೇಬಾರದು ಎಂದು ಹೇಳತಕ್ಕಂಥ ಶಕ್ತಿಗಳು ಪ್ರಾಭಾವದಿಂದ ಇವತ್ತು ಮಹಾಚೈತ್ರದ ಪುಸ್ತಕವನ್ನು ಹಿಂದಕ್ಕೆ ತೆಗೆದುಕೊಂಡಿದ್ದಾರೆ. ಆ ಮಹಾಚೈತ್ರದ ಪುಸ್ತಕದಲ್ಲಿ ಬಸವಣ್ಣನವರ ಬಗ್ಗೆ ಅವಹೇಳನಕರವಾದ ಮಾತುಗಳನ್ನು ಹೇಳಿದ್ದಾರೆ ಎಂದು ನಾನು ಹೇಳತಕ್ಕಂಥಾದ್ದು. ನಾನು ಪುಸ್ತಕ ತಂದಿದ್ದೇನೆ. ಇಲ್ಲಿ ನಾನು ಈ ವಿಷಯವನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. Mr.Speaker : let us not go into it.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ತಾವು ನನ್ನ ಅಭಿಪ್ರಾಯವನ್ನು ಹೇಳಲು ಬಿಡಬೇಕು.

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೇ,ನನ್ನದೊಂದು ಕ್ರಿಯಾಲೋಪ. ಅವರು ಈ ವಿಷಯದ ಬಗ್ಗೆಬೇಕಾದರೆ ಅರ್ಧ ಗಂಟೆ ಕಾಲ ಚರ್ಚೆಮಾಡಲಿ ಬೇಕಾದರೆ. ಬೇಡ ಎಂದು ಹೇಳುವುದಿಲ್ಲ ಒಂದು ಸಮುದಾಯವನ್ನು ಹಿಯಾಳಿಸಿರತಕ್ಕಂಥಾದ್ದು ಅದರಲ್ಲಿ ಇದೆ. ನಾನು ಹೇಳುತ್ತೇನೆ ಅದು ಎಲ್ಲಿ ಅಂತ. ಬಸವಣ್ಣನವರನ್ನು ಅವರ ಶಿಕ್ಷ್ಯರೇ ಒಪ್ಪದೇ ಇರತಕ್ಕಂಥ ಒಂದು ಪರಿಸ್ಥಿತಿ ಇದರಲ್ಲಿ ಬರುತ್ತದೆ. ಅಕ್ಕಮಹಾದೇವಿಯನ್ನು ಒಬ್ಬ ಸಾಮಾನ್ಯಾವಾಗಿರತಕ್ಕಂಥ ಹೆಣ್ಣು ಮಗಳಿಗೆ ಹೋಲಿಸಿದ್ದಾರೆ ಅದರಲ್ಲಿ ಅವರು. ಅಲ್ಲಮ್ಮ ಪ್ರಭುವನ್ನು ಹಿಯಾಳಿಸ್ಸಿದ್ದಾರೆ. ಅದರಲ್ಲಿ ಹೆಚ್ಚಿನದೇನೂ ಅನಾಹುತ ವಾಗತಕ್ಕಂಥಾದ್ದು ಇಲ್ಲ ನಾನು ಓದಿದ್ದೇನೆ. ಆದರೆ ಬಸವಣ್ಣನವರನ್ನು ವಿಶ್ವಾಸ ಮಾನವ ಅಂತ ತತ್ವವನ್ನು ಭೋದನೆ ಮಾಡಿದಂಥ ಒಬ್ಬ ಮಹಾಪುರುಷನನ್ನು ಕೇವಲ ಒಬ್ಬ ಅವರ ಅನುಯಾಯಿಯಾಗಿರತಕ್ಕಂಥವನ್ನು ನಾನು ಒಪ್ಪುವುದಿಲ್ಲ. ಬಸವಣ್ಣನವರನ್ನು ಎನ್ನತಕ್ಕಂಥ ಮಾತು ಅದರಲ್ಲಿ ಬರುವುದರಿಂದ ಇದರಿಂದ ಇಡೀ

ಸಮುದಾಯಕ್ಕೆ ನೋವಾಗಿದೆ. ಆ ಬಗ್ಗೆ ಚರ್ಚೆ ಮಾಡುವುದಿದ್ದರೆ ಪ್ರತ್ಯೇಕವಾಗಿ ಒಂದು ದಿನ ಚರ್ಚೆ ಮಾಡಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಮಾತನಾಡಲಿ ನಾನು ಬೇಡ ಅಂತ ಹೇಳುವುದಿಲ್ಲ. ಮಾನ್ಯ ಅಧ್ಯಕ್ಷರೇ ನಾನುಪುಸ್ತಕವನ್ನು ಕೂಡ ತಂದಿದ್ದೇನೆ. ಇದರಲ್ಲಿ ಬರವಣ್ಣನವರಿಗೆ ಅವಮಾನ ವಾಗತಕ್ಕಂಥ ಯಾವುದೇ ಒಂದು ಅಕ್ಷರ ಇಲ್ಲ. ನಾನು ಈ ಪುಸ್ತಕವನ್ನು ಓದುವುದಿಲ್ಲ. ಅದಕ್ಕೆ ಅವಕಾಶ ಬಹುಶಃ ತಾವು ಕೊಡುವುದಿಲ್ಲ. ಒಂದು ಅಕ್ಷರ ಇದರಲ್ಲಿ ಬಸವಣ್ಣನವರ ಅನುಯಾಯಿಗಳಾಗಿ ಮಡಿವಾಳಮಾಚುದೇವ ಆಗಬಹುದು ಅಡಪದ ಅಪ್ಪಯ್ಯ ಆಗಬಹುದು ಅವರಿಬ್ಬರು ಮಾತನಾಡತಕ್ಕಂಥ ಚರ್ಚೆಯಲ್ಲಿ ಇದರಲ್ಲಿ ಯಾವುದೇ ಅಂತಹ ಒಂದು ಅಕ್ಷರ ಕೂಡ ಇಲ್ಲ. ಎರಡನೆಯದಾಗಿ ಬಸವಣ್ಣನವರ ಬಗ್ಗೆ ಇಲ್ಲಿ ಅವಹೇಳನಕರವಾದಂತಹ ಮಾತುಗಳನ್ನು ಇಲ್ಲಿ ಯಾರಾದರೂ ಹೇಳಿದ್ದರೆ ಬಸವಣ್ಣನ ವಿರೋಧಗಳು ಬಿಜ್ಜಳನ ಅಸ್ಥಾನದಲ್ಲಿ ಕಲ್ಯಾಣದಲ್ಲಿದಂತಹ ಬಸವಣ್ಣನ ವಿರೋಧಗಳು ಹೇಳಿರುವಂಥಾದ್ದು ಅಷ್ಟು ಬಿಟ್ಟರೆ ಬೇರೆ ಯಾರೂ ಹೇಳಲಿಲ್ಲ. ಈ ಎರಡು ಪ್ರಶ್ನೆಗಳು ಇದರಲ್ಲಿ ಪ್ರಮುಖವಾಗಿ ಬರುತ್ತದೆ. ಒಂದು ಸರ್ಕಾರದ ಕ್ರಮದ ಪ್ರಶ್ನೆ. ಇನ್ನೊಂದು ಅಭಿವ್ಯಕ್ತ ಸ್ವಾತಂತ್ರ್ಯದ ಪ್ರಶ್ನೆ. ಇನ್ನೊಂದು ಚರಿತ್ರೆಯನ್ನು ತನ್ನ ಮೂಗಿಗೆ ನೇರವಾಗಿ ಬರೆಯಬೇಕೆಂದು ಒತ್ತಾಯ ಮಾಡತಕ್ಕಂಥ ಪಟ್ಟಭದ್ರ ಹಿತಾಸಕ್ತಿಗಳು ಪ್ರಶ್ನೆ. ಇವು ಮೂರು ಪ್ರಶ್ನೆಗಳು ಇದರಲ್ಲಿ ಉದ್ಭವವಾಗುತ್ತದೆ.

ಚರಿತ್ರೆಯಲ್ಲಿ ಒಂದನೆಯದು, ಚರಿತ್ರೆಯಲ್ಲಿ ತಮಗೆ ತಿಳಿದ ಹಾಗೆ ಹಲವಾರು ಘಟನೆಗಳು ನಡೆಯುತ್ತವೆ. ಎಲ್ಲೂ ತಮ್ಮ ಮೂಗಿಗೆ ನೇರವಾಗಿ ನಡೆಯಬೇಕು ಅಂತ ಎಲ್ಲೂ ಇಲ್ಲ. ಅಥವಾ ಚರಿತ್ರೆಯಲ್ಲಿ ನಡೆದಂಥಥ ಘಟನೆಗಳು ನನ್ನ ಮೂಗಿನ ನೇರಕ್ಕೆ ಇಲ್ಲ ಅಂತ ಎನ್ನುವವ ಕಾರಣಕ್ಕೋಸ್ಕರ ಇಡೀ ಇತಿಹಾಸವನ್ನು ಅಲ್ಲಗಳೆಯತಕ್ಕಂಥಾದ್ದು ನಾವು ಎಲ್ಲರೂ ಸೇರಿ ಇತಿಹಾಸಕ್ಕೆ ಮಾಡಿದಂಥ ದ್ರೋಹ ಆಗುತ್ತದೆ. ಎರಡನೆಯದು ಇತಿಹಾಸ ನನ್ನ ಮೂಗಿನ ನೇರಕ್ಕೆ ಆಗಬೇಕು ಎಂದು ಹೇಳತಕ್ಕಂಥಾದ್ದು ಒಂದು ಫ್ಯಾಸಿಸ್ಟ್ ಧೋರಣೆ ಆಗುತ್ತದೆ. ಇತಿಹಾಸವನ್ನು ಯಾರ ಮೂಗಿನ ನೇರಕ್ಕೆ ಬರೆಯಲು ಸಾಧ್ಯಇಲ್ಲ. ಮಾನ್ಯ ಅಧ್ಯಕ್ಷರೇ, ಇವತ್ತುಅಂತ ಹೇಳಿ ಹೋರಾಟ ಮಾಡುತ್ತಿದ್ದಾರೆ ಅದೇ ಒಬ್ಬರು ಮಾತೆ ಮಹಾದೇವಿ ಕಲ್ಯಾಣ ಕ್ರಾಂತಿ ಎನ್ನತಕ್ಕಂಥ ಪುಸ್ತಕದಲ್ಲಿ ಬುದ್ಧಿಗೇಡಿ ಬಸವ ಅಂತ ಕರೆಯುತ್ತಾರೆ. ಅವತ್ತು ಯಾರೂ ಮಾತನಾಡಲಿಲ್ಲ ಇವರು. ಅನಾಚಾರಿ ಬಸವ ಅಂತ ಕಲ್ಯಾಣ ಕ್ರಾಂತಿ .ಎನ್ನತಕ್ಕಂಥ ಪುಸ್ತಕದಲ್ಲಿ ಹೇಳಿದ್ದಾರೆ ಅವತ್ತು ಯಾರೂ ಬಸವಣ್ಣನವರಿಗೆ ಅವಮಾನ ಮಾಡಿದ್ದಾರೆಂದು ಮಾತನಾಡಲಿಲ್ಲ. ಮಹಾಚೈತ್ರಕ್ಕಿಂತ ಹಿಂದೆ ಬರೆದಂತಹ ಪುಸ್ತಕ ಇದು. ಕಲ್ಯಾಣ ಕ್ರಾಂತಿ ಯಾರು ಆ ಕಲ್ಯಾಣ ಕ್ರಾಂತಿಯನ್ನು ಬರೆದರೋ ಅವರು ಇವತ್ತು ಬಸವಣ್ಣನ ಬಗ್ಗೆ ಅವಹೇಳನ ಮಾಡಿದ್ದಾರೆ ಅಂತ ಹೋರಾಟ ಮಾಡುತ್ತಿದ್ದಾರೆ. ಅದರ ಬಗ್ಗೆ ಮಾತನಾಡಲಿಲ್ಲ, ಮೂರನೇಯದಾಗಿ ಒಬ್ಬ ಲೇಖಕನಿಗೆ ನನಗೆ ಇಷ್ಟ ಬಂದ ರೀತಿಯಲ್ಲಿ ಬರೆಯಬೇಕು ಅಂತ ಇರುವುದಿಲ್ಲ. ಎರಡನೆದಾಗಿ ಒಬ್ಬ ಲೇಖಕನಿಗೆ ಲೇಖಕನಾಗಿ ಸಾಮಾಜಿಕ ಜವಾಬ್ದಾರಿ ಇರುತ್ತದೆ.

SRI H SHIVAPPA : Liberty is not a licence.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ಜವಾಬ್ದಾರಿ ಹಿನ್ನಲೆಯಲ್ಲಿಯೇ ಆತನು ಕೂಡ ಬರೆಯಬೇಕಾಗುತ್ತದೆ. ಬೇಜವಾಬ್ದಾರಿಯಾಗಿ ಬರೆಯುವುದಕ್ಕೆ ಆಗುವುದಿಲ್ಲ. ಆದರೆ ಒಬ್ಬ ಲೇಖಕ ಬರೆದಿದ್ದು ಇಡೀ ಸಮಾಜದಲ್ಲಿರತಕ್ಕಂಥ ಪ್ರತಿಯೊಬ್ಬ ಮನುಷ್ಯನಿಗೂ ಒಪ್ಪಿಗೆ ಆಗಬೇಕೆಂದು ಇಲ್ಲ. ಆತನ ಅಭಿವ್ಯಕ್ತ ಸ್ವಾತಂತ್ರ್ಯದ ಪ್ರಶ್ನೆ ಒಂದು ಕಡೆ ಆದರೆ ಸಮಾಜವನ್ನು ನೋಡತಕ್ಕಂಥ ದೃಷ್ಟಿ ಕೋನಗಳು ಬೇರೆ ಬೇರೆಯಾಗಿರುತ್ತವೆ.

ಇಂಥ ಒಂದು ಸಂದರ್ಭದಲ್ಲಿ ಸರ್ಕಾರ ಈ ಪುಸ್ತಕವನ್ನು ಪಠ್ಯಪುಸ್ತಕವಾಗಿ ಆಯ್ಕೆ ಮಾಡಲಿಕ್ಕೆ ಒಂದುಸಮಿತಿಯನ್ನು ರಚನೆ ಮಾಡಿತ್ತು. ಸರ್ಕಾರ ಆಯ್ಕೆ ಮಾಡಿರತಕ್ಕಂಥ ಪುಸ್ತಕ ಇದು ಅಲ್ಲ. ವಿಶ್ವವಿದ್ಯಾನಿಯದವರು ಆ ಪುಸ್ತಕವನ್ನು ಆಯ್ಕೆ ಮಾಡಿರತಕ್ಕಂಥ ಪುಸ್ತಕ ಇದು ಅಲ್ಲ. ವಿಶ್ವವಿದ್ಯಾನಿಲಯದವರು ಆ ಪುಸ್ತಕವನ್ನು ಆಯ್ಕೆ ಮಾಡಲಿಕ್ಕೆ ರಚನೆ ಮಾಡಿದಂತಹ ಸಮಿತಿಯಲ್ಲಿ ಅದರ ಅಧ್ಯಕ್ಷರು ಡಾಕ್ಟರ್ ಸಿದ್ದಯ್ಯ ಪುರಾಣಿಕ್. ಅವರಿಗೆ ಬಸವಣ್ಣನವರ ಮೇಲೆ ಇದ್ದ ಭಕ್ತಿಮೇಲೆ ಇವತ್ತು ಯಾರೂ ಪ್ರಶ್ನೆ ಮಾಡುವುದಕ್ಕೆ ಸಾಧ್ಯ ಇಲ್ಲ. ಅಂತಹವರು ಅಧ್ಯಕ್ಷರಾಗಿದ್ದಂಥ ಒಂದು ಸಮಿತಿಯೇ ಆಯ್ಕೆ ಮಾಡಿದಂತಹ ಒಂದು ಪುಸ್ತಕ. ಇದು ಈ ಪುಸ್ತಕವನ್ನು ಬರೆದಿದ್ದು 10 ವರ್ಷಗಳ ಹಿಂದೆ. ಎರಡು ಮೂರು ವರ್ಷಗಳಾದ ನಂತರ ಈ ಪುಸ್ತಕದಲ್ಲಿರುವ ಹುಳಕನ್ನು ನೋಡಿದ್ದಾರೆ. ಎನ್ನತಕ್ಕಂಥ ಅಂಶವನ್ನು ಇವತ್ತು ಹೇಳುತ್ತಾ ಇದ್ದಾರೆ. ಪಠ್ಯಪುಸ್ತಕ ಸಮಿತಿಯವರು ಇದನ್ನು ಆಯ್ಕೆ ಮಾಡಿದಾಗ ಯಾರೂ ಆ ಬಗ್ಗೆ ಅಕ್ಷೇಪಣೆಯನ್ನು ಎತ್ತಲಿಲ್ಲ. ಈ ಪುಸ್ತಕದ ಆಗ್ಗೆ ಹಲವಾರು ಭಿನ್ನಾಭಿಪ್ರಾಯಗಳು ಬಂದಾಗ ಅದನ್ನು ಪರಿಶೀಲನೆ ಮಾಡಿ ಅದನ್ನು ಪುಸ್ತಕವಾಗಿ ಮಾಡಬೇಕೇ ಅಥವಾ ಬಿಡಬೇಕೇ ಎನ್ನತಕ್ಕಂಥ ಅಲೋಚನೆ ಸರ್ಕಾರಕ್ಕೆ ಬಂದು ಅದಕ್ಕೆ ಸಲಹೆ ಕೊಡಲಿಕ್ಕೆ ಒಂದು ಸಮಿತಿಯನ್ನು ರಚನೆ ಮಾಡಿದ್ದೇವೆ ಎಂದು ಹೇಳಿ ಸರ್ಕಾರ ಆ ಸಮಿತಿಯವರು ಅಭಿಪ್ರಾಯವನ್ನು ಕೊಡುವುದಕ್ಕೆ ಮೊದಲೇ ಆ ಪುಸ್ತಕವನ್ನು ಪಠ್ಯಪುಸ್ತಕ ಅಲ್ಲವಾಗಿ ರದ್ದು ಮಾಡಿರತಕ್ಕಂಥಾದ್ದು ಇದು ಕಾನೂನಿನ ದೃಷ್ಟಿಯಿಂದ ಕೂಡ ಅಥವಾ ವಿಶ್ವವಿದ್ಯಾನಿಲಯಗಳ ಸ್ವಾಯುತ್ತತೆ ಅಧಿಕಾರ ದೃಷ್ಟಿಯಿಂದ ಕೂಡ ಇದು ಸರಿಯಲ್ಲ. ಇವತ್ತು ಮಹಾಚೈತ್ರದ ಒಂದು ಪುಸ್ತಕದ ಪ್ರಶ್ನೆ ಅಲ್ಲ. ಇಡೀ ಸರ್ಕಾರದ ಧೋರಣೆ ಪ್ರಶ್ನೆ ಇದು. ಸರ್ಕಾರ ಏನು ಹೇಳುತ್ತದೆ. ನಾನು ಇದರ ಬಗ್ಗೆ ಯಾವುದೇ ವಿಧವಾದಂಥ ಕ್ರಮವನ್ನು ತೆಗೆದುಕೊಂಡಿಲ್ಲ. ಅದು ರಾಜ್ಯಪಾಲರು ತೆಗೆದುಕೊಂಡಿರತಕ್ಕಂಥ ಕ್ರಮ ಆದ್ದರಿಂದ ಅದಕ್ಕೂ ನಮಗೂ ಯಾವುದೇ ರೀತಿಯಾಗಿರತಕ್ಕಂಥ ಸಂಬಂಧ ಇಲ್ಲ ಎನ್ನತಕ್ಕಂಥಥ ಮಾತನ್ನು ಹೇಳುತ್ತಾರೆ. ಸರ್ಕಾರದ ಆಜ್ಞೆಸ್ವಾಮಿ. 09ನೇ ತಾರೀಖು ಮಾರ್ಚಿ ಅದರಲ್ಲಿ ಈ ರೀತಿ ಹೇಳುತ್ತದೆ.

Government in their report dated 8th March 1995 have reported that seven swamijis are on the hunger strike in Bidar agitating forr the withdrawal of the book entitled 'Maha Chaitra' leading to grave law and order situation. The report is based on the message received from the Deputy Commissioner, Bidar District,Government have reviewed the situation prevailing in the District, in consulation with the principal secretary,Home Department and Additional Director General of police (Intelligence). Government considering the overall sitution in the matter have recommended His Excellency the chancellor,offf the Head of the University under section 7(2) of the karnataka state Universities Act,1976 to advice the vice chancellors of Gulbarga and Kuvempu Universities to withdrow the book in the 'Maha Chaitra ' immediately in exercise of the power vested in the vice Chancellor under Section 12(5) of the Karnataka state universities Act of 1976 to prevent grave deterioration in the law and order situation His Excellency the Chancllor has considered the advice tendered by the Government has considered the advise tendered by the Government and in exercise of the power vested in him under section 10(2) of the K.S.U.Act of 1976, as Head of the university has advised you to exerise

thee power vested in you as vice chancellor under section 12(5) of the K.S.U.Act 1976 for withdrawal of the text book entiteled 'Maha Chaitra ".

ಇದು ಸರ್ಕಾರ ಹೇಳುತ್ತಾ ಇರತಕ್ಕಂಥಾದ್ದು ಇವತ್ತು. ಛಾನ್ಸಲರ್ ಆಗಿ ರಾಜ್ಯಪಾಲರು ಮಾಡಿರತಕ್ಕಂಥ ಕೆಲಸ ಇದು ಅಂತ ಹೇಳಿ. ಸರ್ಕಾರ ಇವತ್ತು ತಪ್ಪು ಮಾಹಿತಿಯನ್ನು ಕೊಡುತ್ತಿದೆ. ಒಂದು ಕಡೆ ಕಾನೂನಿನ ದೃಷ್ಟಿ ಇನ್ನೊಂದು ಕಡೆ ಅಭಿವ್ಯಕ್ತಿ ಸ್ವಾತಂತ್ರ್ಯದ ದೃಷ್ಟಿ. ಇನ್ನೊಂದು ಕಡೆ ಚರಿತ್ರೆಯನ್ನು ತನ್ನ ಮೂಗಿನ ನೇರಕ್ಕೆ ಬರೆಯಬೇಕೆನ್ನುವ ದೃಷ್ಟಿ. ಈ ಮೂರು ಪ್ರಜಾಪ್ರಭುತ್ವ ವಿರೋಧಿಧೋರಣೆಗಳನ್ನು ಪ್ರತಿಪಾದನೆ ಮಾಡುತ್ತಾ ಇರತಕ್ಕಂಥ ಶಕ್ತಿಗಳು ಇವತ್ತು ಈ ಪುಸ್ತಕವನ್ನು ವಾಪಸ್ಸ್ ಪಡೆದಿದೆ. ಈ ಪುಸ್ತಕವನ್ನು ವಾಪಸ್ಸ್ ಪಡೆದಿರತಕ್ಕಂಥ ಪ್ರಶ್ನೆ ಅಲ್ಲ.

3.40 ಪಿ.ಎಂ

ಇದರ ಹಿಂದೆ ಇರತಕ್ಕಂಥ ತಾತ್ವಿಕ ಧೋರಣೆಯನ್ನು ನಾವು ನೋಡಬೇಕಾಗುತ್ತದೆ. ನನಗೆ ತಿಳಿದ ಮಟ್ಟಿಗೆ ಬಹುತೇಕವಾಗಿ ಕರ್ನಾಟಕ ರಾಜ್ಯದಲ್ಲಿ ಭೌತಿಕ ದಾರಿದ್ರ್ಯವನ್ನು ಬೆಳೆಸಿ ಮನುಷ್ಯನ ತಲೆಯಲ್ಲಿ ಆಲೋಚನೆಯನ್ನು ಬೆಳೆಯುದ ಹಾಗೆ ತನ್ನ ಮೂಗಿಗೆ ನೇರವಾಗಿ ಎಲ್ಲವೂ ನಡೆಯಬೇಕು ಎನ್ನತಕ್ಕಂಥ ಆ ಭೌತಿಕ ದಾರಿದ್ರ್ಯವನ್ನು ಬೆಳೆಸತಕ್ಕಂಥ ಶಕ್ತಿಗಳು ಇವತ್ತು ಮಹಾಚೈತ್ರ ಪುಸ್ತಕವನ್ನು ವಾಪಸ್ಸ್ ಪಡೆಯಲಿಕ್ಕೆ ಇವತ್ತು ಸರ್ಕಾರದ ಮೇಲೆ ಒತ್ತಾಯ ತಂದಿದ್ದಾರೆ. ಸರ್ಕಾರ ಅವರ ಒತ್ತಾಯಕ್ಕೆ ಮಣಿದಿದೆ. ಇವತ್ತಿನದಿವಸ ಕಾನೂನಿನ ಪರಿಸ್ಥಿತಿಯಲ್ಲಿ ನೋಡಿ. ಕಾನೂನಿನ ಪರಿಸ್ಥಿತಿಯ ಬಗ್ಗೆ ನಾನು ಮಾತನಾಡುವುದಿಲ್ಲ. ಕರ್ನಾಟಕ ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ನಿನ್ನೆ ಮಾನ್ಯ ಸದಸ್ಯರಾದ ಜೀವರಾಜ ಆಳ್ವರವರು ಮಾತನಾಡುವಾಗ ಹೇಳಿದರು. ಹಾಗಾದರೆ ತಾವು ಅದು ಕಾನೂನು ಮತ್ತು ಸುವ್ಯವಸ್ಥೆಯ ಪ್ರಶ್ನೆ ಅಂತ ಒಪ್ಪುವುದಾದರೆ ಸರ್ಕಾರ ರಾಜೀನಾಮೆಯನ್ನು ಕೊಡಬೇಕು. ಅಲ್ಲ ಅಂತ ಹೇಳುವುದಾದರೆ ಸರ್ಕಾರ ಅದನ್ನು ಸಮರ್ಥಿಸಿ ಕೊಳ್ಳಬೇಕಾಗುತ್ತದೆ.

ಹಾಗಾದರೆ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿ ಬಂದಿದೆ ಅಂತ ಹೇಳಿ ಪ್ರತಿಯೊಬ್ಬರು ಒಂದೊಂದು ಪುಸ್ತಕದ ಮೇಲೂ ಒಬ್ಬೊಬ್ಬರು ಗಲಾಟೆಯನ್ನು ಎಬ್ಬಿಸುತ್ತಾರೆ. ಇವತ್ತು ಇದೇ ಮಹಾಚೈತ್ರ ಪುಸ್ತಕದಲ್ಲಿ ಬೇರೆ ವಿಭಾಗದ ಜನರ ಬಗ್ಗೆ ಕೂಡ ಮಾತನಾಡಿರತಕ್ಕಂಥ ಅಂಶಗಳು ಇವೆ. ಅದರ ಬಗ್ಗೆ ಯಾರೂ ಮಾತನಾಡುವುದಿಲ್ಲ. ಸನ್ಮಾನ್ಯ ಎಲ್ಲಾ ಸದಸ್ಯರಲ್ಲಿ ನಾನು ಮನವಿ ಮಾಡಿಕೊಳ್ಳುವುದು ಇಷ್ಟೇ. ದಯವಿಟ್ಟುಯಾವುದೇ ಪೂರ್ವಗ್ರಹ ಪೀಡಿತರಾಗದೇ ಈ ಪುಸ್ತಕವನ್ನು ಓದಿ ನೋಡಿ. ಈ ಪುಸ್ತಕವನ್ನು ಓದಿ ನೋಡಿ ಇದರಲ್ಲಿ ಏನಾದರೂ ಅಂತಹ ಒಂದೇ ಅಕ್ಷರ ಇದ್ದರೆ ಪುಸ್ತಕ ಇಲ್ಲೇ ಇದೆ. ಒಂದು ಪುಸ್ತಕವನ್ನು ಯಾರು ಎರಡು ರೀತಿಯಲ್ಲಿ ಓದುವುದಕ್ಕೆ ಆಗುವುದಿಲ್ಲ. ಒಂದೇ ಒಂದು ಅಕ್ಷರ ಏನಾದರೂ ಆ ರೀತಿ ಇದ್ದರೆ ನೋಡುಬಹುದು. ನಾನು ಇಷ್ಟೇ ಸನ್ಮಾನ್ಯಸದಸ್ಯರಲ್ಲಿ ಮತ್ತು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳತಕ್ಕಂಥಾದ್ದು ಭೌತಿಕ ದಾರಿದ್ರ್ಯಯಾವ ರಾಜ್ಯದಲ್ಲಿ ನಾಶವಾಗುತ್ತದೆಯೋ ಆ ರಾಜ್ಯ ಖಂಡಿತವಾಗಿ ತಮ್ಮ ಆಲೋಚನಾ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ತನ್ನ ಆಲೋಚನಾ ಶಕ್ತಿಯನ್ನು ತನ್ನ ವಿವೇಚನಾ ಶಕ್ತಿಯನ್ನು ಕಳೆದುಕೊಂಡಂತಹ ಯಾವುದೇ ಒಂದು ಪರಂಪರೆ ಇದೆ. ಪ್ರಗತಿಪರವಾದ ಸಾಹಿತ್ಯವನ್ನು ಹುಟ್ಟಿಬೆಳೆಸಿದಂತಹ ಒಂದು ರಾಜ್ಯ. ಸನ್ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಕುವೆಂಪುರವರ ಶೂದ್ರ ತಪಸ್ವಿ ನಾಟಕದಲ್ಲಿ ಒಂದು ಅಂಶ ಬರುತ್ತದೆ. ಕುವೆಂಪು

ಅವರ ಶೂದ್ರ ತಪಸ್ವಿನಾಟಕದಲ್ಲಿ ರಾಮ ಹೋಗಿ ಶಂಭೂಕನಿಗೆ ನಮಸ್ಕಾರ ಮಾಡಿ ಬರುತ್ತಾನೆ.

ರಾಮಾಯಣದಲ್ಲಿ ಶಂಭೂಕನನ್ನು ರಾಮಹತ್ಯೆ ಮಾಡುತ್ತಾರೆ. ಹಾಗಾದರೆ ಕುವೆಂಪು ಅವರ ಶೂದ್ರ ತಪಸ್ವಿ ನಾಟಕದಲ್ಲಿ ರಾಮನಿಗೆ ಅಪಚಾರ ಮಾಡಿದರು ಅಂತ ಹೇಳಿಶೂದ್ರ ತಪಸ್ವಿ ನಾಟಕವನ್ನು ನಿಷೇದ ಮಾಡಬಹುದಲ್ಲ. ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ ನಾನು. ರನ್ನ ಮತ್ತು ಪಂಪ ಕನ್ನಡ ನಾಡಿನ ಹೆಮ್ಮೆಯ ಕವಿಗಳು. ಮಹಾಭಾರತವನ್ನು ಬರೆದಿದ್ದಾರೆ. ಅವರದ್ದೇ ಆದಂಥ ದೃಷ್ಟಿಯಲ್ಲಿ ಕರ್ಣನ ಗದಾಯುದ್ಧ ಪಂಪಭಾರತ ಬರೆದಿದ್ದಾರೆ. ಕರ್ಣನ ಗದಾಯುದ್ಧದಲ್ಲಿ ಹೇಳುತ್ತಾರೆ ದ್ರೌಪಧಿ ಭೀಮನಿಗೆ ಮಾತ್ರ ಹೆಂಡತಿ ಅಂತ. ಹಾಗಾದರೆ ಇದು ಕೂಡ ಒಂದು ವಿಭಾಗದ ಜನಕ್ಕೆ ನೋವಾಗುತ್ತದೆ ಅಂತ ಹೇಳಿ ನೀವು ಆ ಪುಸ್ತಕವನ್ನು ನಿಷೇಧ ಮಾಡಬಹುದಲ್ಲ. ಆ ರೀತಿಯಲ್ಲಿ ನೀವು ನಿಷೇದ ಮಾಡುತ್ತಾ ಹೋದರೆ ಕರ್ನಾಟಕ ರಾಜ್ಯದಲ್ಲಿ ಯಾವುದೇ ಒಂದು ಸಾಹಿತ್ಯಇರುವುದಕ್ಕೆ ಸಾಧ್ಯ ಇಲ್ಲ.

(ಗೊಂದಲ)

ಬಸವಣ್ಣನವರು ಶಾಸ್ತ್ರವೆಂಬುದು ಒಂದು ಸಂತೆಯ ಮಾತು ಅಂತ ಹೇಳುತ್ತಾರೆ. ಹಾಗಾದರೆ ಬಸವಣ್ಣ ಇವರೆಲ್ಲರಿಗೂ ಅಪಮಾನ ಮಾಡಿದ್ದಾರೆ ಅಂತ ಹೇಳುತ್ತೀರಾ ನೀವು. ವೇದವೆಂಬುದು ಓದಿನ ಸುದ್ದಿ ಪುರಾಣ ಎಂಬುದು ಪುಂಡರ ಗೋಷ್ಠಿ. ಶಾಸ್ತ್ರ ಎಂಬುದು ಸಂತೆಯ ಮಾತು ಅಂತ ಬಸವಣ್ಣನವರ ವಚನಗಳಲ್ಲಿ ಹೇಳುತ್ತಾರೆ ಹಾಗಾದರೆ ಬಸವಣ್ಣ ವೇದ ಪುರಾಣಕ್ಕೆ ಅವಮಾನ ಮಾಡಿದ್ದಾನೆ ಅಂತ ಬಸವಣ್ಣನನ್ನು ನಿಷೇಧ ಮಾಡುತ್ತೀರಾ ನೀವು. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇದು ನಮ್ಮ ರಾಜ್ಯದ ಭೌತಿಕ ಚಿಂತನೆಗೆ ಈ ಸರ್ಕಾರ ಮತ್ತು ಪಟ್ಟಭದ್ರ ಹಿತಾಸಕ್ತಿಗಳು ಹಾಕಿರತಕ್ಕಂಥ ಕೊಡಲಿ ಪೆಟ್ಟುಇದನ್ನು ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಮಾನ್ಯ ಅಧ್ಯಕ್ಷರೇ, ಇನ್ನು ಎರಡನೆಯದಾಗಿ ರಾಜ್ಯಪಾಲರ ಭಾಷಣದಲ್ಲಿ ಮೊಟ್ಟಮೊದಲನೆಯದಾಗಿ ಕೈಗಾರಿಕೆಗಳ ಬೆಳವಣಿಗೆಗಳ ಬಗ್ಗೆ ಕೈಗಾರಿಕಾ ಬೆಳವಣಿಗೆ ಅಂತ ಬೆಳವಣಿಗೆಅಂತ ಹೇಳಿದರೆ ಒಂದು ರಾಜ್ಯದ ಸಂಪನ್ಮೂಲವನ್ನು ಉತ್ಪಾದನೆ ಮಾಡತಕ್ಕಂಥ ಅತಿ ಮುಖ್ಯವಾಗಿರತಕ್ಕಂಥ ಒಂದುರಂಗ. ಅದು ಪ್ರತ್ಯೇಕವಾಗಿ ಸರ್ಕಾರದ ಕೈಗಾರಿಕೆ ರಂಗ ರೋಗಗ್ರಸ್ತವಾಗಿದೆ. ಇವುಗಳನ್ನು ಖಾಸಗೀಕರಣ ಮಾಡಬೇಕು ಅಂತ ಹೇಳಿ ಸರ್ಕಾರ ಹೊರಟಿದೆ. ಇದರ ಪರಿಣಾಮಗಳು ಏನು ಎನ್ನತಕ್ಕಂಥಾದ್ದನ್ನು ಸಹ ನೋಡಬೇಕು. ಇದರಲ್ಲಿ ಅವರು ಹೇಳುತ್ತಾರೆ . ಕೇಂದ್ರ ಸರ್ಕಾರದ ಆರ್ಥಿಕ ಧೋರಣೆಗಳಿಂದಾಗಿ ಹೊಸ ಧೋರಣೆಗಳು ಯಾವುವು ಅಂತ ಹುಡುಕಬೇಕಾಗಿದೆ. ಮಾನ್ಯ ಅಧ್ಯಕ್ಷರೇ, ಕೇಂದ್ರದ ಹೊಸ ಆರ್ಥಿಕ ಧೋರಣೆಯ ಪ್ರತಿಯಾಗಿ ಇವತ್ತು ನಮ್ಮ ದೇಶ ಇವತ್ತು ಆಂತರಿಕ ಮತ್ತು ವಿದೇಶಿ ಸಾಲದ ಬಲೆಗೆ ಸಿಕ್ಕಿದೆ.

2 ಲಕ್ಷ 67 ಸಾವಿರ ಕೋಟಿ ರೂಪಾಯಿಗಳ ವಿದೇಶಿ ಸಾಲ ಇವತ್ತು ಇದೆ. ಇನ್ನೊಂದು ಕಡೆ 2 ಲಕ್ಷ ಕೋಟಿ 46 ಸಾವಿರ ಕೋಟಿ ರೂಪಾಯಿಗಳ ಅಂತರೀಕ ಸಾಲ ಇದೆ. ಇವೆಲ್ಲವನ್ನು ಸೇರಿಸಿದರೆ ಯೋಜನಾ ಆಯೋಗದ ಲೆಕ್ಕದ ಪ್ರಕಾರ ಪ್ರತಿಯೊಬ್ಬನ ತಲೆಗೆ 5,800 ರೂಪಾಯಿಗಳ ಸಾಲ ಆಗುತ್ತದೆ. ಇದು ಹೊಸ ಆರ್ಥಿಕ ಧೋರಣೆಯ ಪ್ರತಿಫಲ. ಹೊಸ ಆರ್ಥಿಕ ಧೋರಣೆಯ ಉದ್ದೇಶ ಏನು ನರಸಿಂಹರಾಯರದ್ದು ಅಂತ ಹೇಳಿದರೆ ಖಾಸಗೀಕರಣ. ಇವತ್ತು ಖಾಸಗೀ ಕರಣಕ್ಕೋಸ್ಕರ ಕರ್ನಾಟಕ ರಾಜ್ಯ ಭೂ ಸುಧಾರಣಾ ಕಾಯ್ದೆಯನ್ನು ಸಹ ತಿದ್ದುಪಡಿ ಮಾಡುತ್ತಿದೆ. ಇದರ ಪರಿಣಾಮ ಏನಾಗುತ್ತದೆ. ದೇವರಾಜ ಅರಸರ ಕಾಲದಲ್ಲಿ ಭೂ ಸುಧಾರಣಾ ಕಾಯ್ದೆಯನ್ನು ತಂದಾಗ ಒಂದು 79(ಎ) 79(ಬಿ) 89 ಮತ್ತು 109 ಕಲ್ಮಗಳ ತಿದ್ದುಪಡಿ

ಮಾಡಲು ಸೂಚಿಸಿದೆ ಇದಕ್ಕೆ ಹಿಂದೆ ಕೃಷಿಯೇತರರ ವಾರ್ಷಿಕ ಆದಾಯ 12 ಸಾವಿರ ರೂಪಾಯಿಗಳಿಗೂ ಹೆಚ್ಚಿಗೆ ಇರುವ ಕೃಷಿಕನು ಭೂ ಸುಧಾರಣಾ ಕಾಯ್ದೆ ಪ್ರಕಾರ ಭೂಮಿಯನ್ನು ಕೊಂಡುಕೊಳ್ಳಬಾರದು ಎನ್ನುವಂತಹ ಒಂದು ಕಾನೂನು ಇತ್ತು. ಅದನ್ನು ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರ ಬಂದ ಮೇಲೆ 50 ಸಾವಿರ ರೂಪಾಯಿಗಳಿಗೆ ಏರಿಸಿತು. ಈಗ ಮಾನ್ಯ ದೇವೇಗೌಡರ ಸರ್ಕಾರ 50 ಸಾವಿರ ರೂಪಾಯಿಗಳಿಂದ 1 ಲಕ್ಷ ರೂಪಾಯಿಗಳಿಗೆ ಏರಿಸುತ್ತಿದೆ. ಅವರು ಇದಕ್ಕೆ ಕೊಡತಕ್ಕಂಥ ಕಾರಣ ಬೆಂಗಳೂರಿನ ಸುತ್ತಮುತ್ತಲೂ ವಿದೇಶಿಯರು ಕೈಗಾರಿಕೆಗಳಿಗೆ ಬಂಡವಾಳ ಹಾಕಿ ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಬರುತ್ತಿವೆ. ಅವರಿಗೆ ಭೂಮಿಯನ್ನು ಕೊಂಡುಕೊಳ್ಳುವುದಕ್ಕೆ ಅವಕಾಶ ಆಗಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದಾರೆ.

ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಇನ್ನೊಂದು ದೃಷ್ಟಿಯಿಂದ ನೋಡಬೇಕಾಗಿದೆ. ನಿನ್ನೆ ಸನ್ಮಾನ್ಯ ಸದಸ್ಯರಾದ ಸೋಮಶೇಖರ್‌ರವರು ಮಾತನಾಡುತ್ತಾ ಹೇಳಿದರು. ಬೆಂಗಳೂರಿನ ಸುತ್ತಮುತ್ತಲೂ ಯಾರು ಜಮೀನನ್ನು ಕೊಂಡುಕೊಳ್ಳತಕ್ಕಂಥವರು. ಯಾವ ರೈತ ಇವತ್ತು ಭೂಮಿಯನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಕಾನೂನು ಜಾರಿಗೆ ಬಂದರೆ ಯಾವ ರೈತನ ಜಮೀನು ಉಳಿಯುವುದಕ್ಕೆ ಸಾಧ್ಯ ಇಲ್ಲ ಭೂಮಿ ಕಳೆದುಕೊಂಡರೆ ಆಹಾರ ಧಾನ್ಯಗಳನ್ನು ಬೆಳೆಯುವುದಕ್ಕೆ ಸಾಧ್ಯ ಇಲ್ಲ. ಅಂತಹ ಭೂಮಿ ಯಲ್ಲಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇನ್ನು ಎರಡನೇಯದಾಗಿ ಕೈಗಾರಿಕೆಗಳನ್ನು ಖಾಸಗೀಕರಣಕ್ಕೆ ಕೊಟ್ಟರೆ ನಿರುದ್ಯೋಗ ಸಮಸ್ಯೆ ಭೀಕರವಾಗಿ ಬೆಳೆಯುತ್ತದೆ. ಭೂಮಿಯಿಂದ ದುಡ್ಡು ಸಿಗುತ್ತದೆ. ದುಡ್ಡು ತಿನ್ನುವುದಕ್ಕೆ ಆಗುವುದಿಲ್ಲ ಮನುಷ್ಯ. ಮಾನ್ಯ ಅಧ್ಯಕ್ಷರೇ ಆದ್ದರಿಂದ ಇವತ್ತು ಈ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವುದಕ್ಕೆ ಹೊರಟ್ಟಿದ್ದೀರಿ. ಇನ್ನೊಂದು ಕಡೆ ಆಹಾರ ಧಾನ್ಯಗಳ ಉತ್ಪಾದನೆ. ಇನ್ನು ಎರಡು ಸಾವಿರ ವರ್ಷಕ್ಕೆ ಹೋಗಬೇಕಾದರೆ ಇನ್ನು ಕೇವಲ 5 ವರ್ಷಗಳು ಮಾತ್ರ ಉಳಿದಿದೆ. ಈಗಿನ ನಮ್ಮ ಲೆಕ್ಕದ ಪ್ರಕಾರ ಯೋಜನಾ ಆಯೋಗದವರು ಲೆಕ್ಕ ಹಾಕಿರತಕ್ಕಂಥ ಪ್ರಕಾರ 150 ಲಕ್ಷ ಮೆಟ್ರಿಕ್‌ಟನ್ ಆಹಾರ ಉತ್ಪಾದನೆ ಆದರೆ ಮಾತ್ರ ಎರಡು ಸಾವಿರ ಇಸವಿಯೊಳಗೆ ನಾವು ನಮ್ಮ ರಾಜ್ಯದ ಜನಸಂಖ್ಯೆಗೆ ಎರಡು ಹೊತ್ತು ಊಟ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಈಗ ಇರತಕ್ಕಂಥಾದ್ದು 75 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಇನ್ನೂ 75 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಆಗಬೇಕು ಅಂತ ಆದರೆ ಇಲ್ಲಿ ಎರಡು ಅಂಶಗಳು ಪ್ರಮುಖವಾಗಿ ಬರುತ್ತದೆ. ಒಂದು ಕೃಷಿ ರಂಗದಲ್ಲಿ ಆಹಾರಧಾನ್ಯಗಳು ಹೆಚ್ಚು ಉತ್ಪಾದನೆ ಆಗಬೇಕಾದರೆ ಮೂಲ ಅಂಶ ಇರಬೇಕಾದುದು ಭೂಮಿಗಳುವವನಿಗೆ ತಗೆದುಕೊಂಡು ಕೊಡಬೇಕಾಗುತ್ತದೆ. ಎರಡನೇ ಅಂಶ ರೈತ ಬೆಳೆದಂತಹ ಬೆಳೆಗೆ ನ್ಯಾಯಯುತವಾದ ಬೆಲೆ ಸಿಗಬೇಕಾಗತ್ತದೆ. ಇಲ್ಲದಿದ್ದರೆ ಆತ ಇವತ್ತು ವ್ಯವಸಾಯ ಮಾಡುವುದಕ್ಕೆ ಆಗುವುದಿಲ್ಲ. ಆತ ಇವತ್ತು ದಿವಾಳಿಯಾಗುತ್ತಿದ್ದಾನೆ. ರೈತ ಇವತ್ತು ಯಾವ ಸ್ಥಿತಿಗೆ .ಬಂದಿದ್ದಾನೆ ಅಂತ ಹೇಳಿದರೆ ಇವತ್ತು ನಾವು ಏತಕ್ಕೆ ವ್ಯವಸಾಯ ಮಾಡಬೇಕು, ಎಲ್ಲಾದರೂ ಒಂದು ಪಿವನ್ ಕೆಲಸ ಸಿಕ್ಕಿದರೆ ಸಾಕು ಎಂದು ಹೇಳುವಂತಹ ಮಟ್ಟಕ್ಕೆ ಬಂದಿದ್ದಾನೆ. ಸ್ವೀಪರ್ ಕೆಲಸ ಸಿಕ್ಕಿದರೆ ಸಾಕು ಅಂತ ಇವತ್ತು ರೈತರು ಹಳ್ಳಿಗಳಲ್ಲಿ ಮಾತನಾಡುತ್ತಾರೆ ತಾಲ್ಲೂಕು ಆಫೀಸ್‌ನಲ್ಲಿ ಪಿವನ್ ಕೆಲಸ ಮಾಡುವಂತಹ ಹೆಂಡತಿಗೆ ಎರಡು ರೇಷ್ಮೆ ಸೀರೆ ಇರುತ್ತದೆ ಸ್ವಾಮಿ, ರೇಷ್ಮೆ ಬೆಳೆಯತಕ್ಕಂಥ ರೈತನ ಹೆಂಡತಿಗೆ ಒಂದು ರೇಷ್ಮೆ ಸೀರೆ ಇಲ್ಲವೆಂದು ಈ ದೇಶದಲ್ಲಿ ಮಾತನಾಡಿಕೊಳ್ಳುತ್ತಾನೆ. ಇದು ಖಂಡಿತವಾಗಿ ವಾಸ್ತವಾದ ಅಂಶ. ರೈತ ಬೆಳೆಯತಕ್ಕಂಥ ಕೃಷಿ ಉತ್ಪಾದನೆ ಸರಕಿಗೂ ಬೆಲೆಗೂ ಕೈಗಾರಿಕೆಯಲ್ಲಿ ಆಗತಕ್ಕಂಥ ಉತ್ಪಾದನೆಯ ಬೆಲೆಗೂ ತೀವ್ರರೀತಿಯಾಂದಂತಹ ವ್ಯತ್ಯಾಸಗಳು ಆಗುತ್ತವೆ.

Imbalance in agrarian production and industrial produdion ಆ ಇಂಬ್ಯಾಲೆನ್ಸ್ ಕಡಿಮೆ ಆಗದೇ ಹೋದರೆ ಕೈಗಾರಿಕೆಗಳಲ್ಲಿ ಆಗತಕ್ಕಂಥ ಉತ್ಪಾದನೆಯ ಸರಕುಗಳಿಗೂ ಕೃಷಿಯಲ್ಲಿ ಉತ್ಪಾದನೆಯಾಗತಕ್ಕಂಥ ಸರಕುಗಳಬೆಲೆಗಳಿಗೂ ವ್ಯತ್ಯಾಸ ಕಡಿಮೆ ಆಗದೇ ಹೋದರೆ ರೈತ ದಿವಾಳಿಯಾಗತಕ್ಕಂಥಾದ್ದು ಸ್ಪಷ್ಟ. ಸರ್ಕಾರದವರು ಎಷ್ಟು ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಟ್ಟರೂ ಆತ ಉಳಿಯುವುದಕ್ಕೆ ಸಾಧ್ಯ ಇಲ್ಲ. ಇಂಬ್ಯಾಲೆನ್ಸ್ ಕಡಿಮೆ ಮಾಡಬೇಕು ಈ ಇಂಬ್ಯಾಲೆನ್ಸ್ ಕಡಿಮೆ ಮಾಡಬೇಕಾದರೆ ಕೃಷಿಯಲ್ಲಿ ಉತ್ಪಾದನೆ ಹೆಚ್ಚು ಮಾಡಬೇಕು. ಕೃಷಿ ಬೆಳೆಗೆ ನ್ಯಾಯಯುತವಾದ ಬೆಲೆ ಸಿಗಬೇಕಾಗುತ್ತದೆ.

ಇವತ್ತು ರೈತರಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಇದರಿಂದ ಇವತ್ತು ಕೃಷಿ ದಿವಾಳಿಯಾಗುತ್ತಿದೆ. 150 ಮೆಟ್ರಿಕ್ ಟನ್ ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡುವುದಕ್ಕೆ ಆದೂ ಎರಡು ಸಾವಿರ ಇಸವಿಯೊಳಗೆ ಸರ್ಕಾರದವರು ಯಾವುದೇ ಕಾರ್ಯಕ್ರಮವನ್ನು ಈ ರಾಜ್ಯಪಾಲರ ಭಾಷಣದಲ್ಲಿ ಹಾಕಿಕೊಂಡಿಲ್ಲ. ಇದು ಬಹಳ ಅಸಹಾಯಕಾರಿಯಾದಂತಹ ಅಂಶ. ಇವತ್ತು ಆಹಾರಸಾಮಗ್ರಿಗಳ ಪ್ರಶ್ನೆಬಹಳ ಗಂಭೀರವಾಗಿದೆ. ಕರ್ನಾಟಕ ರಾಜ್ಯದಲ್ಲಿ ಮತ್ತು ಈ ಕೃಷಿ ರಂಗಕ್ಕೆ ಹೊಂದಿಕೊಂಡೇ ನೀರಾವರಿ ಪ್ರಶ್ನೆ ಇದೆ. ವಿದ್ಯುಚ್ಛಕ್ತಿ ಪ್ರಶ್ನೆ ಇದೆ. ಮೊದಲನೇಯದು ವಿದ್ಯುಚ್ಛಕ್ತಿ ಬಗ್ಗೆ ಸರ್ಕಾರ ಇವತ್ತು ಹೇಳುತ್ತಿದೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳುತ್ತಿದ್ದಾರೆ. ತಕ್ಷಣಕ್ಕೆ ಪರಿಹಾರ ನಮ್ಮಲ್ಲಿ ಇಲ್ಲ ಅಂತ. ತಕ್ಷಣಕ್ಕೆ ಪರಿಹಾರ ಇಲ್ಲದಿದ್ದರೆ ರೈತ ನಾಶ ಆಗುತ್ತಾನೆ. ಬೆಳೆ ನಾಶ ಆಗುತ್ತದೆ. ಇವತ್ತು ನನ್ನ ಜಿಲ್ಲೆಯಾದ ಕೋಲಾರದಲ್ಲಿ ಟಮೋಟೋ ಒಣಗಿ ಹೋಗಿರತಕ್ಕಂಥ ಫೋಟೋಗಳನ್ನು ನಾನುತಮಗೆ ಕಳುಹಿಸುತ್ತಿದ್ದೇನೆ ತಾವು ನೋಡಬಹುದು. ಇನ್ನೊಂದು ಕಡೆ ಈರುಳ್ಳಿ ಕಲ್ಲಂಗಡಿ ನೀರು ಇಲ್ಲದೆ ಅಂದರೆ ಕರೆಂಟ್ ಇಲ್ಲದೆ ಕೋಸ್‌ಬೆಳೆಸಹ ನೋಡಿ ಎಷ್ಟು ಒಣಗಿ ಹೋಗಿದೆ. ಈರುಳ್ಳಿ ಸಂಪೂರ್ಣವಾಗಿ ಒಣಗಿ ಹೋಗಿದೆ. ಟಮೋಟೋವನ್ನು ಇವತ್ತು ರಸ್ತೆಗೆ ಬಿಸಾಕಿದ್ದಾರೆ.

ಅದೇ ರೀತಿಯಲ್ಲಿ ಈರಳ್ಳಿ ಬೆಳೆಯು ಸಂಪೂರ್ಣವಾಗಿ ಒಣಗಿ ಹೋಗಿ ಬಿಟ್ಟಿದೆ. ಸಂಪೂರ್ಣವಾಗಿ ಹಾಳಾಗಿ ಹೋದ ಈರುಳ್ಳಿ ಬೆಳೆಯ ಫೋಟೋವನ್ನು ಕೂಡ ತಮಗೆ ಕಳುಹಿಸುತ್ತಾ ಇದ್ದೇನೆ. ಕೋಲಾರ ಜಿಲ್ಲೆಯಿಂದ ಬಂದಿರತಕ್ಕಂಥ ತಾವು ಕೂಡ ಈ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ನಮ್ಮ ರೈತರ ಪರಿಸ್ಥಿತಿಯು ಇವೊತ್ತು ಈ ಹಂತಕ್ಕೆ ಬಂದಿದೆ. ವಿದ್ಯುತ್‌ಚಕ್ತಿ ಕೊರತೆಯಿಂದಾಗಿ ಈ ಬೆಳೆಗಳು ನಾಶವಾಗಿವೆ, ರೈತರಿಗೆ ನಷ್ಟವಾಗಿದೆ. ನನಗೆ ಗೊತ್ತಿರತಕ್ಕ ಪ್ರಕಾರ ನಮ್ಮ ಜಿಲ್ಲೆಯಲ್ಲಿ ಸುಮಾರು 50ಕೋಟಿ ರೂಪಾಯಿಗಳಷ್ಟು ಬೆಳೆಗಳು ನಾಶವಾಗಿದೆ. ಇದಕ್ಕೆ ಕಾರಣ ವಿದ್ಯುಚ್ಛಕ್ತಿಯ ಕೊರತೆ. ನೀವು ಐದು ವರ್ಷಗಳಲ್ಲಿ ವಿದ್ಯುಚ್ಛಕ್ತಿಯ ವ್ಯವಸ್ಥೆಯನ್ನು ಸರಿಮಾಡುತ್ತೀರಿ ಎಂದು ಹೇಳಿದ್ದೀರಿ. ಆದರೆ ತತ್‌ಕ್ಷಣಕ್ಕೆ ಏನಾದರೂ ಒಂದು ಪರಿಹಾರ ಅದಕ್ಕೆ ಬೇಕಲ್ಲ? ಯಾಕೆಂದರೆ ಕೋಲಾರ ಜಿಲ್ಲೆಯಲ್ಲಿ ಯಾವುದೇ ನದಿ ಇಲ್ಲ, ನಾಲೆ ಇಲ್ಲ, ಕೆರೆಗಳಲ್ಲಿನೀರುಇಲ್ಲ, ಇವೊತ್ತು ನಮಗೆ ಇರತಕ್ಕಂಥ ಆಧಾರ ಎಂದರೆ ಬೋರ್‌ವೆಲ್‌ಗಳು ಮಾತ್ರ. ಅದಕ್ಕೂ 350 ಅಡಿಗಳಿಗಿಂತಲೂ ಕೆಳಗೆ ಹೋಗ ಬೇಕಾಗುತ್ತದೆ. ಇಷ್ಟು ಕಷ್ಟಪಟ್ಟು ಬೋರ್‌ವೆಲ್ ಹಾಕಿ ನೀರು ವ್ಯವಸ್ಥೆ ಮಾಡಿಕೊಳ್ಳ ಬೇಕೆಂದರೆ ಸುಮಾರು 70 ಸಾವಿರ ರೂಪಾಯಿಗಳಷ್ಟುನ್ನು ಖರ್ಚು ಮಾಡಬೇಕಾಗುತ್ತದೆ. ಇಷ್ಟು ಹಣವನ್ನು ಖರ್ಚುಮಾಡಿ ಬೋರ್‌ವೆಲ್ ಹಾಕಿಸಿದರೆ ಅವರಿಗೆ ಕರೆಂಟ್ ಇಲ್ಲ. 70ಸಾವಿರ ಖರ್ಚು ಮಾಡಿ ಬೋರ್‌ಹಾಕಿಸುವ ಶಕ್ತಿ ಎಷ್ಟು ಜನರಿಗೆ ಇದೆ? ಬಹಳಷ್ಟು ಜನರಿಗೆ ಇಲ್ಲ.

ಮಧ್ಯಮವರ್ಗದ ರೈತರಿಗೆ, ಕೆಲಹಂತದ ರೈತರಿಗಂತೂ ಆ ಶಕ್ತಿಯೇ ಇಲ್ಲ. ಹಾಕಿದವರ ಪರಿಸ್ಥಿತಿ ಹೀಗಾಗಿದೆ. ಆದ್ದರಿಂದ ತತ್‌ಕ್ಷಣದ ಸಮಸ್ಯೆಯ ಪರಿಹಾರದ ಬಗ್ಗೆ ಸರಕಾರದವರಲ್ಲಿ ಏನಾದರೂ ಕಾರ್ಯಕ್ರಮ ಇದೆಯೇ? ಅದು ಇದ್ದ ಹಾಗೆ ಇಲ್ಲ. ವಿದ್ಯುತ್ ಉತ್ಪಾದನೆ ಕಡಿಮೆ ಇದೆ ಎಂಬುದು ನಮಗೂ ಗೊತ್ತಿದೆ. ನಮ್ಮ ಬೇಡಿಕೆಯು 30 ಲಕ್ಷ ಮಿಲಿಯ ಯೂನಿಟ್‌ಗಳು. ಆದರೆ ನಮ್ಮಲ್ಲಿ ಲಭ್ಯವಿರುವುದು ಕೇವಲ 21 ಸಾವಿರ ಯುನಿಟ್‌ಗಳು ಮಾತ್ರ. ಇದು ಮೂಲಭೂತವಾದ ಸಮಸ್ಯೆಯಾಗಿದೆ. ನಾನು ಒಂದು ಪ್ರಶ್ನೆಯನ್ನು ಕೇಳಿದ್ದೆ, ಉತ್ತರದಲ್ಲಿ ಕೊಜೆಂಟ್ರಿಕ್ ಕಂಪನಿಯ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಅವರಿಗೆ ಎಷ್ಟು ಲಾಭ ಕೊಡುತ್ತೇವೆಂದು ನೀವು ಅವರಿಗೆ ಆಶ್ವಾಸನೆ ಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ ಈ ಕ್ವಿಟ್ ಶೇರ್‌ನ ಮೇಲೆ 16 ಪರ್‌ಸೆಂಟ್‌ನಷ್ಟು ಲಾಭಾಂಶವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅವರು ಉತ್ಪಾದನೆ ಮಾಡುವಂಥ ಕರೆಂಟ್‌ಗೆ ಒಂದು ಯುನಿಟ್‌ಗೆ 4ರೂ 60 ಪೈಸೆಗಳಷ್ಟು ರೇಟ್ ಹಾಕುತ್ತಾರೆ. ಇದಕ್ಕೆ ಮಹಾರಾಷ್ಟ್ರ ಸರಕಾರದ ಉದಾಹರಣೆಯು ನಮ್ಮ ಮುಂದೆ ಇದೆ. ಇದು ದೀರ್ಘಕಾಲದ ಯೋಜನೆಯಾಗಿದೆ. ಈಗ ತತ್‌ಕ್ಷಣದ ಪರಿಹಾರವಾದರೂ ಏನು? ಇವೊತ್ತು ಕೋಲಾರ ಜಿಲ್ಲೆಯಲ್ಲೆ ರೈತರು ನಾಶವಾಗಿದ್ದಾರೆ. ಬೇರೆ ಜಿಲ್ಲೆಗಳಲ್ಲಿಯೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿಯು ಕರೆಂಟ್‌ನ ವಿಚಾರದಲ್ಲಿದೆ ಎಂದು ನಾನು ಅರಿತಿದ್ದೇನೆ. ಇಷ್ಟೇ ಅಲ್ಲದೆ ಕುಡಿಯುವ ನೀರಿನ ಸಮಸ್ಯೆಯು ಕೂಡ ಇದ್ದು, ಅದಕ್ಕೂ ಕರೆಂಟ್‌ನ ಪೂರೈಕೆ ಇಲ್ಲ ಇದರ ಬಗ್ಗೆ ತತ್‌ಕ್ಷಣದಲ್ಲಿ ಏನು ಮಾಡಬೇಕಾಗಿದೆ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಸಹಕಾರದ ಮುಂದಿರತಕ್ಕಂಥಸಮಸ್ಯೆಗಳು ಕೂಡ ನಮಗೆ ಗೊತ್ತಿದೆ. ನಮ್ಮಲ್ಲಿ ವಿದ್ಯುತ್‌ನ ಉತ್ಪಾದನೆ ಹೆಚ್ಚಿಗೆ ಆಗಬೇಕು. ಅದಕ್ಕಾಗಿ ಹಿಂದಿನ ಸರಕಾರಗಳು ಸೂಕ್ತ ಯೋಜನೆಗಳನ್ನು ಹಾಕಿರಲಿಲ್ಲ ಈಗಲಾದರೂ ಕೂಡ ಸರಕಾರದವರು ಸೂಕ್ತ ಯೋಜನೆಗಳನ್ನು ಹಾಕ ಬೇಕಾಗುತ್ತದೆ.

ಆದರೆ ತತ್‌ಕ್ಷಣದ ಸಮಸ್ಯೆ ಏನೆಂದರೆ ಇವೊತ್ತು ಬೆಳಗಳೆಲ್ಲವೂ ನಾಶವಾಗಿದೆ. ಒಣಗಿ ಹೋಗುತ್ತಿರುವ ಬೆಳೆಗಳನ್ನು ಕಾಪಾಡುವ ದೃಷ್ಟಿಯಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳ ಬೇಕಾಗಿತ್ತು. ಆದರೆ ಹಾಗೆ ಯಾವ ಯೋಜನೆಗಳನ್ನು ಹಾಕಿಕೊಂಡ ಬಗ್ಗೆ ಹೇಳಿಲ್ಲ.

ಇನ್ನು ನೀರಾವರಿ ಪ್ರಶ್ನೆಯನ್ನು ಹೇಳುವಾಗ ಅದರ ಗಂಭೀರತೆಯನ್ನು ಅರಿತು ತಾವು ಒಂದು ದಿನದ ಚರ್ಚೆಯನ್ನು ಅದಕ್ಕೆ ನಿಗದಿ ಮಾಡಿದ್ದೀರಿ. ಆ ಕುರಿತು ನಾನು ಹೆಚ್ಚು ಹೇಳಲು ಹೋಗುವುದಿಲ್ಲ. ನಮ್ಮ ಕೋಲಾರದಂಥ ಜಿಲ್ಲೆಗಳಿಗೆ ಎರಡೇ ದಾರಿ ಇರತಕ್ಕಂಥಾದ್ದು. ಸಣ್ಣ ನೀರಾವರಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಕೆರೆಗಳಲ್ಲಿನ ಹೂಳನ್ನು ತೆಗೆಯ ಬೇಕಾಗುತ್ತದೆ. ಹೆಚ್ಚು ಹಣವನ್ನು ಖರ್ಚು ಮಾಡಿ ನೀರನ್ನು ಸ್ಟೋರ್ ಮಾಡುವಂಥ ಕೆಲಸವನ್ನು ಮಾಡಬೇಕಾಗುತ್ತದೆ. ಎರಡನೆಯದಾಗಿ ನಾನು ಕೇಳಬಯಸುವುದೇನೆಂದರೆ, ನಾನು ನಿನ್ನೆ ಕೇಳಿದ ಪ್ರಶ್ನೆಯೊಂದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ. ಭದ್ರಾ ಮೇಲ್ದಂಡೆ ಯೋಜನೆಯ ಮೂಲಕ ಮಾತ್ರ ನಮ್ಮ ತುಮಕೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ನೀರು ಬರುವ ಸಾಧ್ಯತೆಯಾಗುತ್ತದೆ. ಬೇರೆ ಯಾವುದೇ ಸಾಧ್ಯತೆಗಳು ಕಡಿಮೆ ಇದೆ. ಆದರೆ ಈ ಯೋಜನೆಯನ್ನು ಜಾರಿ ಮಾಡುವುದರಲ್ಲಿ ಹಲವಾರು ಸಮಸ್ಯೆಗಳು ಇರಬಹುದು. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮತ್ತು ಸಹಕಾರದವರಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ನಮ್ಮ ಕೋಲಾರ ಜಿಲ್ಲೆಯು ಬರಡು ಜಿಲ್ಲೆ. ಎಷ್ಟೇ ಸಮಸ್ಯೆಗಳು ಬಂದರೂ ಮಾನ್ಯ ದೇವೇಗೌಡರ ಕಾಲದಲ್ಲಿ ಜಿಲ್ಲೆಯ ವ್ಯವಸಾಯಕ್ಕೆ ನೀರನ್ನು ತಂದು ಕೊಟ್ಟಿದ್ದಾರೆ

ಎಂಬ ಕೀರ್ತಿಯು ನಿಮಗೆ ಬರುವುಂತಾಗಲಿ. ನಮ್ಮ ರೈತರುಗಳು ತಮ್ಮನ್ನು ಶಾಶ್ವತವಾಗಿ ನೆನೆಯಲಿ ಎಂದು ಆಶಿಸುತ್ತೇನೆ ಭದ್ರಾಮೇಲ್ದಂಡೆ ಯೋಜನೆಯನ್ನು ಅವರ ಕಾಲದಲ್ಲಿ ಏನಾದರೂ ಮಾಡಿ ಕೈಗೆತ್ತಿಕೊಳ್ಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವೊತ್ತು ಈ ರೀತಿಯಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕಾಗಿದೆ. ಹೀಗೆ ಪ್ರಾಮುಖ್ಯತೆಯನ್ನು ಕೊಡದೇ ಹೋದರೆ ನದಿ ಇಲ್ಲದಿರತಕ್ಕಂಥ ಜಿಲ್ಲೆಗಳಿಗೆ ನೀರಿನ ಸಮಸ್ಯೆಯುಬಹಳಷ್ಟು ಗಂಭೀರವಾಗುತ್ತದೆ.

ಇದೇ ರೀತಿಯಲ್ಲಿ ಇವೊತ್ತು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯದ ಪರಿಸ್ಥಿತಿಯು ಗಂಭೀರ ವಿಷಯವಾಗಿದೆ. ಇದನ್ನು ನೆನಸಿಕೊಂಡರೆ ಭಯಾನಕವಾಗುತ್ತದೆ. ನಾವು ಇನ್ನೈದು ವರ್ಷಗಳಲ್ಲಿ 20ನೇ ಶತಮಾನಕ್ಕೆ ಕಾಲಿಡುತ್ತಿದ್ದೇವೆ. ಇವೊತ್ತು ಅತೀ ಹೆಚ್ಚು ಹಳ್ಳಿಗಾಡಿನಲ್ಲರತಕ್ಕಂಥ ಜನರು ನಿಂಬೆಹಣ್ಣು, ಬೇವಿನಸೊಪ್ಪಿನಿಂದ ಮಂತ್ರವನ್ನು ಹಾಕಿಸಿಕೊಳ್ಳುತ್ತಿದ್ದಾರೆಯೇ ಹೊರತು ಔಷಧಿಯಾಗಿ ಉಪಯೋಗಿಸುತ್ತಾ ಇಲ್ಲ. ಅದಕ್ಕೆ ಎರಡು ಮುಖ್ಯ ಕಾರಣಗಳು ಇವೆ. ಒಂದು ಅವರಲ್ಲಿರತಕ್ಕಂಥ ಬೌದ್ಧಿಕ ದಾರಿದ್ರ ಅಂದರೆ ಮೂಢನಂಬಿಕೆ ಇತ್ಯಾದಿಗಳು. ಇನ್ನೊಂದು ಅಲ್ಲಿ ಆಸ್ಪತ್ರೆಗಳ ವ್ಯವಸ್ಥೆ ಇಲ್ಲದೇ ಇರುವುದು. ಅವರು ಆಸ್ಪತ್ರೆಗೆ ಬರಬೇಕಾದರೆ ಕನಿಷ್ಟ 10-12 ಮೈಲುಗಳವರೆಗೆ ಬರಬೇಕಾಗುತ್ತದೆ. ಹಳ್ಳಿಗಾಡಿನಲ್ಲಿರತಕ್ಕಂಥ ಜನರ ಆರೋಗ್ಯ ಕುರಿತಾಗಿ ನಾವು ಗಂಭೀರವಾಗಿ ಪರಿಶೀಲನೆ ಮಾಡುವುದಾದರೆ ಎರಡು ಪ್ರಮುಖವಾದಂಥ ಪ್ರಶ್ನೆಗಳಿವೆ. ಸರಕಾರದವರೇ ಹೇಳಿರುವ ಪ್ರಾಕಾರ 40 ಪರ್‌ಸೆಂಟ್‌ನಷ್ಟು ಜನರು ಬಡತನದ ರೇಖೆಗಿಂತ ಕಡಿಮೆ ಇದ್ದಾರೆ. ಅವರಿಗೆ ಪೌಷ್ಟಿಕ ಆಹಾರ ಸಿಗುತ್ತಾ ಇಲ್ಲ.

ಅಪೌಷ್ಠಿಕತೆಯಿಂದಾಗಿ ಹಳ್ಳಿ ಮತ್ತು ಪಟ್ಟಣಗಳಲ್ಲಿನ ಜನರಿಗೆ ಕಾಯಿಲೆಗಳು ಹೆಚ್ಚಾಗಿ ಬರುತ್ತಿವೆ. ಪಾಷ್ಠಿಕ ಆಹಾರೋತ್ಪಾದನೆಯನ್ನು ಹೆಚ್ಚಿಸುವ ಕಡೆಗೆ ಗಮನಕೊಡಬೇಕು ಮತ್ತು ಪಾಷ್ಠಿಕಾಹಾರವನ್ನು ಜನಸಾಮಾನ್ಯರಿಗೆ ಸರಕಾರದವರೇ ಒದಿಗಿಸಿಕೊಡುವ ವ್ಯವಸ್ಥೆಯಾಗಬೇಕು. ಒಂದು ವರದಿಯ ಪ್ರಕಾರ ಒಬ್ಬ ಮನುಷ್ಯ ಆರೋಗ್ಯವಂತನಾಗಿರಬೇಕಾದರೆ ಪ್ರತಿದಿವಸವೂ 2600ಕ್ಯಾಲರಿಗಳಷ್ಟು ಆಹಾರವು ಬೇಕಾಗುತ್ತದೆ. ನಮ್ಮ ದೇಶದಲ್ಲಿ ಸಿಗುವ ಆಹಾರ ಕ್ಯಾಲರಿಯು900 ಮಾತ್ರ. ಅಂದರೆ 1500 ಕ್ಯಾಲರಿಗಳಷ್ಟು ಆಹಾರದ ಕೊರತೆ ಇದೆ ಎಂದ ಹಾಗೆ ಆಯಿತು. ಇದರಿಂದಾಗಿ ಮೂಲತಃ ಜನರು ನಾನಾ ರೀತಿಯ ಕಾಯಿಲೆಗಳಿಗೆ ಒಳಗಾಗುತ್ತಾ ಇದ್ದಾರೆ. ಬೆಳಿಗ್ಗೆ ಮಾನ್ಯ ಸದಸ್ಯರಾದ ಶ್ರೀ ಕುಂಬ್ಳೆ ಸುಂದರರಾಯರು ಸುರತ್ಕಲ್ ನಗರದ ಮಧ್ಯದಲ್ಲಿ ಕೊಳಚೆ ನೀರು ಹರಿದು ಹೋಗುತ್ತಿರುವ ಬಗ್ಗೆ ಹೇಳಿದರು. ಆದರೆ ಇಂಥ ದೃಶ್ಯವು ನಮ್ಮ ಎಲ್ಲಾ ಹಳ್ಳಿಗಳಲ್ಲಿಯೂ ಸಾಮಾನ್ಯ ವಾಗಿರುತ್ತದೆ. ಕೇವಲ ಚರಂಡಿ ನೀರು ಮಾತ್ರವಲ್ಲ, ಬೇರೆ ಬೇರೆ ಎಲ್ಲಾ ಕೆಲಸಗಳೂ ಅಲ್ಲಿಯೇ ನಡೆಯುತ್ತದೆ. ನಾನು ಹಿಂದಿನ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಕೂಡ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ.

ಸರಕಾರದವರು ಮಹಿಳೆಯರ ಬಗ್ಗೆ ಬಹಳ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದಾರೆ. ಇದು ಸಂತೋಷ ತರುವ ವಿಚಾರ. ಅದೇ ರೀತಿಯಲ್ಲಿ ರಿಸರ್‌ವೇಶನ್ ಮಾಡುತ್ತೇವೆ ಎಂದು ಹೇಳಿದ್ದಾರೆ, ಬಹಳ ಸಂತೋಷ. ಈ ಬಗ್ಗೆ ನಮ್ಮ ಬೆಂಬಲ ನಿಮ್ಮ ಬಗ್ಗೆ ಇದೆ. ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡತಕ್ಕಂಥ ನೂರಕ್ಕೆ 70ರಷ್ಟು ಮಹಿಳೆಯರಿಗೆ ಇವೊತ್ತು ಶೌಚಕ್ಕಾಗಿ ಬಹಿರಂಗ ಸ್ಥಳಗಳಿಗೆ ಹೋಗಬೇಕಾದ ಸ್ಥಿತಿ ಇದೆ. ಅವರಿಗೆ ಯೂವುದೇ ವ್ಯವಸ್ಥೆಯು ಇಲ್ಲ, ಇಂಥ ವಿಚಾರದ ಬಗ್ಗೆ ಒಂದು ನಾಗರೀಕ ಸಮಾಜವು ತಲೆತಗ್ಗಿಸ ಬೇಕಾಗಿದೆ. ಇದೊಂದು ತೀರಾ ಅಮಾನವೀಯವವಾದಂಥ ಪರಿಸ್ಥಿತಿ. ಇದನ್ನು ಕೇವಲ ನೈರ್ಮಲ್ಯದ ಪ್ರಶ್ನೆಯಾಗಿ ಮಾತ್ರ ನಾನು ಹೇಳುತ್ತಾ ಇಲ್ಲ, ಇದು ನಮ್ಮ ನಾಗರೀಕ ಸಮಾಜದ ಮುಂದಿರತಕ್ಕಂಥ ಒಂದು ದೊಡ್ಡ

ಸವಾಲು ಕೂಡ ಆಗಿದೆ. ನೈರ್ಮಲ್ಯದ ಬಗ್ಗೆ ಎಂಥ ಗಂಭೀರ ಸ್ಥಿತಿ ಇದೆ ಎಂಬುದನ್ನು ಅಲ್ಲಿಗೆ ಹೋಗಿ ನೋಡಿದಾಗ ತಿಳಿಯುತ್ತದೆ. ಇವೊತ್ತು ಹಲವಾರು ಕಾರ್ಯಕ್ರಮಗಳಿವೆ. ಪಟ್ಟಣಗಳಿಗಾಗಿ ಒಳಚರಂಡಿ ಮಂಡಳಯೇ ಇದೆ. ಆದರೆ ನಮ್ಮ ಹಳ್ಳಿಗಳಿಗೆ ಮಾತ್ರ ಯಾವುದೇ ಬೋರ್ಡ್ ಇಲ್ಲ. ಅಲ್ಲಿ ಒಳಚರಂಡಿಯೂ ಇಲ್ಲ, ಮೇಲ್ಚರಂಡಿಯೂ ಇಲ್ಲ. ಕೊಳಚೆ ನೀರು ಮೇಲ್ಗಡೆಯೇ ಹರಿದು ಹೋಗ ಬೇಕು. ನಾನು ಎಲ್ಲಾ ವಿವರಗಳನ್ನು ಹೇಳಿದರೆ ಅದು ಕೆಲವರಿಗೆ ಇರಿಸುಮುರಿಸು ಆಗಿ ಸಮಸ್ಯೆಯಾಗ ಬಹುದು. ಇನ್ನು ಕುಡಿಯುವ ನೀರಿನ ಪರಿಸ್ಥಿತಿಯು ನಮ್ಮಲ್ಲಿ ಏನಾಗದೆ ಅಂದರೆ, ಎಲ್ಲರೂ ಕೂಡ ಇದನ್ನು ರಾಜಕೀಯ ಬಂಡವಾಳವಾಗಿ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆಯೇ ಹೊರತು ನಿಜವಾಗಿಯೂ ಸಮಸ್ಯೆಯನ್ನು ಪರಿಹರಿಸಿಲ್ಲ.

ಮಾನ್ಯ ನಜೀರ್‌ಸಾಬ್‌ರವರು ಬೋರ್‌ವೆಲ್‌ಗಳನ್ನು ಹಾಕುವ ಮೂಲಕ ಕರ್ನಾಟಕಕ್ಕೆ ಒಂದು ದೊಡ್ಡ ಕೊಡುಗೆಯನ್ನು ಕೊಟ್ಟರು. ಆದರೆ ಅದೇ ಬೋರ್‌ವೆಲ್‌ಗಳು ಸರಿಯಾಗಿ ರಿಪೇರಿ ಕೂಡ ಆಗುತ್ತಾ ಇಲ್ಲ. ಹಾಕಿರತಕ್ಕಂಥ ಬೋರ್‌ವೆಲ್‌ಗಳಲ್ಲಿ ನೀರು ಇಲ್ಲ. ಎನ್‌ಆರ್‌ಡಬ್ಲ್ಯು ಸ್ಕೀಮ್‌ನಲ್ಲಿ ಮಾಡಿದ ವ್ಯವಸ್ಥೆ ಯಲ್ಲಿ ಕೆಲವುಕಡೆಗಳಲ್ಲಿ ನೀರೇ ಇಲ್ಲ. ಇನ್ನು ಕೆಲವು ಕಡೆಗಳಲ್ಲಿ ಪಂಪ್ ಹಾಕಿಸಿಲ್ಲ. ಹಳ್ಳಿಗಾಡಿನಲ್ಲಿ ನೀರಿಗಾಗಿ 5-6 ಕಿ.ಮಿಗಳಷ್ಟು ದೂರ ಹೋಗಬೇಕಾಗಿದೆ. ಈ ಎಲ್ಲಾ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗ್ರಾಮೀಣ ನೈರ್ಮಲ್ಯದ ಬಗ್ಗೆ ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ಹೆಚ್ಚಿನ ಹಣವನ್ನು ಸರಕಾರದವರು ಒದಗಿಸದೇ ಹೋದರೆ ನೈರ್ಮಲ್ಯ ಸ್ಥಿತಿಯನ್ನು ಕಾಪಾಡಲು ಮತ್ತು ಅದನ್ನು ಉತ್ತಮಪಡಿಸಲು ಯಾವುದೇ ರೀತಿಯಲ್ಲಿ ಕೂಡ ಸಾಧ್ಯವಾಗುವುದಿಲ್ಲ. ಅಂಥ ಒಂದು ಕಾರ್ಯಕ್ರಮವನ್ನು ಇಡಬೇಕಾಗಿತ್ತು. ಆದರೆ ಅದನ್ನು ಇಟ್ಟ ಬಗ್ಗೆ ಯಾವುದೇ ಸೂಚನೆಗಳು ಇಲ್ಲ. ಇನ್ನು ಆರೋಗ್ಯ ಕಾರ್ಯಕ್ರಮಗಳನ್ನು ಹೆಚ್ಚು ಹಾಕಿಕೊಳ್ಳುತ್ತೇವೆ ಮತ್ತು ಆರೋಗ್ಯದ ಕುರಿತಾದ ಕಾರ್ಯಕ್ರಮಗಳ ಬಗ್ಗೆ ಅಧಿಕ ಗಮನ ಕೊಡುತ್ತೇವೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಮತ್ತು ಆರೋಗ್ಯ ಕೇಂದ್ರಗಳನ್ನು ಹೆಚ್ಚುಮಾಡುತ್ತೇವೆ ಮತ್ತು ಇರುವುದನ್ನು ಉತ್ತಮಪಡಿಸುತ್ತೇವೆಂದು ಹೇಳಿದ್ದಾರೆ. ಹೆಚ್ಚು ಮಾಡಬೇಕು ಉತ್ತಮ ಪಡಿಸಬೇಕು ನಿಜ ಆದರೆ ಡಾಕ್ಟರ್‌ಗಳು

ಎಷ್ಟು ಜನ ಇದ್ದಾರೆ ಹಳ್ಳಿಗಳಲ್ಲಿ? ನನ್ನ ಕ್ಷೇತ್ರದಲ್ಲಿ ಎರಡು ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ ಅಧ್ಯಕ್ಷರೇ, ಒಂದೂವರೆ ವರ್ಷದಿಂದ ಆ ತಾಲ್ಲೂಕು ಕೇಂದ್ರಗಳಿರತಕ್ಕ ಆಸ್ಪತ್ರೆಗಳಲ್ಲಿ ಒಬ್ಬರೇ ಡಾಕ್ಟರ್ ಇರುವುದು. ಮಹಿಳಾ ವೈದ್ಯರಿಲ್ಲ. ಬೇರೆ ಡಾಕ್ಟರಿಲ್ಲ ಒಬ್ಬರೇ ವೈದ್ಯರಿದ್ದಾರೆ. ಬಹುಶಃ ಬೇರೆ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇದೆ. ಆರೋಗ್ಯ ಕೇಂದ್ರಗಳಲ್ಲಿ ಆಸ್ಪತ್ರೆ ಇದ್ದರೆ ಡಾಕ್ಟರಿಲ್ಲ, ಡಾಕ್ಟರು ಆಸ್ಪತ್ರೆ ಇದ್ದರೆ ಔಷಧಿಇಲ್ಲ. ಸರ್ಕಾರ ಔಷಧಿ ಏನು ಒದಗಿಸುತ್ತಿದೆ ಅವು ಎಷ್ಟು ದುರುಪಯೋಗವಾಗುತ್ತಿದೆ ಎಂಬುದು ಬಹಳ ಮುಖ್ಯವಾದ ಪ್ರಶ್ನೆ ಇವತ್ತು ಹಲವಾರು ಕಡೆ ಸರ್ಕರ ಒದಗಿಸುವ ಔಷಧಿಗಳನ್ನು ಅಧಿಕಾರಿಗಳು ಬಹಿರಂಗವಾಗಿ ಮಾರಾಟ ಮಾಡುತ್ತಾರೆ. ಅದರಲ್ಲೇನು ಮುಚ್ಚುಮರೆ ಇಲ್ಲ. ಇನ್ನು ಸರ್ಕಾರಿ ಆಸ್ಪತ್ರೆಯ ಡಾಕ್ಟರುಗಳಿಗೆ ಆ ಸರ್ಕಾರಿ ಆಸ್ಪತ್ರೆಗಳಿಗಿಂತ ಅವರು ನಡೆಸುವ ನರ್ಸಿಗ್‌ಹೋಂಗಳು ಮತ್ತು ಕ್ಲೀನಿಕ್‌ಗಳೇ ಬಹಳ ಮುಖ್ಯ. ಸರ್ಕಾರಿ ಆಸ್ಪತ್ರೆಗೆ ಬಂದು ಅಟೆನ್ಡನ್ಸ್ ಹಾಕುವುದೇ ಅವರ ಕಲಸ, ಆದರೆ ಅವರು ಪೂರ್ತಿ ಕೆಲಸ ಮಾಡುವುದು ಅವರ ಸ್ವಂತ ಕ್ಲಿನಿಕ್ ಮತ್ತು ನರ್ಸಿಗ್ ಹೋಂಗಳಲ್ಲಿ.

ಇದರ ಬಗ್ಗೆ ಸರ್ಕಾರ ಏನಾದರೂ ಕಠಿಣವಾದ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಮಾನ್ಯ ಕೃಷಿ ಸಚಿವರೇ ಒಂದ್ಸಲ ನಮ್ಮ ಜಿಲ್ಲೆಗೆ ಬಂದರು. ಅವರು ಬಂದಾಗ 11.30 ಅಲ್ಲೊಂದು ಸರ್ಕಾರಿ ಆಸ್ಪತ್ರೆ ಇದೆ, ಹನ್ನೊಂದುವರೆ ಆದರೂ

ಡಾಕ್ಟರಿಲ್ಲ. ಕೃಷಿ ಸಚಿವರೇ ಬಂದು ನೋಡಿದ್ದಾರೆ ಆದರೆ ಇವತ್ತಿಗೂ ಏನೂ ಕ್ರಮ ಜರುಗಿಲ್ಲ. ಈ ರೀತಿಯಾದ ಪರಿಸ್ಥಿತಿ ಆ ಡಾಕ್ಟರುಗಳು ತಮ್ಮ ಸ್ವಂತ ಕ್ಲಿನಿಕ್‌ಗಳಿಗೆ ಕೊಡುತ್ತಿರುವ ಗಮನ ಸರ್ಕಾರಿ ಆಸ್ಪತ್ರೆಗಳಿಗೆ ಕೊಡುತ್ತಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ನೇಮಕ ಪರಿಣಾಮಕಾರಿಯಾಗಬೇಕು. ಸರ್ಕಾರ ಕೊಡುವ ಔಷಧಿಗಳನ್ನು ಹೆಚ್ಚು ಮಾಡಬೇಕಾಗಿದೆ ಮತ್ತು ಬೇಕಾದ ಸಲಕರಣೆಗಳನ್ನು ಕೂಡ ಹೆಚ್ಚು ಮಾಡಕದೇಹೋದರೆ ಆಸ್ಪತ್ರೆಗಳ ಗುಣಮಟ್ಟವನ್ನು ಹೆಚ್ಚುಮಾಡಲಿಕ್ಕೆ ಸಾಧ್ಯವಿಲ್ಲ. ಹಳ್ಳಿಗಾಡುಗಳಲ್ಲಿ ಯಾವುದಾದರೂ ಒಂದು ಸಣ್ಣ ಕಾಯಿಲೆ ಬಂದರೂ ಬೆಂಗಳೂರಿಗೆ ಕರೆದುಕೊಂಡು ಹೋಗಿ ಎಂದು ಹೇಳಿಬಿಡುತ್ತಾರೆ. ಅಲ್ಲಿ ಸರಿಯಾದ ವ್ಯವಸ್ಥೆ ಇರುವುದಿಲ್ಲ. ಮಧ್ಯರಾತ್ರಿಯಲ್ಲಿ ಸಮಸ್ಯೆ ಬರುತ್ತದೆ ಎಲ್ಲಿಗೆ ಕರೆದುಕೊಂಡು ಹೋಗಬೇಕು? ಮುಖ್ಯವಾಗಿ ಹಳ್ಳಿಗಾಡುಗಳ ಕಡೆ ಹಾವು ಕಚ್ಚುವುದು ಜಾಸ್ತಿ. ಹಳ್ಳಿಗಾಡಿನ ಎಲ್ಲ ಆಸ್ಪತ್ರೆಗಳಲ್ಲಿ ಹಾವು ಕಚ್ಚಿದರೆ ಔಷಧಿ ಇಲ್ಲ. ಹಾವು ಕಚ್ಚಿ ಆಸ್ಪತ್ರೆಗೆ ಕರೆದೊಯ್ದರೆ ಬೆಂಗಳೂರಿಗೆ ಹೋಗಿ ಅಂತಾರೆ, ಬೆಂಗಳೂರಿಗೆ ಬರುವಷ್ಟರಲ್ಲಿ ಅವನು ಮಧ್ಯದಾರಿಯಲ್ಲೇ ಸತ್ತುಹೋಗಿರುತ್ತಾನೆ. ಅವನು ಬದುಕಲಿಕ್ಕೆ ಸಾಧ್ಯವಿಲ್ಲ. ಇಂತಹ ಪರಿಸ್ಥಿತಿ ಇದೆ.

ಕೆಲವು ಅಗತ್ಯವಾದ ಔಷಧಿಗಳು ಮತ್ತು ಜೀವರಕ್ಷಕ ಔಷಧಿಗಳನ್ನು ಸರ್ಕಾರ ಪ್ರಾಧಾನ್ಯ ಕೊಟ್ಟು ಹೆಚ್ಚು ಒದಗಿಸಬೇಕು. ಆಗ ಮಾತ್ರ ಆಸ್ಪತ್ರೆಗಳನ್ನು ನಾವು ಉತ್ತಮಪಡಿಸಲು ಸಾಧ್ಯ ಆಗುತ್ತದೆ. ನಾವು ಒಟ್ಟಾರೆ ಕರ್ನಾಟಕ ರಾಜ್ಯದ ಪ್ರಗತಿಯನ್ನು ನೋಡಬೇಕಾದರೆ ಆ ಪ್ರಗತಿ ಆಗಬೇಕೂಂತಾದರೂ ಅದಕ್ಕೆ ನಿರ್ದಿಷ್ಟವಾದ ಗುರಿ ಇರಬೇಕು ಅದು ನಾಳೆಯೇ ಆಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆ ಸ್ಪಷ್ಟ ಗುರಿಯೆಡೆಗೆ ದಿಟ್ಟವಾದ ಹೆಜ್ಜೆ ಇಟ್ಟರೆ ಮಾತ್ರ ಯಾವುದೇ ಒಂದು ಸರ್ಕಾರ ರಾಜ್ಯವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಕರ್ನಾಟಕದಲ್ಲಿ ಒಂದು ಕಡೆ ಕೈಗಾರಿಕಾ ಅಭಿವೃದ್ಧಿ ಆಗಬೇಕು ಇನ್ನೊಂದು ಕಡೆ ಕೃಷಿ ಅಭಿವೃದ್ಧಿ ಆಗಬೇಕು. ಕೃಷಿಯಲ್ಲಿ ಮುಖ್ಯವಾದ ಸಮಸ್ಯೆ ಕೃಷಿ ಕಾರ್ಮಿಕರದ್ದು. ಕೃಷಿ ಕಾರ್ಮಿಕರಲ್ಲಿ ನೂರಕ್ಕೆ 80 ಭಾಗ ಇರುವುವರು ಪರಿಶಿಷ್ಟ ಜಾತಿ ಪಂಗಡದವರು. ಅವರ ಪರಿಸ್ಥಿತಿ ಏನಾಗಿದೆ ಎಂದರೆ ಹೇಳಲು ದುಃಖವಾಗುತ್ತದೆ. ನಾವೆಲ್ಲರೂ ಅದರ ಬಗ್ಗೆ ಭಾಷಣ ಮಾಡಿದ್ದೇವೆ, ಅದರ ಬಗ್ಗೆ ಸಂತೃಪ್ತಿ ಪಟ್ಟುಕೊಳ್ಳುವುದೇನೆಂದರೆ ನಾವು ಅವರಿಗೆ ಮೀಸಲಾತಿ ಕೊಟ್ಟುಬಿಟ್ಟಿದ್ದೇವೆ ಎಂದು ಚುನಾವಣೆಯಲ್ಲಿ ರಿಸರ್ವೇಶನ್ ಶಿಕ್ಷಣದಲ್ಲಿ ರಿಸರ್ವೇಶನ್ ನಾನು ಖಂಡಿತ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ನಾನು ಮೀಸಲಾತಿ ವಿರೋಧಿಯಲ್ಲ. ಆದರೆ ಈ ಮೀಸಲಾತಿಯಿಂದ ಅವರನ್ನು ನಾವು ಉದ್ಧಾರ ಮಾಡುತ್ತೇವೆಂದು ಯಾರಾದರೂ ಅಂದುಕೊಂಡಿದ್ದರೆ ಅದು ಖಂಡಿತ ಸಾಧ್ಯವಿಲ್ಲ, ನಾವು 20 ವರ್ಷಗಳಿಂದ ನೋಡಿದ್ದೇವೆ.

ಆದರೆ ಮೂಲಭೂತವಾಗಿ ಅವರಿಗೆ ಏನಾಗಬೇಕು ಅಂದರೆ ಅವರು ಆತ್ಮಗೌರವದಿಂದ ಏನಾದರೂ ಹಳ್ಳಿಯಲ್ಲಿ ಇರಬೇಕಾದರೆ ಮೊದಲನೆಯದಾಗಿ ಅವರು ಸ್ವಂತ ಕಾಲ ಮೇಲೆ ಸ್ವಂತ ದುಡಿಮೆ ಮೇಲೆನಿಂತುಕೊಳ್ಳಬೇಕು. ಅದಕ್ಕೆ ಬೇಕಾದ ಅವಶ್ಯಕತೆ ಒದಗಿಸಿ. ಹಳ್ಳಿಗಾಡುಗಳಲ್ಲರುವವರಿಗೆ ಮೊದಲು ಭೂಮಿ ಕೊಡಿ. ಒಂದೊಂದು ಕುಟಂಬಕ್ಕೆ ಎರಡು ಎಕರೆ ಭೂಮಿ ಕೊಡಿ ಮತ್ತು ಅದಕ್ಕೆ ನೀರಿನ ವ್ಯವಸ್ಥೆ ಮಾಡಿಕೊಡಿ ಇನ್ನಾವುದೇ ಸಹಾಯ ಅವರಿಗೆ ಮಾಡಬೇಡಿ. ಅವರಿಗೆ ಗೊತ್ತಿದೆ, ಅವರು ಬದುಕುತ್ತಾರೆ, ಅವರು ಪ್ರಾಮಾಣಿಕವಾಗಿ ಕೆಲಸ ಮಾಡುವಂತಹ ಜನ ದುಡಿಯುವಂತಹ ಜನ. ಇವತ್ತು ಆ ಕೃಷಿ ಕಾರ್ಮಿಕರಿಗೆ ಭೂಮಿ ಇಲ್ಲ, ಇನ್ನೊಂದು ಕಡೆಗೆ ಅವರು ಕೊಡುವಂತಹ ಜನ. ಇವತ್ತು ಆ ಕೃಷಿ ಕಾರ್ಮಿಕರಿಗೆ ಭೂಮಿ ಇಲ್ಲ. ಇನ್ನೊಂದು ಕಡೆ ಅವರು ಕೊಡುವಂತಹ ಕೂಲಿ ಪ್ರಶ್ನೆ. ನಾವು ಕೂನೂನು ಮಾಡಿಬಿಟ್ಟಿದ್ದೇವೆ 11 ರೂ ಎಸ್‌ಆರ್‌ನಲ್ಲಿ ಕೊಡುತ್ತೇವೆ 26 ರೂ ಕೂನಾನು

ಮಾಡಿದ್ದೇವೆ, ಕೃಷಿ ಕಾರ್ಮಿಕರಿಗೆ ವೇತನ ಸಿಗುತ್ತದೆ ಅಂತ. ಅಧ್ಯಕ್ಷರೇ, 26 ರೂ ಕಾನೂನು ಮಾಡಿರಬಹುದು ಅದು ಖಂಡಿತ ಎಲ್ಲೂ ಜಾರಿಗೆ ಬಂದಿಲ್ಲ, ಬರಲೂ ಸಾಧ್ಯವಿಲ್ಲ. ಕಾರಣ ಇಷ್ಟೆ ಕೆಲವು ಒಣ ಬೇಸಾಯ ಇರುವ ಪ್ರದೇಶಗಳಲ್ಲಿ 26 ರೂ. ಕೂಲಿ ಕೊಟ್ಟರೆ ರೈತ ಸತ್ತು ಹೋಗುತ್ತಾನೆ. ಇನ್ನು ವಾಣಿಜ್ಯ ಬೆಳೆ ಬೆಳೆಯುವ ಕಡೆ 26 ರೂ ಕೂಲಿಕೊಟ್ಟು ಬದುಕಲಿಕ್ಕೆ ಸಾಧ್ಯವಿಲ್ಲ. ಇವತ್ತು ನಾವೆಲ್ಲರೂ ಆತ್ಮಶೋಧನೆ ಮಾಡಿಕೊಳ್ಳಬೇಕಾಗಿದೆ. ಈ 26 ರೂ. ಕೊಟ್ಟಿವಿ ಅಂತ ಇಟ್ಟುಕೊಳ್ಳಿ ಕೃಷಿ ಕಾರ್ಮಿಕರಿಗೆ ಅದರಿಂದ ಆ ಮನುಷ್ಯ ಇವತ್ತು ಬದುಕಲಿಕ್ಕೆ ಸಾಧ್ಯವಿದೆಯಾ?

ಅವನ ಹೆಂಡತಿ ಮಕ್ಕಳು ಬದುಕಲು ಸಾಧ್ಯವಿದೆಯೂ? ಅವನು ಇವತ್ತು ಉಪಯೋಗಿಸುತ್ತಿರುವ ವಸ್ತುಗಳ ಬೆಲೆ ಏನಿದೆ? ಅಕ್ಕಿ ಗೋಧಿ ಸಕ್ಕರೆ ಬೆಲೆಗಳು ವಿಪರೀತವಾಗಿ ಏರುತ್ತಿರುವ ಸಂದರ್ಭದಲ್ಲಿ 26 ರೂ 30 ರೂ ನಾವು ಕನಿಷ್ಠ ಕೂಲಿ ನಿಗದಿ ಮಾಡಿದ್ದರೂ ಅದರಿಂದ ಅವನು ತನ್ನ ಹೆಂಡತಿ ಮಕ್ಕಳೊಡನೆ ಬದುಕಲಿಕ್ಕೆ ಸಾಧ್ಯವಿಲ್ಲ. ಎರಡು ಹೊತ್ತು ಊಟ ಮಾಡಲು ಮೈತುಂಬಾ ಬಟ್ಟೆಹಾಕಲು ಸಾಧ್ಯವಿಲ್ಲ. ಅಂತಹ ಪರಿಸ್ಥಿತಿಯಿಂದ ಅವನು ನಾವು ತಪ್ಪಿಸಬೇಕಾಗಿದೆ. ಅವರು ಇವತ್ತು ಏಕೆ ಸ್ವಾಭಿಮಾನ ಕಳೆದುಕೊಂಡಿದ್ದಾರೆ, ಏಕೆ ಇವತ್ತು ಅವರು ಮಾರಾಟದ ಸರಕುಗಳಾಗಿದ್ದಾರೆ? ಯಾಕೆ ಇವತ್ತು ಅವರು ಅವಹೇಳನಕ್ಕೆ ಗುರಿ ಯಾಗಿದ್ದಾರೆ? ಏಕೆಂದರೆ ಅವರಿಗೆ ಆರ್ಥಿಕ ಸ್ವಾತಂತ್ರ್ಯ ಇಲ್ಲ. ಆರ್ಥಿಕವಾಗಿ ತನ್ನ ಕಾಲ ಮೇಲೆ ನಿಂತು ಜೀವಿಸುವ ಶಕ್ತಿ ಇಲ್ಲ. ಅದಕ್ಕೋಸ್ಕರ ಇವತ್ತು ಹಳ್ಳಿಗಾಡುಗಳಲ್ಲಿರುವ ಜಮೀನುದಾರರ ಬಡ್ಡಿ ವ್ಯಾಪಾರಿಗಳ ಮುಂದೆ ಕೈಕಟ್ಟಿ ತಲೆಬಾಗಿ ನಿಂತು ಕೊಳ್ಳುವ ಪರಿಸ್ಥಿತಿ ಬಂದಿದೆ. ಹಳ್ಳಿಗಾಡು ಪ್ರದೇಶಗಳಲ್ಲಿ ಅವರ ವಿರೋಧ ಕಟ್ಟಿಕೊಂಡರೆ ಬದುಕಲಿಕ್ಕೆ ಸಾಧ್ಯವಿಲ್ಲ. ಎಲ್ಲದಕ್ಕೂ ಅವರ ಮೇಲೆ ಅವಲಂಬಿಸಬೇಕಾಗಿದೆ ಅದಕ್ಕೆ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ ನೀವು ಏನೆಲ್ಲ ಮಾಡಿದರೂ ಮೊತ್ತಮೊದಲು ಮಾಡಬೇಕಾಗಿರುವುದು ಸರ್ಕಾರ ಆ ಉಳುವ ಕೃಷಿ ಕಾರ್ಮಿಕರಿಗೆ ಭೂಮಿ ಕೊಡಿ, ಅವನು ಕೃಷಿ ಮೊದಲು ಬೇಕಾಗಿರುವ ಪ್ರಾಥಮಿಕ ವ್ಯವಸ್ಥೆ ಮಾಡಿಕೊಟ್ಟರೆ ಮಾತ್ರ ಆತ ಬದುಕಲು ಸಾಧ್ಯವಾಗುತ್ತದೆ. ಆತ ಬದುಕಿದರೆ ಮಾತ್ರ ಈ ದೇಶದ ಕೃಷಿ ಬದುಕಲು ಸಾಧ್ಯವಾಗುತ್ತದೆ ಅವನಿಲ್ಲದೆ ಕೃಷಿ ಬದುಕಲು ಸಾಧ್ಯವಿಲ್ಲ. ಕೃಷಿ ಉತ್ಪಾದನೆ ಹೆಚ್ಚಾಗಲಿಕ್ಕೆ ಸಾಧ್ಯವಿಲ್ಲ.

107 ಲಕ್ಷ ಹೆಕ್ಟೇರ್ ಭೂಮಿ ಕರ್ನಾಟಕದಲ್ಲಿ ಕೃಷಿಯೋಗ್ಯ ಭೂಮಿ ಇದೆ. ಅದರಲ್ಲಿ ನೀವು ಹಂಚಿರುವುದು ಒಂದು ಲಕ್ಷ 25 ಸಾವಿರ ಎಕರೆ ಮಾತ್ರ, ಅದೂ 25 ಸಾವಿರ ಕುಟುಂಬಗಳಿಗೆ ಮಾತ್ರ. ಉಳಿದ ಕೃಷಿಯೋಗ್ಯ ಭೂಮಿ ಬಗ್ಗೆ ನಾನು ಕಳೆದ ಬಜೆಟ್‌ನಲ್ಲಿ ಹೇಳಿದ್ದೇನೆ, ಅದನ್ನು ತೆಗೆದುನೋಡಿ ಮತ್ತೆ ಪುನರಾವರ್ತನೆ ಮಾಡುವುದಿಲ್ಲ. 107 ಲಕ್ಷ ಹೆಕ್ಟರ್ ಭೂಮಿಯನ್ನು ನೀವು ಹಂಚಬೇಕು ಅದನ್ನು ಹಂಚಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ, ಅದನ್ನು ಹಂಚಿದರೆ ಮಾತ್ರ ಕೃಷಿಯಲ್ಲಿ ಉತ್ಪಾದನೆ ಜಾಸ್ತಿಯಾಗುತ್ತದೆ ಇನ್ನೊಂದು ಕಡೆ ಆಧುನಿಕವಾಗಿ ಮನುಷ್ಯನ ಬೆಳವಣಿಗೆ ಹೆಚ್ಚಿ ಆಗ ಅಂತರಿಕ ಮಾರುಕಟ್ಟೆ ಹೆಚ್ಚಾಗುತ್ತದೆ. ಏಕೆ ಕೈಗಾರಿಕೆಗಳು ಇವತ್ತು ರೋಗಗ್ರಸ್ತವಾಗಿದೆ. ಒಂದು ಕೈಗಾರಿಕೆಗಳಲ್ಲಿ ಉತ್ಪನ್ನವಾಗುವ ಸರಕುಗಳಿಗೆ ಮಾರುಕಟ್ಟೆ ಇಲ್ಲ, ಇನ್ನೊಂದು ಆ ಕೈಗಾರಿಕೆಗಳಲ್ಲಿ ಸರಕುಗಳ ಹೆಚ್ಚುವರಿ ಉತ್ಪಾದನೆಯಾಗುತ್ತಿದೆ. ಆದ್ದರಿಂದ ಇವತ್ತು ಕೈಗಾರಿಕೆಗಳು ನಷ್ಟ ಅನುಭವಿಸುತ್ತಿವೆ. ಇನ್ನೊಂದು ಮಿಸ್‌ಮ್ಯಾನೇಜ್‌ಮೆಂಟಿದೆ. ಅದು ವಿವರ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅದು ಹೇಳಿದರೆ ದೊಡ್ಡ ಚರಿತ್ರೆಯಾಗುತ್ತದೆ. ನಮ್ಮ ಅಧ್ಯಕ್ಷರಿಗೂ ಗೊತ್ತಿದೆ, ಅವರು ಹಿಂದೆ ಯಾವುದೇ ಒಂದು ಕಮಿಟಿಯ ಅಧ್ಯಕ್ಷರಾಗಿದ್ದಾಗ ಅವರ ಅನುಭವ ನನಗೆ ಹೇಳಿದ್ದಾರೆ. ಸರ್ಕಾರಿ ಕಾರ್ಖಾನೆಗಳು ಹೇಗೆ ಏತಕ್ಕಾಗಿ ನಷ್ಟ

ಅನುಭವಿಸುತ್ತವೆ ಎಂದು. ಅಧ್ಯಕ್ಷರು ಅವಕಾಶ ಕೊಟ್ಟರೆ ಆ ಪಟ್ಟಿ ಬೇಕಾದರೆ ನಾನು ಕೊಡುತ್ತೇನೆ, ಏತಕ್ಕಾಗಿ ಅವು ನಷ್ಟ ಅನುಭವಿಸುತ್ತಿವೆ ಎಂದು ಇವತ್ತು ಕೈಗಾರಿಕೆಗಳಲ್ಲಿ ಉತ್ಪಾದನಾ ವೆಚ್ಚ ಒಂದು ಕಡೆ ಹೆಚ್ಚಾದರೆ

ಅಧ್ಯಕ್ಷರು : ಇದು ಮೂಲಭೂತವಾದ ನೀತಿ. ನಮ್ಮದು ಫೆಡರಲ್ ಸಿಸ್ಟಂ, ಪ್ರೈಸಿಂಗ್ ಪಾಲಿಸಿ ಕೃಷಿ ನೀತಿ ಕೈಗಾರಿಕೆ ನೀತಿ ಇವೆಲ್ಲ ಮೂಲಭೂತವಾಗಿ ಚರ್ಚೆಯಾಗಿ ರೂಪಿತಗೊಳ್ಳಬೇಕಾಗಿರುವುದು ಲೋಕಸಭೆಯಲ್ಲಿ. ನೀವು ವಿಷಯ ತಿಳಿದುಕೊಂಡಿದ್ದೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ಮೂಲಭೂತ ಸಮಸ್ಯೆ ಪರಿಹಾರ ಮಾಡಲಿಕ್ಕೆ ರಾಜ್ಯಸರ್ಕಾರಕ್ಕೆ ಅಧಿಕಾರ ಇಲ್ಲ ಎಂದು ನನಗೆ ಸ್ಪಷ್ಟವಾಗಿ ಗೊತ್ತಿದೆ. ಆದರೆ ರಾಜ್ಯಸರ್ಕಾರ ಪ್ರಾಮಾಣಿಕವಾಗಿ ತನ್ನ ಕರ್ತವ್ಯ ಮಾಡಬೇಕು. ಕೃಷಿ ಕಾರ್ಮಿಕರ ಕೃಷಿವೇತನದ ಪ್ರಶ್ನೆಯನ್ನು 9ನೇ ಶೆಡ್ಯೂಲ್‌ಗೆ ಸೇರಿಸಲು ಏಕೆ ಕರ್ನಾಟಕ ಸರ್ಕಾರ ಒತ್ತಾಯ ಮಾಡಬಾರದು? ಭೂಮಿಯನ್ನು ಹಂಚಿಕೆ ಮಾಡುವ ಪ್ರಶ್ನೆಯನ್ನು 9ನೇ ಶೆಡ್ಯೂಲ್‌ಗೆ ಸೇರಿಸುವಂತೆ ಏಕೆ ನಮ್ಮ ಸರ್ಕಾರ ಒತ್ತಾಯ ಮಾಡಬಾರದು? ಇದು ರಾಜ್ಯಸರ್ಕಾರದ ವ್ಯಾಪ್ತಿಗೆ ಬರುತ್ತದೆ ಇಷ್ಟಾದರೂ ಮಾಡಬಹುದಲ್ಲ, ವಿದ್ಯುತ್ ರಾಜ್ಯಸರ್ಕಾರದ ವ್ಯಾಪ್ತಿಗೆ ಬರುತ್ತದೆ ಅದು ಮಾಡಬಹುದಲ್ಲ. ರೈತನಿಗೆ ಒಳ್ಳೆಯ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡುವುದು ರಾಜ್ಯಸರ್ಕಾರದ ವ್ಯಾಪ್ತಿಗೆ ಬರುತ್ತದೆ. ಅದನ್ನು ಮಾಡಬಹುದಲ್ಲ.

4.10 ಪಿ.ಎಂ

ನಾನು ಅಷ್ಟನ್ನು ಮಾತ್ರ ಹೇಳುತ್ತಿರುವುದು, ನಾನು ಇಡೀ ಆರ್ಥಿಕ ವ್ಯವಸ್ಥೆಯನ್ನು ಬದಲಾವಣೆ ಮಾಡಲಿಕ್ಕೆ ಒಂದು ಕಾರ್ಯಕ್ರಮವನ್ನು ಹಾಕಿ ಎಂದು ಖಂಡಿತವಾಗಿಯೂ ಹೇಳುತ್ತಿಲ್ಲ. ನನಗೆ ಸ್ಪಷ್ಟವಾಗಿ ಗೊತ್ತಿದೆ. ಅದು ರಾಜ್ಯ ಸರ್ಕಾರದಿಂದ ಸಾಧ್ಯವಿಲ್ಲ ಎಂದು. ಆದರೆ ಆ ದಿಕ್ಕಿನಲ್ಲಿ ಜನತೆ ನಿಮಗೆ ವೋಟನ್ನು ಕೊಟ್ಟಿದ್ದಾರೆ. ಪರ್ಯಾಯವಾದ ವ್ಯವಸ್ಥೆ ಬರಬೇಕು ಎಂದು ಹೇಳಿ.ಆ ದಿಕ್ಕಿನಲ್ಲಿ ಆಲೋಚನೆ ಮಾಡಬೇಕು. ಕನಿಷ್ಠ ನೀವು ಆಲೋಚನೆಯನ್ನೇನಾದರೂ ಮಾಡಬೇಕಲ್ಲ. ನೀವು ಎಷ್ಟು ಮಾಡುತ್ತೀರಿ ಎನ್ನುವ ಪ್ರಶ್ನೆ ಬೇಡ. ಆ ದಿಕ್ಕಿನಲ್ಲಾದರೂ ಕನಿಷ್ಠ ಆಲೋಚನೆ ಮಾಡಬೇಕು. ಆಗ ನಾವು ಸಂಪೂರ್ಣವಾದ ರಾಜ್ಯದ ಬೆಳವಣಿಗೆಯನ್ನು ಕಾಣಬಹುದಾಗಿದೆ. ಅಂಥ ಒಂದು ಕಾರ್ಯಕ್ರಮವನ್ನು ರೂಪಿಸುಬೇಕಾಗಿತ್ತು. ಆದರೆ ಇದರಲ್ಲಿ ರೂಪಿಸಿಲ್ಲ ಎನ್ನುವುದು ಒಂದು ಸ್ಪಷ್ಟವಾಗಿದೆ. ಮತ್ತೆ ವಿಕೇಂದ್ರೀಕರಣದ ಪ್ರಶ್ನೆ ನಾನು ಪದೇ ಪದೇ ಹೇಳುತ್ತಿದ್ದೇನೆ.''ಸ್ಥಳೀಯ ಸ್ವಯಂ ಸಂಸ್ಥೆಗಳ ಮೂಲಕ ವಿಕೇಂದ್ರೀಕೃತ ಶಾಸನಬದ್ಧ ಅಧಿಕಾರವನ್ನು ಜನತೆಗೆ ಕೊಡುವಲ್ಲಿ ನನ್ನ ರಾಜ್ಯವೇ ಮೊಟ್ಟ ಮೊದಲನೆಯದು'' ಎಂದು ಹೇಳುವುದು ಸರಿಯಲ್ಲ. 1985-86 ನೇ ಇಸವಿಯಲ್ಲಿ ಇದನ್ನು ಜಾರಿಗೆ ತಂದಿರುವುದು. 1978 ನೇ ಇಸವಿಯಲ್ಲಿ ಇಡೀ ದೇಶದಲ್ಲಿ ಮೊಟ್ಟ ಮೊದಲಬಾರಿಗೆ ಗ್ರಾಮ ಪಂಚಾಯಿತಿ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು ಪಶ್ಚಿಮ ಬಂಗಾಳದ ಸರ್ಕಾರ ಇದಕ್ಕಿಂತ ಮೊದಲು ಕಾನೂನು ಇತ್ತು. 1956ರಲ್ಲಿ ಅಶೋಕ್ ಮೆಹ್ತಾ ಕಮಿಟಿ ರೆಕಮೆಂಡ್ ಮಾಡಿದಾಗಲೇ ಇತ್ತು ಅದಲ್ಲ ಪ್ರಶ್ನೆ. ನಿಜವಾದ ಸ್ವಯಂ ಅಧಿಕಾರವನ್ನು ಕೊಟ್ಟಿದ್ದು ಅಶೋಕ್ ಮೆಹ್ತಾ ಕಮಿಟಿ 1956 ರಲ್ಲಿ ರೆಕಮ್ಮೆಂಡ್ ಮಾಡಿದ್ದರು. ಅದು ನನಗೂ ಗೊತ್ತಿದೆ. ಆದರೆ ಯಾರೂ ಜಾರಿ ಮಾಡಲಿಲ್ಲ. ಆದರೆ ಅದೇ ಕಾಂಗ್ರೆಸ್ ಸರ್ಕಾರ ನೀವು ಕೂಡ ಕಾಂಗ್ರೆಸ್ ಸರ್ಕಾರದಲ್ಲಿದ್ದರೇ.

ಅಶೋಕ್‌ಮೆಹ್ತಾ ಸಮಿತಿ ವರದಿಯನ್ನು ನೀವು ಕೂಡ ಜಾರಿ ಮಾಡಲಿಲ್ಲ. 74 ನೇ ಅಮೆಂಡ್‌ಮೆಂಟನ್ನು ತಂದಾಗ ಪಾರ್ಲಿಮಂಟ್‌ನಲ್ಲಿ ರಾಜೀವ್‌ಗಾಂಧಿ ಪಾರ್ಲಿಮೆಂಟ್‌ನಲ್ಲಿ

ಅಮೆಂಡ್‌ಮೆಂಟ್ ಬಿಲ್ಲನ್ನು ತಂದರೆ ಇದರ ಬಗ್ಗೆ ಹಲವಾರು ರಾಜಕೀಯ ಪಕ್ಷಗಳು ಅದನ್ನು ವಿರೋಧ ಮಾಡಿ ಸಭಾತ್ಯಾಗ ಮಾಡಿದಂಥ ಜನರೂ ಇದ್ದಾರೆ. ಅದನ್ನು ನೀವು ಸಮರ್ಥನೆ ಮಾಡುತ್ತಿದ್ದೀರಿ. ಅದನ್ನು ಸೋಲಿಸಿದ್ದಾರೆ. ಅವರೇ ಇವತ್ತು 74 ನೇ ಅಮೆಂಡ್‌ಮೆಂಟ್ ಬಾರಿ ಚೆನ್ನಾಗಿದೆ ಎಂದು ಹೊಗಳುತ್ತಿದ್ದಾರೆ. ಆ ವಿಪರ್ಯಾಸವನ್ನು ಹೇಳಬೇಕಾದರೆ ಅದು ದೊಡ್ಡ ಚರಿತ್ರೆಯಾಗುತ್ತದೆ. ನಾನು ಹೇಳುವುದಿಲ್ಲ. ಇದು ಸ್ಪಷ್ಟವಾಗಿದೆ. ನಾವು ಈ ರೀತಿ ಹೇಳಬಾರದು. ಅದು ನಿಮಗೂ ಗೊತ್ತಿದೆ. ಯಾರು ಅವತ್ತು ಸಭಾತ್ಯಾಗ ಮಾಡಿದರು ಎಂದು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನೀವು ಛಾಲೆಂಜ್ ಮಾಡುವುದಕ್ಕೆ ಹೋಗಬೇಡಿ. ಯಾವ ಕಾರಣಕ್ಕೆ ಮಾಡಿದರು ಎಂದು ನಮಗೂ ಗೊತ್ತಿದೆ. ಆದರೆ ಈ ಕಡೆ ತೋರಿಸಿ ಹೇಗೆ ಮಾಡಿದ್ದಾರೆ ಎನ್ನುವುದನ್ನು ನೀವು ಹೇಳಬೇಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ನನಗಿಂತ ಹೆಚ್ಚು ಓದಿಕೊಂಡವರು. ನಿಮಗೂ ಗೊತ್ತಿದೆ.

ಅಧ್ಯಕ್ಷರು : ನೀವು ಶಿವಕುಮಾರ್ ಕಡೆ ನೋಡ್ರಿ ಶ್ರೀರಾಮರೆಡ್ಡಿಯವರೇ ಪ್ರಮೀಳಾರವರ ಕಡೆ ತಿರುಗಬೇಡಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾಹಿತಿ ಸರಿಯಾಗಿ ತಿಳಿದುಕೊಳ್ಳಿ. ನಾವು ಭಾಗಿಗಳಾಗಿಲ್ಲ. 74ನೇ ಅಮೆಂಡ್‌ಮೆಂಟ್ ಬಗ್ಗೆ ನಿಮ್ಮ ಹಿಂದಿನ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ನಾರಾಯಣಸ್ವಾಮಿಯವರು ಇದ್ದಾರೆ, ನಮಗೆಲ್ಲರಿಗಿಂತಲೂ ಹೆಚ್ಚಿಗೆ ಅವರಿಗೇ ಗೊತ್ತಿರುವುದು. ಅವರನ್ನುಕೇಳಿ ಯಾರು ಅದನ್ನು ವಿರೋಧ ಮಾಡಿದರು ಎಂದು. ಮಾನ್ಯ ನಾರಾಯಣ ಸ್ವಾಮಿಯವರೇ, ಸರಿಯಾಗಿ ಮಾಹಿತಿ ತಿಳಿದುಕೊಳ್ಳಿ. ಮಧ್ಯೆ ಮಧ್ಯೆ ಎದ್ದು ನೀವು ಮಾತನಾಡಬೇಡಿ. ಆದ್ದರಿಂದ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಇವತ್ತು ಜಾರಿಯಾಗಬೇಕು ಎನ್ನುವ ಪ್ರಾಮಾಣಿಕ ಕಳವಳಿ ನಮಗೆ ಇದ್ದರೆ ಆ ಪಂಚಾಯತ್ ರಾಜ್ ವ್ಯವಸ್ಥೆಯನ್ನು ದಯವಿಟ್ಟು ಅಪವಿತ್ರ ಮಾಡಬೇಡಿ. ಆ ಅಪವಿತ್ರತೆ ಪಂಚಾಯತ್‌ರಾಜ್ ಚುನಾವಣೆಯಲ್ಲಿ ನಡೆದಿದೆ ಫಂಡ, ಸಾರಾಯಿ ಎಲ್ಲಾ ಸುರಿದುಬಿಟ್ಟಿದ್ದಾರೆ. ಆದರೆ ಸತ್ಯವಾಗಿ ಅದು ನಡೆಯಬಾರದು. ಜನತೆಗೆ ಕೈಗೆ ಅಧಿಕಾರವನ್ನು ಕೊಡುತ್ತೇವೆ ಎಂದು ಪ್ರಾಮಾಣಿಕವಾಗಿ ಹೇಳಿದ ಜನ ಬಲವಂತದಿಂದ ಮತವನ್ನು ಕಸಿದುಕೊಳ್ಳುವ ಪರಿಸ್ಥಿತಿಗೆ ಅದನ್ನು ತರಬೇಡಿ ಎಂದು ಹೇಳಿ ನನಗೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದನೆ ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) : ಮಾನ್ಯ ಸಭಾಧ್ಯಕ್ಷರೇ, ನನಗೆ ವಿಧಾನಸಭೆಯಲ್ಲಿ ಈ ಎರಡನೇ ಬಾರಿಗೆ ನಾನು ಪ್ರವೇಶ ಮಾಡಿದಮೇಲೆಗೆ ಈ 20ನೇ ತಾರೀಖು ಮಾರ್ಚ್ ಏನು ನಮ್ಮ ರಾಜ್ಯಪಾಲರು ಭಾಷಣವನ್ನು ಮಾಡಿದ್ದಾರೆ, ಅದಕ್ಕೆ ಶ್ರೀ ನಾಗೇಗೌಡರು ವಂದನೆಯನ್ನು ಸಲ್ಲಿಸುವುದಕ್ಕೆ ಈ ಸಭೆಯ ಮುಂದೆ ಏನು ನಿರ್ಣಯವನ್ನು ಇಟ್ಟಿದ್ದಾರೆ, ಆ ನಿರ್ಣಯಕ್ಕೆ ನಾನು ಸ್ವಲ್ಪಮಟ್ಟಿಗೆ ಅವರಿಗೆ ಬೆಂಬಲವನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಜಾಪ್ರಭುತ್ವದಲ್ಲಿ ಈ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ, ಮತ್ತು ಪತ್ರಿಕಾ ರಂಗ ಈ ನಾಲ್ಕು ಪಿಲ್ಲರ್‌ಗಳು ಏನಿವೆ, ಈ ನಾಲ್ಕು ಪಿಲ್ಲರ್‌ಗಳು ಸರಿಯಾಗಿದ್ದರೆ ಮಾತ್ರ ಬಹುಶಃ ಪ್ರಜಾಪ್ರಭುತ್ವ ಸರಿಯಾಗಿ ನಡೆದುಕೊಂಡು ಹೋಗುತ್ತದೆ ಎಂದು ನಾನಂತೂ ತಿಳಿದುಕೊಂಡಿದ್ದೇನೆ. ಮಾರುವರೆ ತಿಂಗಳ ಹಿಂದೆ ಏನು ಈ ಸರ್ಕಾರ ಅಧಿಕಾರಕ್ಕೆ ಬಂತು, ಅದು ಬಂದಾಗ

ಮಾನ್ಯ ದೇವೇಗೌಡರು ಮುಖ್ಯಮಂತ್ರಿಯಾದಾಗ ಬಹುಶಃ ಏನು ಆಡಳಿತ ಪಕ್ಷದ ಸದಸ್ಯರು ಎಷ್ಟು ಆಸೆ ಪಟ್ಟರೋ ಬಹುಶಃ ಅದಕ್ಕಿಂತ ಜಾಸ್ತಿ ಸಂತೋಷಪಟ್ಟವರಲ್ಲಿ ನಾನೊಬ್ಬ. ಬಹುಶಃ ಅವರಿಗಿಂತ ಜಾಸ್ತಿ ಆಸೆ ಪಟ್ಟಿದ್ದೇನೆ ಎಂದು ತಿಳಿದು ಕೊಂಡಿದ್ದೇನೆ. ಆದರೆ ದಿನೇ ದಿನೇ ಈ ಕಾರ್ಯವೈಖರಿಯನ್ನು , ನೋಡುತ್ತಿದ್ದಾಗ ನನಗಂತೂ ಬಹಳ ನೋವಾಗುತ್ತಿದೆ. ನಮ್ಮ ಈ ಶಾಸನಸಭೆ ಏನು ನಡೆಯುತ್ತಿದೆ, ಇದನ್ನು ನೋಡಿದರೆ ನನಗೆ ಬಹಳ ನೋವಾಗುತ್ತಿದೆ.

ಮಾನ್ಯ ಮುಖ್ಯಂತ್ರಿಗಳು ಈ ಸಭೆಯಲ್ಲಿದ್ದಾರೆ. ಹಿಂದೆ ವಿರೋಧ ಪಕ್ಷದಲ್ಲಿ ಕೆಲವು ಸದಸ್ಯರುಗಳನ್ನು ನಾನು ನೋಡಿದ್ದೇನೆ. ಮಾನ್ಯ ನಾಣಯ್ಯನವರು ಮಾನ್ಯ ಬಸವಲಿಂಗಪ್ಪನವರು ಮಾನ್ಯ ಅಜೀಜ್‌ಸೇರ್‌ರವರು ಇಂಥವರೆಲ್ಲ ಸಂಭಾಷಣೆ ಮಾಡಿ ಚರ್ಚೆ ಮಾಡಿದ್ದನ್ನು ಮಾನ್ಯ ಚಂದ್ರೇಗೌಡ್ರು, ದೇಶಪಾಂಡೆಯವರು, ಸಿಂಧ್ಯಾರವರು ಇಲ್ಲಿ ವಾದ ಮಾಡಿರುವ ಚರಿತ್ರೆಯನ್ನು ನನ್ನ ಅನುಭವದಲ್ಲಿ ಐದು ವರ್ಷಗಳಲ್ಲಿ ನೋಡಿದಾಗ ನಿಜವಾಗಲೂ ನಾವು ಕಲಿಯಬೇಕಾದ್ದು ಬಹಳವಿದೆ.ಇಲ್ಲಿ ಈ ಸಭೆ ನಡೆಯುತ್ತಿರುವಾಗ ಸುಮಾರು ಐದಾರು ದಿನ ದಿಂದ ನಾನು ನೋಡುತ್ತಿದ್ದೇನೆ. ಮಂತ್ರಿಗಳು ಒಬ್ಬರೂ ಇಲ್ಲವಲ್ಲ. ಅಧಿಕಾರಿಗಳು ಒಬ್ಬರೂ ಇಲ್ಲ. ಮುಖ್ಯಮಂತ್ರಿಗಳು ಬಂದಿದ್ದಾರೆ. ಎಂಟು-ಹತ್ತು ಜನ ಮಂತ್ರಿಗಳು ಇಲ್ಲಿ ಬಂದು ಕುಳಿತಿದ್ದಾರೆ ನಾವು ಯಾರಿಗೋಸ್ಕರ ಭಾಷಣವನ್ನು ಮಾಡಬೇಕಾಗಿದೆ. ತಾವು ದಯವಿಟ್ಟು ಹೇಳಿ. ಅಧಿಕಾರಿಗಳು ಇಲ್ಲ. ಸದಸ್ಯರರೂ ಇಲ್ಲ. ಇನ್ನು ನಾವು ಶಾಸಕರಾಗಿ ಮೂರು -ನಾಲ್ಕು ತಿಂಗಳಾಗಿಲ್ಲ. ನಾವು ಸ್ವಲ್ಪ ಸದಸ್ಯರು ಗಳಿದ್ದೇವೆ ಆಳುವ ಪಕ್ಷದ ಸದಸ್ಯರು. ಈ ಪರಿಸ್ಥಿತಿ ಹೀಗೆ ಮುಂದುವರೆದರೆ ನಾವು ಯಾವುದೇ ಪೂರ್ವಪುಣ್ಯ ಮಾಡದ್ದೇವೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ.

ನಮ್ಮ ಹಿರಿಯರೆಲ್ಲಾ ಸೇರಿ ನಮ್ಮನ್ನೆಲ್ಲಾ ಆರಿಸಿ ಇಲ್ಲಿಗೆ ಕಳುಹಿಸಿಕೊಟ್ಟಿದ್ದಾರೆ. ಆ ರೀತಿ ಕಳುಹಿಸಿಕೊಟ್ಟಿರುವಾಗ ಸರಿಯಾದ ಆಡಳಿತವನ್ನು ಈ ರಾಜ್ಯದ ಜನತೆಗೆ ಈ ಸಭೆಯ ಮುಖಾಂತರ ನಾವು ಕೊಡಲಿಲ್ಲ ಎಂದರೆ ನಮ್ಮ ಕರ್ತವ್ಯವೇ ತಪ್ಪಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಕುಳಿತಿದ್ದಾರೆ, ನಾನು ಮನವಿ ಮಾಡಿಕೊಳ್ಳುತ್ತೇನೆ, ನಮ್ಮ ಮಂತ್ರಿಗಳಿಗೆ ಈ ಮಾತನ್ನು ಹೇಳಲಿಕ್ಕೆ ನನಗೆ ಬಹಳ ಮನಸ್ಸಿಗೆ ನೋವಾಗುತ್ತದೆ. ಇನ್ನು ನಮ್ಮ ಶಾಸಕರಿಗೆ ಕೆಲವು ಮಂತ್ರಿಗಳಿಗೆ ತರಬೇತಿ ಕೊಡುವ ಸಂದರ್ಭ ಇವತ್ತು ಬಂದಿದೆ. ಕೆಲವು ಮಂತ್ರಿಗಳು ಅವರವರ ಇಲಾಖೆಗಳನ್ನು ಬಿಟ್ಟು ಬೇರೆ ಬೇರೆ ಇಲಾಖೆಗಳ ಬಗ್ಗೆ ಮಾತನಾಡುತ್ತಾರೆ. ಮಾನ್ಯ ಜೆ.ಹೆಚ್. ಪಟೇಲರು ಮೀಸಲಾತಿಯ ಬಗ್ಗೆ ಮಾತನಾಡುತ್ತಾರೆ. ಮಾನ್ಯ ಸಿಂಧ್ಯಾರವರು ಗ್ರಾನೈಟ್ ಬಗ್ಗೆ ಮಾತನಾಡುತ್ತಾರೆ. ಮಾನ್ಯ ಜಯಕುಮಾರ್‌ರವರು ಸಮಾಜ ಕಲ್ಯಾಣ ಇಲಾಖೆ ಬಗ್ಗೆ ಮಾತನಾಡುತ್ತಾರೆ. ಈ ರೀತಿಯ ಪರಿಸ್ಥಿತಿ ಆಯಿತು ಎಂದರೆ ಹೇಗೆ ಸರ್ಕಾರವನ್ನು ನಡೆಸುವುದು? ಒಬ್ಬರಿಗೊಬ್ಬರಿಗೆ ವಿಶ್ವಾಸ ಇಲ್ಲವೇ? ಕಂಟ್ರೋಲ್ ಇಲ್ಲವೇ? ನನಗೂಂತೂ ಅರ್ಥವಾಗುತ್ತಿಲ್ಲ, ಆದ್ದರಿಂದ ಇದರ ಬಗ್ಗೆ ತಾವು ದಯವಿಟ್ಟು ಕಾಳಜಿ ವಹಿಸಿ ಎಂದು ಹೇಳುತ್ತೇನೆ.

ಅಧ್ಯಕ್ಷರು : ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತೇನೆ ಎಂದು ಹೇಳಿ ಹಳಿ ತಪ್ಪಿಸಿ ಬಟ್ಟಿದ್ದೀರಲ್ಲ.

ಶ್ರೀ ಡಿ.ಕೆ. ಶಿವಕುಮರ್ : ಇನ್ನು ಹಳಿ ತಪ್ಪಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಇದ್ದಾರೆ ಎಂದು ಹೇಳಿ ನಾನು ಈ ವಿಚಾರದ ಬಗ್ಗೆ ಮಾತನಾಡುತ್ತದ್ದೇನೆ. ಇದರ ಬಗ್ಗೆ ನಾನು ಹೇಳಿದ್ದು. ಬಹಳ ಒಳ್ಳೆಯವರೂ ಇದ್ದಾರೆ. ದೇಶ್‌ಪಾಂಡೆಯವರು ಇರಬಹುದು, ಜಾಲಪ್ಪನವರು, ಜೆ.ಹಚ್. ಪಟೇಲರು ಇದ್ದಾರೆ. ಒಳ್ಳೆಯ ಮಂತ್ರಿಗಳಿದ್ದಾರೆ. ಕೆಲವು ಮಂತ್ರಿಗಳು ಮಾತ್ರ ಇಲ್ಲಿ ಕುಳಿತುಕೊಂಡು ನಾವು

ಹೇಳುವಂಥ ವಿಚಾರವನ್ನು ಗ್ರಹಿಸಿ ಅದಕ್ಕೆ ಸ್ಪಂದಿಸಬೇಕಾಗುತ್ತದೆ. ಈ ಸಭೆಗೆ ಶೋಭೆತರುವಂಥ ಕೆಲಸವನ್ನು ತಾವು ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹೊಸದಾಗಿ ಬಂದರು. ಹೊಸದಾಗಿ ಬಂದಾಗ ನಾನು ಕಳೆದ ವಿಧಾನಸಭೆಯಲ್ಲಿ ಸದಸ್ಯನಾಗಿದ್ದೆ. ತಮಗೂಗೊತ್ತಿದೆ. ಒಂದೆರಡು ವರ್ಷ ಮಂತ್ರಿ ಕೂಡ ಆಗಿದ್ದೆ. ನಾನು ಈ ಸಭೆಗೆ ವಾಪಸ್ ಬರಬೇಕಾದರೆ ಪಕ್ಷೇತರವಾಗಿ ಆರಿಸಿ ಬಂದಿದ್ದೇನೆ. ಕಾಂಗ್ರೆಸ್‌ಪಕ್ಷ ನನಗೆ ಟಿಕೆಟ್‌ನ್ನು ಕೊಡಲಿಲ್ಲ. ಏನೊ ಮಾಡಬಾರದು ಮಾಡಿದ್ದೇನೆ ಎಂದು ಹೇಳಿ ಒಂದು ಆರೋಪವನ್ನು ಹೊರಿಸಿ ನನಗೆ ಟಿಕೆಟ್ ಕೊಡಲಿಲ್ಲ. ಕಳುಹಿಸಿಬಿಟ್ಟರು. ಸ್ವಲ್ಪ ಸುಮ್ಮನಿರಿ ಸ್ವಾಮಿ. ನಿಮ್ಮಿಂದ ನಮ್ಮ ಹಣೆ ಬರಹ ಹೀಗಾಯಿತು? ನೀವು ಸುಮ್ಮನಿರಿ. ನೀವು ನಿಮ್ಮ ಮೊಯಿಲಿಯವರು ಈ ರಾಜ್ಯವನ್ನು ಹಾಳು ಮಾಡಿಬಿಟ್ಟದ್ದೀರಿ ಸುಮ್ಮನಿರಿ.ನೀವು (ಮಾನ್ಯ ರಾಮಲಿಂಗಾ ರೆಡ್ಡಿಯವರನ್ನು ಉದ್ದೇಶಿಸಿ) ರಾಮಲಿಂಗಾರೆಡ್ಡಿ ಇವರೆಲ್ಲ ಸೇರಿ ಈ ರಾಜ್ಯವನ್ನು ಈ ಮಟ್ಟಕ್ಕೆ ತಂದುಬಿಟ್ಟರು. ಈಗ 36ಕ್ಕೆ ಬಂದಿದ್ದೀರಿ. ಇದೇ ರೀತಿ ಇತ್ತುಎಂದರೆ ನಿಮ್ಮ ಮೊಯಿಲಿಯವರು ಇದೇ ರೀತಿ ಸ್ಟೇಟ್‌ಮೆಂಟ್ ಕೊಟ್ಟು ಕೊಂಡು ಬರುತ್ತಿದ್ದರೆ 18 ಕ್ಕೆ ಬರುತ್ತೀರಿ. ಸ್ವಲ್ಪ ಹುಷರಾಗಿರಿ.

ಅಧ್ಯಕ್ಷರು : ನೀವು ನಾಗೇಗೌಡರಿಗೇನು ಹೇಳುತ್ತಿರುವುದು.

ಶ್ರೀ ಡಿ.ಕೆ. ಶಿವಕುಮಾರ್ : ಇಲ್ಲಾ. ನಾನು ರಾಮಲಿಂಗರೆಡ್ಡಿಯವರಿಗೆ ಹೇಳಿದ್ದು.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ನನಗೇಕೆ ಹೇಳುತ್ತಾರೆ ಸ್ವಾಮಿ. ಮೊಯಿಲಿಯವರನ್ನು ತೀರಿಸಿರುವವರೇ ನಾವು ಶಿವಕುಮಾರ್ ಹೇಳುತ್ತಿರುವುದು ರಾಮಲಿಂಗರೆಡ್ಡಿಯವರಿಗೆ .

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈಗ ನೀವು ಗಮನಿಸಿದ ಹಾಗೆ ಕಾಣುತ್ತದೆ. ನಾಗೇಗೌಡರೇನೋ ಪಿತೂರಿ ಮಾಡುತ್ತಿರಬೇಕು ಎಂದು ನೀವು ಗಮನಿಸಿರಬೇಕಲ್ಲವೇ?

ಶ್ರೀ ಡಿ.ಕೆ. ಶಿವಕುಮಾರ್ : ಏಕೆಂದರೆ ವೀರಪ್ಪಮೊಯಿಲಿಯವರು ಈ ಸರ್ಕಾರಕ್ಕೆ ಆರೇಳು ತಿಂಗಳು ಇಲ್ಲವೇ ಒಂದು ವರ್ಷವಾದರೂ ಸ್ವಲ್ಪ ಅವಕಾಶ ಕೊಡಬೇಕು. ನಾನು ನೋಡುತ್ತಿದ್ದೇನೆ; ಎಲ್ಲಾ ಬರೀ ಸ್ಟೇಟ್‌ಮೆಂಟ್‌ಗಳು. ಮೈಸೂರಿಗೆ ಹೋಗುವಾಗ ಒಂದು ಸ್ಟೇಟ್‌ಮೆಂಟ್ ಗುಲ್ಬರ್ಗಾಕ್ಕೆ ಹೋಗುವಾಗ ಒಂದು ಸ್ಟೇಟ್‌ಮೆಂಟ್. ಹೇಮಾವತಿಗೆ ಹೋಗುತ್ತೇನೆ ಎನ್ನುವುದು. ಇದು ನನಗೆ ಅರ್ಥವಾಗುತ್ತಿಲ್ಲ. ಅದಕ್ಕೆ ತಮ್ಮ ಮುಖಾಂತರ ಮಾನ್ಯ ರಾಮಲಿಂಗಾ ರೆಡ್ಡಿಯವರಿಗೆ ಹೇಳುತ್ತಿದ್ದೇನೆ. ಬಹುಶಃ ಜಗಳವಾದುವುದನ್ನು ನಿಲ್ಲಿಸಬೇಕು. ಇಲ್ಲ ಎಂದರೆ ನಾವು ಈಗ 18ಕ್ಕೆ ಇಳಿದಿದ್ದೇವೆ. ನಮ್ಮನ್ನು ಯಾರೂ ಅಲುಗಾಡಿಸದೇ ಇರತಕ್ಕಂಥ 179 ಸೀಟು ಇದ್ದದ್ದು ಈಗ ಎಂತಹ ಪರಿಸ್ಥಿತಿಗೆ ಬಂದಿದೆ. ದಯವಿಟ್ಟು ಮತ್ತೆ ಆ ಪರಿಸ್ಥಿತಿಗೆ ಬರುವುದು ಬೇಡ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ನಾನು ಮತ್ತೆ ಶಾಸಕನಾಗಿ ಇಲ್ಲಿ ಕಾಂಗ್ರೆಸ್ (ಐ) ನಿಂದ ಬರಲಿಲ್ಲ. ನಾನು ಮತ್ತೆ ಇಲ್ಲಿ ಶಾಸಕನಾಗಿ ಆಯ್ಕೆ ಆಗಿ ಬಂದರೆ ಎಂದರೆ ಬಹುಶಃ ನಮ್ಮ ಬಂಗಾರಪ್ಪನವರು ನಮಗೆ ಕೊಟ್ಟಂಥ ಅವಕಾಶ. ಆ ಅವಕಾಶ ಅಂದರೆ ಆಶ್ರಯ ಯೋಜನೆಯಡಿಯಲ್ಲಿ ನಮ್ಮನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಬಗರ್‌ಹುಕುಂ ಯೋಜನೆಯಡಿಯಲ್ಲಿ ಅಧ್ಯಕ್ಷರನ್ನು ಮಾಡಿದ್ದಾರೆ. ಒಂದು ಸಾವಿ

ಭಾಗ್ಯ ಜ್ಯೋತಿ ಯೋಜನೆ ಐಡೆಂಟಿಫೈ ಮಾಡಿರುವುದು. ಈ ಯೋಜನೆ ಯಶಸ್ವಿಯಾಗಿ ಮಾಡಿಕೊಟ್ಟರು. ಹಸಿರು ಕಾರ್ಡ್ ಟ್ರೈ ಕಲರ್ ಮಾಡಿ ಎಷ್ಟುಜನರಿಗೆ ಅವಕಾಶ ಮಾಡಿಕೊಟ್ಟರು, ನೇರವಾಗಿ ಬಡವನಿಗೆ ಅನುಕೂಲ ಆಗುವಂತಹ ಯೋಜನೆ ಮಾಡಿ ಆ ಜನರ ವಿಶ್ವಾಸವನ್ನು ಗಳಿಸಿ ನನ್ನಂಥವರು ಈ ವಿಧಾನ ಸಭೆಗೆ ಆರಿಸಿ ಬಂದಿದ್ದೇವೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಬಂಗಾರಪ್ಪನವರು ಬಹಳಷ್ಟು ಕೆಲಸ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ಬಹಳ ಸಂತೋಷ. ಆಶ್ರಯ ಯೋಜನೆ ಮತ್ತು ಈ ದರಕಾಸ್ತು ಬಗ್ಗೆ ಅವರು ಮಾಡಿರತಕ್ಕ ಕರ್ಮಕಾಂಡ ಇಡೀ ಕರ್ನಾಟಕ ರಾಜ್ಯದ ಮೂಲೆ ಮೂಲೆಯಲ್ಲಿ ಹರಡಿದೆ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನಿಮ್ಮ ತಾಲ್ಲೂಕಿನಲ್ಲಿ ಆಗಿಲ್ಲದೇ ಇರಬಹುದು, ಎಲ್ಲಾ ತಾಲ್ಲೂಕಿನಲ್ಲಿ ಆಗಿದೆ. ಎಲ್ಲಿ ಈ ಕಾರ್ಯಕ್ರಮ ಯಶಸ್ವಿ ಆಗಿದೆ ಅದರ ಬಗ್ಗೆ ಹೇಳಿ.

(ಗೊಂದಲ)

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮುಗ್ಧ ಜನರು ಬಂಗಾರಪ್ಪ ಬಂದರು, ಬಂಗಾರಪ್ಪಬಂದರು ಎಂದು ಹೇಳುತ್ತಾರೆ ಅದೇ ರೀತಿ ಕರ್ನಾಟಕದ ಸುಳ್ಳಿನ ಸರದಾರ ಮೊಯಿಲಿ ಬಂದರು ಎಂದು ಹೇಳಿದರು.

ಶ್ರೀ ಖಮರುಲ್ ಇಸ್ಲಾಂ : ಅಧ್ಯಕ್ಷರೇ, ನನ್ನದು point of order ಇದೇ ಏನೆಂದರೆ, The Hon.Member cannot charge on all the Ashraya Committees. In Gulbarga in one stretch, 786 houses have come up in one place beautifully. At the time of inauguration I will definitely invite you. If you see it, you will change your mind. Don't tell all the Commites are so. 4-5 committees may be so.

(ಗೊಂದಲ)

ಶ್ರೀ ಎಸ್.ಆರ್. ಲಕ್ಷ್ಮಯ್ಯ : ನಾನು ಒಪ್ಪುತ್ತೇನೆ. ಮುಗ್ದ ಜನರು ಏನು ಹೇಳುತ್ತಿದ್ದರೆಂದರೆ ಬಂದರು ಬಂದರು ಬಂಗಾರಪ್ಪ. ಬಂದರು ಬಂದರು ಕರ್ನಾಟಕದ ಸುಳ್ಳನ್ನು ಮೈಯಲ್ಲಿ ಹಚ್ಚಿಕೊಂಡಿಂತಹ ವೀರಪ್ಪ ಮೊಯಿಲಿ ಅಂತ ಇವರ ಕಾಲದಲ್ಲಿ ಆಗಿರತಕ್ಕ ಕರ್ಮಕಾಂಡ.

(ಗೊಂದಲ)

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೇ, ಒಂದು ತೀರ್ಮಾನಕ್ಕೆ ಬರೋಣ. ಈಗ ಎಲ್ಲೆಲ್ಲಿ ಆಶ್ರಯ ಹಾಗೂ ಬೇರೆ ಕಮಿಟಿಗಳು ವ್ಯವಸ್ಥಿತವಾಗಿ ಕೆಲಸ ಮಾಡಿದ್ದವು, ಜನರಿಗೆ ಅನುಕೂಲ ಆಗಿದೆ, ಅಲ್ಲಿ ನಿಮ್ಮ ಶಾಸಕರು ಆರಿಸಿ ಬಂದಿದ್ದಾರೆ. ಎಲ್ಲಿ ಕೆಲಸ ಸರಿಯಾಗಿ ನಡೆಯಲಿಲ್ಲ, ಅವರೆಲ್ಲಾ ವಾಪಸ್ ಹೋದರು. ಹೆಚ್ಚಿಗೆ ಜನ ಬರಲಿಲ್ಲ ಎಂದರೆ ಸಾರ್ವತ್ರಿಕವಾಗಿ ಕೆಲಸ ಸರಿಯಾಗಿ ಆಗಲಿಲ್ಲ, ಎಂದು ತಿಳಿದುಕೊಳ್ಳೋಣ.

ಶ್ರೀ ಡಿ.ಕೆ. ಶಿವಕುಮಾರ್ : ಅದೂ ಆಗಿರಬಹುದು. ಸ್ವಲ್ಪ ಮಟ್ಟಿಗೆ ಅದೂ ಆಗಿರಬಹುದು. ಇನ್ನು ಮಿಕ್ಕದ್ದ ಮಟ್ಟಿಗೆ ನಾವೆಲ್ಲ ಹೊಡೆದಾಟ ಮಾಡಿಕೊಂಡು,

ಗಲಾಟೆ ಮಾಡಿಕೊಂಡು, ಕಪ್ಪು ಸಾಸರ್ ಎಸೆದುಕೊಂಡು ಮಾಡಿದ್ದಕ್ಕೆ ನಾವು ಇಲ್ಲಿ ಕುಳಿತಿದ್ದೇವೆ. ಅದಕ್ಕಾಗಿ ಹೇಳುತ್ತಿದ್ದೇವೆ. ನೀವೂ ಒಳ್ಳೆಯ ಅವಕಾಶ ಇತ್ತು. ಬಗರ್‌ಕುಂ ಸಾಗುವಳಿ 20 ಅಂಶದ ಕಾರ್ಯಕ್ರಮ. ಇವೆಲ್ಲಕ್ಕೂ ನಮಗೆ ಏನು ಒಂದು ಅಧ್ಯಕ್ಷಸ್ಥಾನ ಇತ್ತು, ಅವೆಲ್ಲಾ ಸ್ಥಾನವನ್ನುತ್ತೆ ಶಾಸಕರಿಗೆ ಉಳಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಮನವಿಮಾಡಿಕೊಳ್ಳುತ್ತಾ, ಇವತ್ತು ರಾಜ್ಯಪಾಲರ ಮೂಲಕ ಏನು ಒಂದು ಬಹಳ ಚಿಕ್ಕಕ 12 ಪುಟದ ಭಾಷಣವನ್ನು ಮಾಡಿಸಿದ್ದಾರೆ, ಇದು ಕಳೆದ 5-6 ವರ್ಷದಲ್ಲಿ ಇದೇ ಒಂದು ಚಿಕ್ಕ ಭಾಷಣ ಎಂದು ನಾನು ತಿಳಿದುಕೊಂಡಿದ್ದೇನೆ. ಈದ್ಗಾ ಮೈದಾನದ ವಿಚಾರವನ್ನು ಮೊದಲನೆಯದಾಗಿ ಪ್ರಸ್ತಾಪ ಮಾಡಿದ್ದಾರೆ ಬಹುಶಃ ಅದನ್ನು ಒಪ್ಪಬೇಕಾದ್ದೆ ಆದರೆ ಈದ್ಗಾ ಮೈದಾನದ ಒಂದು ಸಮಸ್ಯೆ ಬಗೆಹರಿಸಿದ್ದಾರೆ ಎಂದು ತಮ್ಮ ಕ್ಯಾಪ್‌ಗೆ ಫೆದರ್ ಬಂದಿದೆ ಎಂದು ತಿಳಿದುಕೊಂಡರೆ ತಪ್ಪು ಆಗುತ್ತದೆ. ಅದು ಬಿಟ್ಟರೆ ಕಾನೂನಿನ ಸುವ್ಯವಸ್ಥೆಯಲ್ಲಿ ಸ್ವಲ್ಪ ಹಳಿ ತಪ್ಪಿದ್ದಾರೆ. ಬಹಳಷ್ಟು ಹಳ್ಳಿಗಳಲ್ಲಿ ಗಲಾಟೆ ಆಗುತ್ತಿದೆ. ಗಲಾಟೆ ಹೆಚ್ಚಿದೆ. ಪೋಲೀಸ್ ಸಿಬ್ಬಂದಿ ಕಡಿಮೆ ಇದೆ. ವಿಶೇಷವಾಗಿ ಹರಿಜನ ಗಿರಿಜನರ ಮೇಲೆ ದೌರ್ಜನ್ಯವನ್ನು ಮೇಲ್ವರ್ಗದ ಜನ ಮಾಡಿಕೊಂಡು ಬರುತ್ತಿದ್ದಾರೆ. ಹಳ್ಳಿಗಳಲ್ಲಿ ಇದಕ್ಕೆ ಹೋಮ್ ಮಿನಿಸ್ಟರ್ ಅವರಿಗೆ ಪವರ್ಸ್ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಐಪಿಎಸ್ ಆಫೀಸರ್ಸ್ ಬಗ್ಗೆ ಕೂಡ ಮುಖ್ಯಮಂತ್ರಿಗಳು ಅವರ ರಕ್ಷಣೆಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಶಿವಕುಮಾರ್ ಅವರು ಏನು ಹೇಳುತ್ತಿದ್ದಾರೋ ನನಗೆ ಗೊತ್ತಿಲ್ಲ. ಹೋಮ್ ಮಿನಿಸ್ಟರ್‌ಗೆ ಏನೂ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ಎಲ್ಲಾ ಅಧಿಕಾರವನ್ನು ಸರ್ವತಂತ್ರ ಸ್ವತಂತ್ರವಾಗಿ ಕಾನೂನು ಬದ್ಧವಾಗಿ ಬದಲಾವಣೆ ಮಾಡುವುದಕ್ಕೆ ನನಗೆ ಅಧಿಕಾರವನ್ನು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ.

ಅಧ್ಯಕ್ಷರು : ನೀವು ಅವರು ಹೇಳಿದ ಯಾವುದೇ ಕೆಲಸ ಮಾಡಿಕೊಟ್ಟಿಲ್ಲ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನನಗೆ ಒಂದು ಅನುಮಾನ. ಈಗ ಅವರಿಬ್ಬರೂ ಪಕ್ಕಪಕ್ಕದ ಕಾನ್‌ಸ್ಟಿಟ್ಯುಯೆನ್ಸಿಗಳು ಮೊದಲಿನಿಂದಲೂ ಬಹಳ ಸ್ನೇಹಿತರು. ಅವರು ಏಕೆ ಹೀಗೆ ಹೇಳಿದರು. ಇವರು ಏಕೆ ಹೀಗೆ ಹೇಳಿದರು ಎಂದು ನನಗೆ ಸ್ವಲ್ಪ ಅನುಮಾನಗಳು ಬಂದು ಬಿಟ್ಟಿದೆ.

ಅಧ್ಯಕ್ಷರು : ಅವರು ಯಾವುದೇ ಕೆಲಸ ಹೇಳಿದ್ದಾರೆ. ಇವರು ಮಾಡಿಲ್ಲ. ಅದಕ್ಕೆ ಅವರಿಗೆ ಅನುಮಾನ ಬಂದಿದೆ.

ಶ್ರೀ ಡಿ.ಕೆ. ಶಿವಕುಮಾರ್ : ನಮ್ಮದು ಸಿಂಧ್ಯ ಅವರದ್ದು ಬಾರ್ಡರ್ ಕಾನಿಸ್ಟಿಟ್ಯೂಯೆನ್ಸಿ. 80 ಕಿಲೋ ಮೀಟರ್ ದೂರ ಇದ್ದರೂ ಗುಲ್ಬರ್ಗಾ ರಾಯಚೂರು ಇದ್ದ ಹಾಗೆ. ಪಕ್ಕದಲ್ಲಿಯೇ ತಮಿಳುನಾಡು. ಒಂದು ವೇಳೆ ಪೋಲೀಸ್ ಸ್ಟೇಷನ್ ಅಪ್‌ಗ್ರೇಡ್ ಮಾಡಿಕೊಡಿ ಎಂದು ಕೇಳಿದರೆ ಅದಕ್ಕೆ ಅವಕಾಶ ಇಲ್ಲ, ದುಡ್ಡಿಲ್ಲ. ಹಾಗೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಅದೇ ಧರ್ಮಸಿಂಗ್ ಅವರ ಕಾಲದಲ್ಲಿ ಐದು ನಿಮಿಷದಲ್ಲಿ ಈ ಕೆಲಸದ ಬಗ್ಗೆ ಹೇಳಿದ್ದರೆ ಆಗಿಬಿಡುತ್ತಿತ್ತು. ಆದ್ದರಿಂದ ಪರಿಸ್ಥಿತಿ ಈಗ ಈ ರೀತಿ ಇದೆ ಐಪಿಎಸ್ ಆಫೀಸರ್ ಮೇಲೆ ಕಂಟ್ರೋಲ್ ಮಾಡಬೇಕು, ಕಂಟ್ರೋಲ್ ಇದ್ದರೆ ಸಂತೋಷ. ಏನೂ ತೊಂದರೆ ಇಲ್ಲ. ಬಹುಶಃ ಇನ್ನೂ ಹೆಚ್ಚು ಶಕ್ತಿ ಕೊಟ್ಟರೆ ನಮ್ಮ ಗ್ರಾಮಾಂತರ ಮಟ್ಟದಲ್ಲಿ ಶಾಂತಿ ಪರಿಪಾಲನೆಗೆ ಅನುಕೂಲ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಎರಡನೆಯದಾಗಿ ತಾಲ್ಲೂಕ್ ಪಂಚಾಯತಿ ಜಿಲ್ಲಾ ಪಂಚಾಯತ್ ಚುನಾವಣೆ ಆಯಿತು.

ಚುನಾವಣೆ ನಡೆದಾಗ ಬಹುಶಃ 15 ಪರ್ಸೆಂಟ್ ಓಟು ಅಸೆಂಬ್ಲಿ ಚುನಾವಣೆಗೂ ಪಂಚಾಯತಿ ಚುನಾವಣೆಗೂ ಹೆಚ್ಚು ಜನತಾದಳಕ್ಕೆ ಬಂದಿದೆ. ಈ ಚುನಾವಣೆಯನ್ನು ಬಹುಶಃ ಬಜೆಟ್ ಆದ ಮೇಲೆ ಮಾಡಿದ್ದರೆ ಇವರ ಹಣೆಬರಹ ಏನು ಎಂದು ಗೊತ್ತಾಗುತ್ತಿತ್ತು. ನಮ್ಮ ಹಣೆಬರಹ ಏನು ಎಂದು ಗೊತ್ತಾಗುತ್ತಿತ್ತು. ಬಜೆಟ್ ಮುಂಚೆ ಮಾಡಬೇಕು. ವೈಟ್ ಪೇಪರ್ ಎನ್ನುವುದನ್ನು ಕೂಡ ಪಂಚಾಯತಿ ಚುನಾವಣೆಗೆ ಮುನ್ನ ಮಾಡಿದ್ದರೆ ಆಗ ನಿಮ್ಮ ಹಣೆಬರಹ ಗೊತ್ತಾಗುತ್ತಿತ್ತು. ಸ್ವಲ್ಪ ಏನಾದರೂ ನ್ಯೂನತೆ ಇದೆ ಎಂದು ಹೇಳಿ ಕೃಷ್ಣ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಏನು ಒಂದು ಸಮಿತಿ ಮಾಡಿದ್ದಾರೆ, ಇದು ನಮ್ಮ ಪಬ್ಲಿಕ್ಸ್ ಅನ್ನು ಫೂಲ್ ಮಾಡಲಿಕ್ಕೆ ಎಂದು ಹೇಳಿ ನಾನಾದರೂ ತಿಳಿದುಕೊಂಡಿದ್ದೇನೆ. ನಿನ್ನೆ ಒಂದು ಬಿಲ್ ತಂದರು. ಡಿಫೆಕ್ಷನ್ ಮತ್ತುಇತರೆ ಬಿಲ್‌ಗಳನ್ನು ತಂದರು.

ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆ ಆಗುತ್ತಿದೆ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಚುನಾಯಿತರಾಗುತ್ತಿದ್ದಾರೆ ರಿಸರ್ವೇಷನ್ ಎಲ್ಲಾ ಮುಗಿದು ಹೋಗಿದೆ. ಯಾವಾಗ ಯಾರು ಇರಬೇಕು ಎಂದು ಮಾಡಿದ್ದಾರೆ. ಆದರೂ ಕೃಷ್ಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸಮಿತಿ ತರುವಂಥ ಅವಕಾಶ ಏನು ಇತ್ತು? ಸಂದರ್ಭ ಏನು ಇದೆ? ಏಕೆ ಮಾಡಿದರು? ಎಲ್ಲಾ ಆಗಿ ಹೋಗಿದೆಯಲ್ಲಾ ಇನ್ನು ಅವರು ಬಂದು ಐದು ವರ್ಷಕ್ಕೆ ಅಧ್ಯಯನ ಮಾಡಿ ತಿರುಗಿ ಬರುವ ಹೊತ್ತಿಗೆ ಯಾವ ಸರ್ಕಾರ ಇರುತ್ತದೋ? ಕೃಷ್ಣಸ್ವಾಮಿ ವರದಿ ಇರುತ್ತದೋ ಎಂದು ನನಗಂತೂ ಗೊತ್ತಿಲ್ಲ. ದಯಮಾಡಿ ಕೃಷ್ಣ ಸ್ವಾಮಿ ವರದಿಯನ್ನು ದಯವಿಟ್ಟು ನಿಲ್ಲಿಸಿ. ಇದನ್ನು ತಾವೇ ಮುಂದುವರಿಸಿಕೊಂಡು ಹೋಗುವಂತಹ ಕೆಲಸವನ್ನು ಮಾಡಬೇಕು.

ಶ್ರೀ ಕೆ.ಎನ್. ನಾಗೇಗೌಡ : ಈಗ ಕೃಷ್ಣಸ್ವಾಮಿ ಅವರು ಅಧ್ಯಕ್ಷರಾಗಿ ಒಪ್ಪಿಕೊಂಡಿದ್ದೇ ಮಹತ್ವ ಎಂದು ಹೇಳುತೇನೆ. ಈ ದೇಶದ ಅತ್ಯಂತ ಎತ್ತರದ ವ್ಯಕ್ತಿ ಆರ್ಥಿಕ ತಜ್ಞ ಈ ಅಧ್ಯಕ್ಷತೆಯನ್ನು ಒಪ್ಪಿಕೊಂಡಿದ್ದೇ ಮಹತ್ವತ. ಅವರು ಯಾವಾಗ ಸಮಿತಿಯ ಕೆಲಸ ಮಾಡುತ್ತಾರೆ, ಯಾವ ಹಂತದಲ್ಲಿ ವರದಿ ಇದೆ, ಇವೆಲ್ಲಾ ಮುಂದೆ ನೋಡೋಣ. ಅವರು ಅಧ್ಯಕ್ಷತೆಯನ್ನು ಒಪ್ಪಿಕೊಂಡಿದ್ದೇ ಒಂದು ಸುಯೋಗ. ದಯಮಾಡಿ ಅದನ್ನು ನಿಲ್ಲಿಸಿ ಎಂದು ಹೇಳಬೇಡಿ. ಕಾದು ನೋಡಿ.

ಶ್ರೀ ಡಿ.ಕೆ. ಶಿವಕುಮಾರ್ : ಇನ್ನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕೈಗಾರಿಕಾ ಮಂತ್ರಿಗಳು ವಿದೇಶಕ್ಕೆ ಹೋಗಿ ಹಲವಾರು ಇಂಡಸ್ಟ್ರಿಗಳಿಗೆ ಇನ್‌ವೈಟ್ ಮಾಡಿ ಬಂದಿದ್ದಾರೆ. ಹಲವಾರು ಎಂ.ಓ.ಯುಗಳು ಬರುತ್ತಿವೆ. ನಾನು ಕೈಗಾರಿಕಾ ಮಂತ್ರಿಯಾಗಿದ್ದಾಗ ಜಪಾನ್ ದೇಶದಿಂದ ಒಂದು ಟೀಮ್ ನನ್ನ ಕ್ಷೇತ್ರಕ್ಕೆ ಬಂದಿತ್ತು. ನಮ್ಮ ಸಾತನೂರು ಹಾಗೂ ಬಿಡದಿಯನ್ನು ಅವರು ಅಳತೆ ಮಾಡಿಕೊಂಡು ಹೋದರು. ಅವತ್ತಿನ ಸಂದರ್ಭದಲ್ಲಿ ಇದೇ ದಳದ ಮುಖಂಡರುಗಳು ಪಕ್ಕದಲ್ಲಿ ಏನು ಕುಳಿತಿದ್ದಾರೆ, ಅವರಲ್ಲಿ ಮಾನ್ಯ ಬೈರೇಗೌಡರು ಈ ಸಭೆಯಲ್ಲಿ ಇವತ್ತು ಇಲ್ಲ, ವಿಧಾನ ಪರಿಷತ್‌ಗೆ ಹೋಗಿರಬಹುದು ಎಂದು ಕಾಣುತ್ತದೆ. ಅವರು ಮತ್ತುನಮ್ಮ ನಂಜಂಡಸ್ವಾಮಿ ಅವರು ಎಲ್ಲಾ ಸೇರಿ ಈ ಯೋಜನೆಯಿಂದ ರೈತರಿಗೆ ಬಹಳ ಅನ್ಯಾಯ ಆಗುತ್ತದೆ, ಬಹಳ ತೊಂದರೆ ಆಗುತ್ತದೆ. ಮತ್ತೆ ಬ್ರಿಟೀಷ್ ರಾಜ್ಯ ಬರುತ್ತದೆ ಎನ್ನುವಂಥ ವಾದನ್ನು ಮಂಡಿಸಿದ್ದರು. ಆದ್ದರಿಂದ ದಯವಿಟ್ಟು ಈ ಒಂದು ಅವಕಾಶವನ್ನು ತರಬೇಕು. ಇಂಡಸ್ಟ್ರೀಸ್ ಅನ್ನು ಸ್ಥಾಪನೆ ಮಾಡಬೇಕು ಎಂದು ಹೇಳುತ್ತಿದ್ದೀರಿ. ಇದು ಬೆಂಗಳೂರು ಸುತ್ತ ಮುತ್ತ ಮಾತ್ರ ಬರಬಾರದು. ಎಲ್ಲಾ ತಾಲ್ಲೂಕು ಮಟ್ಟಕ್ಕೆ ಹೋಗಬೇಕು. ಹಳ್ಳಿಗಳು, ಸಾತನೂರು ಕ್ಷೇತ್ರಕ್ಕೆ ಬಾಗೇಪಲ್ಲಿ ಕ್ಷೇತ್ರಕ್ಕೆ ಇಲ್ಲಾ ಹಳ್ಳಿಗಳ ಮಟ್ಟಕ್ಕೆ ಹೋಯಿತು ಎಂದರೆ ಆಗ ಏನು ನಿರುದ್ಯೋಗದ ಸಮಸ್ಯೆ ಇದೆ, ತಾಲ್ಲೂಕು ಮಟ್ಟ ಏನು ಇದೆ ವಿದ್ಯಾ ವಿಚಾರದಲ್ಲಿ ಅಥವಾ ಆರೋಗ್ಯದ ವಿಚಾರದಲ್ಲಿ ಕೈಗಾರಿಕಾ ವಿಚಾರದಲ್ಲಿ ಅದೆಲ್ಲಾ ಸರಿ ಹೋಗಬಹುದು ಎಂದು ನನಗನ್ನಿಸುತ್ತದೆ.

ಕೈಗಾರಿಕೆ ಮತ್ತು ವಿದ್ಯುತ್ ವಿಚಾರದಲ್ಲಿ ಬಹುಶಃ ಅನುಕೂಲವಾಗುತ್ತದೆ. ಮತ್ತು ನಿರುದ್ಯೋಗ ಸಮಸ್ಯೆ ಏನಿದೆ, ಅದೂ ಕೂಡ ಬಗೆಹರಿಯುತ್ತದೆಯೆಂದು ನಾನು ತಿಳಿದುಕೊಂಡಿದ್ದೇನೆ. ವಿಶೇಷವಾಗಿ 58 ವರ್ಷಗಳಿಗೆ ನಿವೃತ್ತಿ ವಯಸ್ಸು ಏನಿದೆ, ಅದನ್ನು 55 ವರ್ಷಕ್ಕೆ ಇಳಿಸಿದಕ್ಕೆ ನಿರುದ್ಯೋಗಿ ಯುವಕರಿಗೆ ಅವಕಾಶ ಸಿಗುತ್ತದೆ. ಕನಿಷ್ಠ 3 ಲಕ್ಷದಿಂದ 5 ಲಕ್ಷದವರೆಗೂ ಉದ್ಯೋಗ ಸಿಗುತ್ತದೆ. ಯುವಕರಿಗೆ ಒಂದು ಪ್ರತ್ಯೇಕ ಕಮಿಷನ್ ನೇಮಕ ಮಾಡುತ್ತೇವೆಂದು ಬರೀ ಭಾಷಣ ಹೇಳಿದರೆ ಸಾಲದು. ಈಗ ಏನು ಬೆಂಗಳೂರಿನಲ್ಲಿ ಕೈಗಾರಿಕೆ ಸ್ಥಾಪಿಸಬೇಕೆಂದಿದ್ದೀರಿ, ಅದನ್ನು ಬೆಂಗಳೂರಿನಿಂದ 80-100 ಕಿಲೋಮೀಟರ್ ದೂರದಲ್ಲಿ ಗ್ರಮಾಂತರ ಪ್ರದೇಶದ್ದು ಸ್ಥಾಪಿಸಿ ಅಲ್ಲಿಗೆ ವಿದ್ಯುಚ್ಛಕ್ತಿ ನೀರಿನ ಸೌಲಭ್ಯ ಒದಗಿಸಿ ಉದ್ಯೋಗ ಸೃಷ್ಟಿಸಿದರೆ ಮಾತ್ರ ಯುವಕರ ಬಗ್ಗೆ ಚಿಂತನೆ ಮಾಡಿದಂತಾಗುತ್ತದೆ. ಕುಡಿಯುವ ನೀರಿನ ವಿಚಾರವಾಗಿ ಹೇಳುವುದಾದರೆ, ಸರ್ಕಾರ ಇದರ ಬಗ್ಗೆ ಸರಿಯಾದ ಕಾರ್ಯಕ್ರಮ ಹಾಕಿಕೊಂಡಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಕೋಲಾರ ಜಿಲ್ಲೆಯ ಬಗ್ಗೆ ಅಲ್ಲಿನ ಶಾಸಕರೊಬ್ಬರು ಹೇಳುತ್ತಿದ್ದರು ಏನೆಂದರೆ ನಮ್ಮ ಭೂಮಿಯಲ್ಲಿ ನೀರಿಲ್ಲ, ಒಂದು ವೇಳೆ ಬೋರ್‌ವೆಲ್ ಕೊರೆಸಿದರೂ ನೀರಿನ ಮಟ್ಟ ಅತ್ಯಂತ ಕೆಳಕ್ಕೆ ಹೋಗಿದೆ. ಎಂದು ನಮ್ಮ ಭಾಗದಲ್ಲಿ ಹರಿಯುತ್ತಿರುವ ಕಾವೇರಿ ನೀರು ಇವೊತ್ತು 400 ಅಡಿಗಳವರೆಗೆ ಮುಟ್ಟಿದೆ. ಹಿಂದೆ 200-250 ಅಡಿಗಳಷ್ಟಿತ್ತು. ನನ್ನ ತಾಲ್ಲೂಕಿನಲ್ಲಿ ಸುಮಾರು 2,000 ಬೋರ್‌ವೆಲ್‌ಗಳನ್ನು ಹಾಕಿಸಿದ್ದು ಈಗ ಅವುಗಳಲ್ಲಿ 50 ರಿಂದ 150 ಬೋರ್‌ವೆಲ್‌ಗಳು ಕೆಲಸ ಮಾಡುತ್ತಿಲ್ಲ. ಅಂತಹ ಪರಿಸ್ಥಿತಿ ಇದೆ.

ಮಾನ್ಯ ಮುಖ್ಯಮಂತ್ರಿಗಳು ಈಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದಾರೆಯೇ ಹೊರತು ಹಾಸನವಲ್ಲವೆಂದು ತಿಳಿದುಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲೇ ಅವರು ಈ ಹಿಂದೆ ಚುನಾವಣೆಯಲ್ಲಿ ಎರಡು ಭಾರಿ ಸ್ಪರ್ಧಿಸುದ್ದರು. ಹಾಗೆಯೇ ಕನಕಪುರದಲ್ಲೂ ಸ್ಪರ್ಧಿಸಿದ್ದರು. ನನ್ನ ಕ್ಷೇತ್ರ ಬೆಂಗಳೂರು ಪಕ್ಕದಲ್ಲಿರುವುದರಿಂದ ಅವರಿಗೆ ಆ ಕುರಿತು ಹೆಚ್ಚಿನ ಗಮನವಿದೆ.ಆದರೆ ಅಲ್ಲಿ ಕಾವೇರಿ ನದಿ ಹರಿಯುತ್ತಿದ್ದು, ನೀರು ಸಾಕಷ್ಟಿದ್ದು ಅಲ್ಲಿ ಕುಡಿಯುವ ನೀರಿನ ಯೋಜನೆ ಹಮ್ಮಿಕೊಳ್ಳದಿರುವ ಭಾವನೆಯಿಟ್ಟುಕೊಳ್ಳಬಾರದು. ಅಲ್ಲಿ ಕುಡಿಯುವ ನೀರಿಗೆ ವಿಶೇಷವಾದ ಆದ್ಯತೆ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಸಾರಿಗೆ ವಿಚಾರದಲ್ಲಿ ಹೇಳುವುದಾದರೆ, ಸಾರಿಗೆ ಇಲಾಖೆ ಇವೊತ್ತು ಸಂಪೂರ್ಣವಾಗಿ ಸತ್ತು ಹೋಗಿದೆಯೆಂದು ತಿಳಿದಿದ್ದೇನೆ. ಪಿ.ಜಿ.ಆರ್. ಸಿಂಧ್ಯರವರು ಮತ್ತು ಅಜೀಜ್ ಸೇಠ್‌ರವರು ಸಾರಿಗೆ ಮಂತ್ರಿಗಳಾಗಿದ್ದರೋ ಆ ಅವಧಿಯಲ್ಲಿ ಇಲಾಖೆ ಸತ್ತು ಹೋಯಿತು. ಇವೊತ್ತು ಯಾವುದೇ ಹೊಸ ಮಾರ್ಗ ಇಂಟ್ರಡ್ಯೂಸ್ ಆಗಿಲ್ಲ, 1,000 ಬಸ್ಸುಗಳನ್ನು ಹೊಸದಾಗಿ ಖರೀದಿಸಿಲ್ಲ. ತಾವು ನೋಡುತ್ತಿದ್ದೀರಿ, ಕೋಲಾರ, ರಾಮನಗರ ಕನಕಪುರ, ಚಿಕ್ಕಬಳ್ಳಾಪುರ ಮುಂತಾದ ಕಡೆಗಳಿಂದ ಬೆಂಗಳೂರಿಗೆ 100-150 ವ್ಯಾನ್‌ಗಳು ಬರುತ್ತಿವೆ.

ಸರಿಯಾಗಿ ಕೆಎಸ್‌ಆರ್‌ಟಿಸಿ ಬಸ್ಸುಗಳ ಸೌಲಭ್ಯವಿಲ್ಲ. ಕೆಲವು ಜನರಿಗೆ ಅನುಕೂಲವಾಗುತ್ತಿರಬಹುದು ಆದರೆ,ಈ ರೀತಿ ಜನರನ್ನು ಬೆಂಗಳೂರಿಗೆ ಹೊತ್ತು ತರುವ ವ್ಯಾನ್‌ಗಳ ಮಾಲೀಕರಿಗೆ ಆರ್.ಟಿ.ಎ. ನವರು ಕೊಡುತ್ತಿರುವ ಕಿರುಕುಳ ಆ ಭಗವಂತನಿಗೇ ಗೊತ್ತು. ಪೋಲೀಸ್ ಇಲಾಖೆಯೊಂದಿಗೆ ಹೋಲಿಸಿದರೆ ಆರ್‌ಟಿಎ ನವರು ಬಹಳಷ್ಟು ಕಿರುಕುಳ ಕೊಡುತ್ತಾರೆ. ಉದಾಹರಣೆಗೆ ಮೈಸೂರು ರಸ್ತೆಯಲ್ಲಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಪ್ರಯಾಣಿಕರನ್ನು ವಿವಿಧ ಊರುಗಳಿಗೆ ತಲುಪಿಸಲು ಅಲ್ಲಿ ಸಾಲುಗಟ್ಟಿ ಸುಮಾರು 20 ವಾಹನಗಳು ನಿಂತಿರುತ್ತವೆ. ಆರ್‌ಟಿಎ ಅಧಿಕಾರಿ ಇವರಿಂದ ಅಕ್ರಮವಾಗಿ ಹಣ ವಸೂಲು ಮಾಡುತ್ತಾನೆ. ಕನಿಷ್ಠ ಪಕ್ಷ ಒಂದು ದಿವಸಕ್ಕೆ 5,000 ರೂಪಾಯಿಗಳಷ್ಟು ವಸೂಲಿ ಮಾಡದೆ ಮನೆಗೆ ಹೋಗುವುದಿಲ್ಲ. ಇದಕ್ಕೆ ಸಾರಿಗೆ ಇಲಾಖೆಯವರು ಕಡಿವಾಣ ಹಾಕಬೇಕಾಗುತ್ತದೆ. ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಬಸ್ಸಿನ ಸೌಕರ್ಯ ಒದಗಿಸಿಕೊಡುವಂಥ ಕೆಲಸ ಈ ಸರ್ಕಾರ ಮಾಡುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಾ ನೀರಾವರಿ ವಿಚಾರದಲ್ಲಿ ಬರುವ

10ನೇ ತಾರೀಖಿನಂದು ಸರ್ಕಾರ ವಿಶೇಷವಾದ ಚರ್ಚೆ ಇಡುತ್ತದೆ ಎರಡು ಮಾನ್ಯ ಸದಸ್ಯರಾದ ನಾಗೇಗೌಡರು ಹೇಳುತ್ತಿದ್ದರು.

ಆಗ ನಾನು ಸಮಯವನ್ನು ಉಪಯೋಗಿಸಿಕೊಳ್ಳಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇನ್ನು ನಮ್ಮ ರಾಜ್ಯದ ಕೇಂದ್ರೀಯ ಯೋಜನೆಗಳೇನಿವೆ, ಇದಕ್ಕೆ ಸಂಬಂಧಿಸಿದಂತೆ, ದೆಹಲಿಯಲ್ಲಿ ನಮ್ಮ ರಾಜ್ಯದಿಂದ ಒಬ್ಬ ಕ್ಯಾಬಿನೆಟ್ ಮಿನಿಸ್ಟರ್ ಮಟ್ಟದ ರಾಜಕಾರಣಿಯನ್ನು ನೇಮಕ ಮಾಡಿ ಕಛೇರಿಯನ್ನು ತೆರೆಯುವ ಬಗ್ಗೆ ಕೇಂದ್ರದಲ್ಲಿ ಪ್ರಸ್ತಾಪವನೆಯಿದೆಯೆಂದು ನಾಗೇಗೌಡರು ಹೇಳಿದರು. ಈ ದಿಸೆಯಲ್ಲಿ ಕೆಲಸ ಮಾಡಲು ಪ್ರಸ್ತಾವನೆಯಿದೆಯೆಂದು ನಾಗೇಗೌಡರು ಹೇಳಿದರು. ಈ ದಿಸೆಯಲ್ಲಿ ಕೆಲಸ ಮಡಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಾನು ಕಂದಾಯ ಇಲಾಖೆ, ಆಹಾರ ನಿಗಮ ಹಾಗೂ ಕೆ.ಇ.ಬಿ. ಬಗ್ಗೆ ಮಾತನಾಡಲು ಬೇಕಾದಷ್ಟು ವಿಚಾರಗಳಿರುವುದರಿಂದ ಕಾಲಾವಕಾಶ ಕಡಿಮೆಯಿರುವುದರಿಂದಾಗಿ ಕಬ್ಬಿನ ವಿಚಾರವಾಗಿ ಮಾತ್ರ ಈಗ ಮಾತನಾಡುತ್ತೇನೆ. ನಮ್ಮ ರಾಜ್ಯದಲ್ಲಿ ರೈತರು ಏನು ಕಬ್ಬನ್ನು ಬೆಳೆಯುತ್ತಿದ್ದಾರೆ, ಅದರಲ್ಲಿ ಶೇಕಡ 20-25ರಷ್ಟು ಪ್ರಮಾಣದಲ್ಲಿ ಕೂಡ ಸರಿಯಾಗಿ ಕಾರ್ಖಾನೆಗಳಿಗೆ ಒದಗಿಸುವುದಕ್ಕಾಗುತ್ತಿಲ್ಲ. ಕಬ್ಬಿನ ಬೆಲೆ ಟನ್ನಿಗೆ 700 ರೂಪಾಯಿಗಳೆಂದು ನಿಗದಿಯಾಗಿದ್ದರೂ ದಳ್ಳಾಳಿಗಳು 300ರಿಂದ 350 ರೂಪಾಯಿಗಳಿಗೆ ಕೊಳ್ಳುವ ಪರಿಸ್ಥಿತಿ ಬಂದಿದೆ. ಆದುದರಿಂದ,ಕಬ್ಬು ಬೆಳೆಯುವ ರೈತರಿಗಾಗಿ ವಿಶೇಷವಾದ ಕಾರ್ಯಕ್ರಮ ಹಾಕಿಕೊಂಡು ನಮ್ಮಲ್ಲಿ ಬೆಳೆದಂಥ ಕಬ್ಬಿಗೆ ವಿಶೇಷ ಬೆಲೆ ನಿಗದಿಪಡಿಸುವುದಲ್ಲದೆ ಕಬ್ಬನ್ನು ಸರಿಯಾದ ಕಾಲದಲ್ಲಿ ಕಟಾವುಗೊಳಿಸುವ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕ್ರೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಿಸುತ್ತಾ, ಇದುವರೆವಿಗೂ ನಾನು ಯಾವ್ಯಾವ ವಿಚಾರಗಳನ್ನು ಪ್ರಸ್ತಾಪಿಸಿ ಸಲಹೆಗಳನ್ನು ಕೊಟ್ಟಿದ್ದೇನೆ, ಅದೆಲ್ಲವನ್ನೂ ಸರ್ಕಾರ ಗಮನದಲ್ಲಿಟ್ಟುಕೊಂಡು ಸರಿಯಾಗಿ ಕೆಲಸ ಮಾಡುತ್ತದೆ, ಮತ್ತು ಐದು ವರ್ಷಗಳ ಕಾಲ ಈ ರಾಜ್ಯವನ್ನು ಆಳುತ್ತಿದೆಂದು ಆಶಿಸುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈ ಕರ್ನಾಟಕ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಪ್ರಸ್ತಾವವನ್ನು ಮಾನ್ಯ ಸದಸ್ಯರಾದ ಕೆ.ಎನ್. ನಾಗೇಗೌಡರು, ಮಂಡಿಸಿದರೆ, ಅದನ್ನು ಸದಸ್ಯರಾದ ಜಿ. ಬಸವಣ್ಣಪ್ಪನವರು ಅನುಮೋದಿ ಸುತ್ತಾ ಮಾತನಾಡಿದ್ದಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕರ್ನಾಟಕದಲ್ಲಿ ಎಲ್ಲವನ್ನೂ ಸರ್ಕಾರ ಮಾಡುವುದಕ್ಕೆ ಸಿದ್ಧವಿದೆ. ಎನ್ನುವ ಧೋರಣೆಯಲ್ಲಿ ಮಾತನಾಡಿದರು. ಮತ್ತು ಸರ್ಕಾರ ಮೂರು ದೊಡ್ಡ ಸಾಧನೆಗಳನ್ನು ಮಾಡಿದೆಯೆಂದು ಹೇಳಿದರು. ಅವು ಏನೆಂದರೆ ಮೊದಲನೆಯದಾಗಿ ಹುಬ್ಬಳ್ಳಿ ವಿವಾದ ಇತ್ಯರ್ಥ, ಎರಡನೆಯದಾಗಿ ಸಾಲದ ಮೇಲಿನ ಬಡ್ಡಿಮನ್ನಾ, ಮೂರನೆಯದು ಬಡವರಿಗೆ ಕಡಿಮೆ ದರದಲ್ಲಿ ಅಕ್ಕಿ ವಿತರಣೆ. ಹುಬ್ಬಳ್ಳಿ ಈದಗಾ ಮೈದಾನದ ಬಗ್ಗೆ ಸರ್ಕಾರದ ವಿಶೇಷ ಸಾಧನೆಯೇನು? ಸರ್ಕಾರ ಅಧಿಕಾರಕ್ಕೆ ಬಂದ ನಂತರ ತಾವು ಒಬ್ಬರೇ ಇದನ್ನು ಮಾಡಿದ್ದು, ಇದಕ್ಕೆ ಬೇರೆ ಯಾರದೇ ಸಹಕಾರ ಇಲ್ಲವೆನ್ನುವ ರೀತಿಯಲ್ಲಿ ಸನ್ಮಾನ್ಯ ಸದಸ್ಯರು ಮಾತನಾಡಿದರು. ಇದರ ಕುರಿತು ನಾನು ಇವೊತ್ತು ಹೇಳುವುದಾದರೆ ಭಾರತೀಯ ಜನತಾ ಪಕ್ಷ ಈ ವಿಷಯದಲ್ಲಿ ಮೂಲಭೂತಹಕ್ಕಾದ, ಈ ದೇಶದಲ್ಲಿ ಪ್ರತಿಯೊಬ್ಬ ಪ್ರಜೆಗೂ ಕೂಡ ರಾಷ್ಟ್ರಧ್ವಜ ಹಾರಿಸಲು ಹಕ್ಕು ಇದೆಯೆಂದು ಮೊದಲಿನಿಂದಲೂ ಪ್ರತಿಪಾದನೆ ಮಾಡಿಕೊಂಡು ಬರುತ್ತಿದ್ದು,

ಇದೇ ಪ್ರತಿಪಾದನೆಯನ್ನು ರಾಜ್ಯದಲ್ಲಿ ಸರ್ಕಾರ ಅಧಿಕಾರಕ್ಕೆ ಬಂದಾಗ ಕೂಡ ಅದರ ಮುಂದಿಟ್ಟು ನೀವೇ ರಾಷ್ಟ್ರಧ್ವಜ ಹಾರಿಸಿ ಎಂದು ಕೇಳಿಕೊಳ್ಳಲಾಯಿತು. ಅಲ್ಲದೆ ರಾಜ್ಯಪಾಲರು ಸಹ ಇದರಲ್ಲಿ ತಪ್ಪೇನಿದೆ, ಸರ್ಕಾರವೇ ರಾಷ್ಟ್ರಧ್ವಜ ಹಾರಿಸುವ ಕೆಲಸ ಮಾಡಬಹುದಿತ್ತು. ಎಂಬ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. ಭಾರತೀಯ ಜನತಾ

ಪಕ್ಷ ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದಾಗ ತನ್ನ ಬೇಡಿಕೆ ಇಟ್ಟು ರಾಷ್ಟ್ರಧ್ವಜಕ್ಕೆ ಅಗೌರವವಾಗಿದೆ, ಅವಮಾನವಾಗಿದೆ, ಅದನ್ನು ಸರಿಪಡಿಸಿ, ಮುಖ್ಯಮಂತ್ರಿಗಳಾಗಿ ನೀವು ಹುಬ್ಬಳ್ಳಿಗೆ ಬಂದು ರಾಷ್ಟ್ರಧ್ವಜ ಹಾರಿಸಿ, ಇಲ್ಲವೇ ಜಿಲ್ಲಾಧಿಕಾರಿಯಿಂದಲಾದರೂ ಹಾರಿಸಿ. ಎಂದಾಗ ಅದಕ್ಕೆ ಗಮನಕೊಡದಿದ್ದರಿಂದ ಅಲ್ಲಿ ಗೋಲಿಬಾರ್ ಆಗಿ ಜನರು ಸತ್ತ ನಂತರ, ನಾವೇ ಇವನ್ನು ಬಗೆಹರಿಸಿದ್ದೇವೆಂದು ಹೇಳಿಕೊಂಡು ಮುಂದೆ ಬಂದಿದ್ದೀರಿ ಇದಕ್ಕೋಸ್ಕರ ನಾನು ನಿಮಗೆ ಅಭಿನಂದನೆ ಸಲ್ಲಿಸುವುದಿಲ್ಲ. ಆ ವಿಷಯದಲ್ಲಿ ನಮ್ಮ (ಬಿಜೆಪಿ) ಸಹಕಾರ ಅಪಾರವಾಗಿತ್ತು. ನಮ್ಮ ಸಹಕಾರವಿಲ್ಲದಿದ್ದರೆ ವಿವಾದ ಇತ್ಯರ್ಥವಾಗುತ್ತಿರಲಿಲ್ಲ. ಇದರ ಬಗ್ಗೆ ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳಲು ಹೋಗಬೇಡಿ. ಇದೊಂದು ದೊಡ್ಡ ಬಗ್ಗೆ ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳಲು ಹೋಗಬೇಡಿ. ಇದೊಂದು ದೊಡ್ಡ ಸಾಧನೆ ಮಾಡಿದ್ದೇವೆಂದು ಏನು ಹೇಳಿದ್ದೀರಿ, ಅದು ಹೆಚ್ಚಿನ ಸಾಧನೆಯೇನೂ ಅಲ್ಲ.

4.40 ಪಿ.ಎಂ

ಸಭಾಧ್ಯಕ್ಷರೆ, ಒಂದು ಕಡೆ ಈದ್ಗಾ ಮೈದಾನದ ಬಗ್ಗೆ ನಾವು ತಾಳ್ಮೆಯಿಂದ ಎಲ್ಲಾ ಪರಿಶೀಲನೆ ಮಾಡಿ ರಾಷ್ಟ್ರಧ್ವಜವನ್ನು ಹಾರಿಸಿಬಿಟ್ಟಿದ್ದೇವೆ ಎಂದು ಹುಬ್ಬಳ್ಳಿಯ ಬಗ್ಗೆ ಹೇಳಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಇರತಕ್ಕ ಈದ್ಗಾ ಮೈದಾನದ ಬಗ್ಗೆ ಇವತ್ತು ಸುಪ್ರೀಂ ಕೋರ್ಟಿನಲ್ಲಿ ತೀರ್ಮಾನವಾಗಿದೆ. ಅಲ್ಲಿರತಕ್ಕ ಎಲ್ಲ ನಾಗರೀಕರು, ಎಲ್ಲ ಮಕ್ಕಳು ಸಾರ್ವಜನಿಕರು ಈದ್ಗಾ ಮೈದಾನದಲ್ಲಿ ಓಡಾಡಬಹುದು ಎಂದು ತೀರ್ಮಾನವಾಗಿದ್ದರೂ ಕೂಡ 15 ದಿವಸದ ಹಿಂದೆ ಸರ್ಕಾರ ಅಥವಾ ವಕ್ಫ್ ಬೋರ್ಡಿನಿಂದ ಕಾರ್ಪೊರೇಷನ್ ಅಧಿಕಾರಿಗಳಿಗೆ ಒಂದು ಪತ್ರ ಹೋಗಿದೆ. ಏನೆಂದರೆ ಚಾಮರಾಜಪೇಟೆ ಈದ್ಗಾ ಮೈದಾನವನ್ನು ವಕ್ಫ್ ಬೋರ್ಡಿಗೆ ವಹಿಸಿಕೊಡಬೇಕೆಂದು ಹೇಳಿದ್ದಾರೆ. ಆದ್ದರಿಂದ ನಾಗೇಗೌಡರೆ, ಒಂದು ಕಡೆ ಸಮಾಧಾನಕರವಾಗಿ ನಾವು ಈದ್ಗಾ ಮೈದಾನದ ಸಮಸ್ಯೆಯನ್ನು ಪರಿಹಾರ ಮಾಡಿದ್ದೇವೆ ಎಂದು ಹೇಳಿ ಚಾಮರಾಜಪೇಟೆ ಈದ್ಗಾ ಮೈದಾನದ ವಿಚಾರಕ್ಕೆ ಹೋಗಿ ಗಲಾಟೆಗೆ ಅವಕಾಶ ಮಾಡಿಕೊಡಬೇಡಿ. ಸಮಾಧಾನವಾಗಿ ನಾವು, ಅಲ್ಪಸಂಖ್ಯಾತರು ಸೆಂಟ್ರಲ್ ಮುಸ್ಲಿಂ ಅಸೋಸಿಯೇಷನ್ ಎಲ್ಲರೂ ಕೂಡಿ ಅಣ್ಣತಮ್ಮಂದಿರಂತೆ ನಮ್ಮ ಕ್ಷೇತ್ರದಲ್ಲಿ ಬಾಳ್ವೆ ಮಾಡುತ್ತಿದ್ದೇವೆ. ಅಲ್ಲಿ ಒಂದು ಒಡಕನ್ನು ತರುವ ಪ್ರಯತ್ನವನ್ನು ಮಾಡಬೇಡಿ. ಅಲ್ಲಿ ತಮ್ಮ ಸಾಧನೆಯನ್ನು ತೋರಿಸತಕ್ಕ ಕೆಲಸವನ್ನು ತಾವು ಮಾಡಬೇಡಿ ಎಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ ಅವರು ಎರಡನೇ ಮಾತು ಹೇಳಿದ್ದು ದೊಡ್ಡ ಸಾಧನೆ ಏನೆಂದರೆ ಬಡ್ಡಿ ಸಾಲ ಮನ್ನಾ ಮಾಡಿದ್ದೇವೆ, ಮೂರು ತಿಂಗಳು ಬಡ್ಡಿ ಸಾಲವನ್ನು ರೈತರ ಸಾಲವನ್ನು ಮನ್ನಾ ಮಾಡಿದ್ದೇವೆ, ಯಾವ ಸರ್ಕಾರವೂ ಮಾಡದೇ ಇರತಕ್ಕ ಸಾಲವನ್ನು ಮನ್ನಾ ಮಾಡಿದ್ದೇವೆ ಎಂದು ಹೇಳಿದ್ದಾರೆ. ನಾನು ಕೇಳುತ್ತಿದ್ದೇನೆ ತಮಗೆ ಮಧ್ಯಪ್ರದೇಶದಲ್ಲಿದ್ದಂಥ ಭಾರತೀಯ ಜನತಾ ಪಾರ್ಟಿ ಈ ಸಾಲ ಮನ್ನಾ ಮಾಡಿತ್ತೋ ಅಥವಾ ಇಲ್ಲವೋ? ನಮ್ಮ ಪಾರ್ಟಿ ಭಾರತೀತಯ ಜನತಾ ಪಾರ್ಟಿ ಸಾಲ ಮನ್ನಾಮಾಡಿದಂಥ ಪ್ರಥಮ ರಾಜಕೀಯ ಪಕ್ಷ. ಆದ್ದರಿಂದ ನಮ್ಮ ಸಾಧನೆ ಎಂದು ಮಾತನಾಡುವುದಕ್ಕೆ.

ಶ್ರೀ ಎಂ. ನಾರಾಯಣಸ್ವಾಮಿ : ಕೇಂದ್ರದಲ್ಲಿ ವಿ.ಪಿ. ಸಿಂಗ್ 1990ರಲ್ಲೇ ಮಾಡಿದ್ದರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಈಲ್ಡ್ ಆಗಿಲ್ಲ. ನಾನು ಈಲ್ಡ್ ಆಗುವುದಿಲ್ಲ.

ಶ್ರೀ ಎಂ. ನಾರಾಯಣಸ್ವಾಮಿ : ಅವರ ಸರ್ಕಾರ ಮನ್ನಾ ಮಾಡಿದ್ದಲ್ಲ. ಕೇಂದ್ರ ಸರ್ಕಾರದಲ್ಲಿ ವಿ.ಪಿ.ಸಿಂಗ್. ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಪ್ರಥಮವಾಗಿ ಸಾಲವನ್ನು ಮನ್ನಾ ಮಾಡಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬಡ್ಡಿ ಮತ್ತು ಸುಸ್ತಿ ಬಡ್ಡಿ ಬಗ್ಗೆ ನಾನು ಹೇಳಿದ್ದು.

ಶ್ರೀ ಎಂ. ನಾರಾಯಣ ಸ್ವಾಮಿ : 1983-84ರಲ್ಲಿ ಹಗಡೆಯವರು ಮಾಡಿದ್ದರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸ್ವಲ್ಪ ಸಮಾಧಾನದಿಂದ ಇರಿ. ಹೆಚ್ಚು ಆತುರ ಬೇಡ. ಸಾಲ ಬಡ್ಡಿ ಮನ್ನಾ ಎಂದು ಒಂದು ಕಡೆ ಹೇಳುತ್ತಾರೆ. ಸುಸ್ತಿ ಬಡ್ಡಿ ಮನ್ನಾ ಮಾಡಿದ್ದಾರೋ ಸಾಲ ಬಡ್ಡಿ ಮನ್ನಾ ಮಡಿದ್ದಾರೋ. ನಾನು ಇವತ್ತು ಕೇಳುತ್ತಿದ್ದೇನೆ, ರಸಗೊಬ್ಬರಕ್ಕೆ ಕೊಡುತ್ತಿದ್ದ ಸಬ್ಸಿಡಿಯನ್ನು ಕೊಡುತ್ತಿಲ್ಲ, ನಾನೇನು ಮಾಡಲಿ ಎಂದು ಕೈಕಟ್ಟಿ ಕುಳಿತುಕೊಳ್ಳುವುದು ಒಂದು ಕಡೆಯಾದರೆ ಮತ್ತೊಂದು ಕಡೆ ಸಾಲ ಬಡ್ಡಿ ಮನ್ನಾ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಮಾನ್ಯ ಸಭಾಧ್ಯಕ್ಷರೆ, ನಾನು ಇವತ್ತು ಕೇಳುತ್ತಿದ್ದೇನೆ, ಈ ಸರ್ಕಾರ ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ ರಸಗೊಬ್ಬರದ ಬೆಲೆ ಏನಿತ್ತು ಇವತ್ತು ಏನು ಬೆಲೆ ಇದೆ? ಅವತ್ತಿನಿಂದ ಇವತ್ತಿಗೆ 600 ರಿಂದ 700 ರೂಪಾಯಿವರೆಗೆ ರಸಗೊಬ್ಬರದ ಬೆಲೆ ಹೆಚ್ಚಾಗಿದೆ. ಒಂದು ಕಡೆ ಸಾಲದ ಹೊರೆ ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಿರಿ. ಮತ್ತೊಂದು ಕಡೆ ಬೆಲೆಯನ್ನು ಹೆಚ್ಚು ಮಾಡುತ್ತಿದ್ದೀರಿ. ಇದರಿಂದ ಯಾವ ರೈತರಿಗೂ ಕೂಡ ಅನುಕೂಲ ಆಗುತ್ತಿಲ್ಲ. ಇದನ್ನು ನೀವು ಯೋಚನೆ ಮಾಡಬೇಕು. ಮಾನ್ಯ ಸಭಾಧ್ಯಕ್ಷರೆ, ಇವತ್ತು ಏನಾಗಿದೆ ಎಂದರೆ ಇಡೀ ಕರ್ನಾಟಕದಲ್ಲಿ ರಸಗೊಬ್ಬರದ ಕಾರ್ಖಾನೆಗಳು ಏನಿದ್ದವು ಅದೆಲ್ಲಾ ಮುಚ್ಚಿದ್ದಾರೆ. ಕೇರಳದಲ್ಲಿಲ್ಲ, ಆಂಧ್ರದಲ್ಲಿಲ್ಲ, ಕಾರಣ ಏನು ಹೇಳತ್ತೀರಾ? ಕರ್ನಾಟಕಕದಲ್ಲಿರತಕ್ಕ ರಸಗೊಬ್ಬರದ ಕಾರ್ಖಾನೆಗಳನ್ನು ಏತಕ್ಕೋಸ್ಕರ ಮುಚ್ಚಿದ್ದಾರೆ?

ಶ್ರೀ ಕೆ.ಎನ್. ನಾಗೇಗೌಡ : ಒಂದು ಟನ್ ರಸಗೊಬ್ಬರಕ್ಕೆ 600 ರೂಪಾಯಿಗಳಿಂದ 700 ರೂಪಾಯಿಗಳಿಗೆ ನಿಮ್ಮ ಸರ್ಕಾರ ಬಂದಮೇಲೆ ಹೆಚ್ಚಾಗಿದೆ ಎಂದು ಹೇಳಿದ್ದೀರಿ. ದಯವಿಟ್ಟು ರಾಜ್ಯ ಸರ್ಕಾರ ರಸಗೊಬ್ಬರದ ಬೆಲೆ ನಿಗದಿ ಮಾಡಿದೆಯೂ? ನಿಗದಿ ಮಾಡಿದ್ದರೆ ಎಷ್ಟು ಮಾಡಿದ್ದಾರೆ ಹೇಳುತ್ತೀರಾ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಇಲ್ಲಿ ಇರತಕ್ಕದ್ದು ವಂದನಾ ನಿರ್ಣಯ ಪ್ರತಿಪಾದನೆ ಮಾಡುತ್ತಾ ನಿಮ್ಮ ಕಡೆ ಸದಸ್ಯರು ಏನು ಪ್ರತಿಪಾದನೆ ಮಾಡಿದರೋ ಅದಕ್ಕೆ ಉತ್ತರ ಕೊಡುವುದಕ್ಕೆ ನಿಂತಿದ್ದೇನೆ. ಬೇರೆ ಚರ್ಚೆ ಮಾಡುವುದಕ್ಕೆ ನಿಂತಿಲ್ಲ. ಅಧ್ಯಕ್ಷರು ಅಪ್ಪಣೆ ಕೊಟ್ಟರೆ ಉತ್ತರ ಕೊಡುವುದಕ್ಕೆ ತಯಾರಿದ್ದೇನೆ. ರಾಜ್ಯಪಾಲರ ವಂದನಾ ನಿರ್ಣಯಕ್ಕೆ...

ಶ್ರೀ ಎನ್. ಕೃಷ್ಣಪ್ಪ : ರೈತರ ಬಗ್ಗೆ ಕಳವಳಿ ಮಾಡುವಾಗ...

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಈಲ್ಡ್ ಆಗಿಲ್ಲ.

ಶ್ರೀ ಎಸ್. ಕೃಷ್ಣಪ್ಪ : ತಮ್ಮ ಪಕ್ಷ ಏನೂ ಮಾಡಲಿಲ್ಲ.

ಶ್ರೀಮತಿ ಎಸ್.ಪ್ರಮೀಳಾ ನೇಸರ್ಗಿ : ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ನಿಂತರೆ ನಿಮಗೇನಾಗುತ್ತದೆ? ಏತಕ್ಕೆ ಹೀಗೆ ಮಾಡುತ್ತೀರಿ? ಏನಾಗುತ್ತದೆ ನಿಮಗೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ನಾನು ಕ್ರಿಯಾಲೋಪ ಎತ್ತುತ್ತಿದ್ದೇನೆ. ಜನತಾ ದಳ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಹಿಳೆಯರ ಬಗ್ಗೆ ಬಹಳ

ಅಪಾರವಾದ ಗೌರವ ಇಟ್ಟುಕೊಂಡಿದ್ದಾರೆ. ತಾವು ಇಟ್ಟುಕೊಂಡಿದ್ದೀರಿ. ಮತ್ತು ಶೇಕಡ 30 ಭಾಗ ಮಹಿಳೆಯರು ಜಿಲ್ಲಾ ಪಂಚಾಯಿತಿಯಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನವನ್ನು ಕೊಡಬೇಕೆಂದು ಹೇಳಿದ್ದಾರೆ. ಕೊಟ್ಟಾಗಿದೆ. ಆ ಕಡೆ ನಾಲ್ಕುಜನ ಮಹಿಳೆಯರು ಸದ್ಯಕ್ಕಂತೂ ಇಲ್ಲ. ಇಡೀ ಸಭೆಗೆ ಒಬ್ಬರೇ ಒಬ್ಬರು ಮಹಿಳೆ ಕಣ್ಣಿಗೆ ಕಾಣುತ್ತಿರುವುದು. ಒಬ್ಬ ಮಹಿಳೆ ಎದ್ದು ಮಾತನಾಡುತ್ತಾ ಇದ್ದರೆ ಕೇಳತಕ್ಕ ಸೌಜನ್ಯ ಜನತಾ ದಳದವರಿಗೆ ಇಲ್ಲದೆ ಈ ರೀತಿ ಮೇಲೆ ಬಿದ್ದರೆ ತಾವು ರಕ್ಷಣೆ ಕೊಡಬೇಕಾಗುತ್ತದೆ.ಚ ಇದು ಒಳ್ಳೆಯದಲ್ಲ. ಇದು ಹೆಂಗಸರ ಮೇಲೆ ಗಂಡಸರ ದಾಳಿ. ಇದನ್ನು ನಾನು ಒಪ್ಪುವುದಿಲ್ಲ, ಪ್ರಾಮಾಣಿಕವಾಗಿ ಹೆಂಗಸರ ಬಗ್ಗೆ ಗೌರವ ಇಟ್ಟುಕೊಳ್ಳಬೇಕೇ ಹೊರತು ದಾಳಿ ಮಾಡಬಾರದು. ನಾವು ದಾಳಿ ಮಾಡುವುದಕ್ಕೆ ಹೋದರೆ ನಾವು ಗಂಡಸರಲ್ಲ.

ಅಧ್ಯಕ್ಷರು : ನಮಗೇನು ಸಂತೋಷ ಅಂದರೆ ನೀವು ಈ ರೂಪದಲ್ಲಾದರೂ ಅವರನ್ನು ಹೆಣ್ಣುಮಕ್ಕಳು ಎಂದು ಒಪ್ಪಿಕೊಂಡಿರಲ್ಲ. ಯಾವಾಗಲೂ ಚಾಲೆಂಜ್ ಮಾಡುತ್ತಿದ್ದಿರಿ.

ಶ್ರೀ ವಾಟಾಳ್ ನಾಗರಾಜ್ : ಪ್ರಾಮಾಣಿಕವಾಗಿ ಅವರು ಹೆಣ್ಣುಮಗಳು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಸಭಾಧ್ಯಕ್ಷರೆ, 224 ಜನ ಅಲ್ಲ, 2 ಸಾವಿರ ಜನ ಬಂದು ಆ ಕಡೆ ನಿಂತರೂ ಕೂಡ ಅವರ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ನಾನು ಸಿದ್ಧವಾಗಿದ್ದೇನೆ. ಅವರಾರೂ ಹೆದರಿಕೊಳ್ಳಬೇಕಾಗಿಲ್ಲ. ಅವರಿಗೇನು ಭಯ ಅಂದರೆ ಸಭಾಧ್ಯಕ್ಷರೆ, ತಪ್ಪು ಎಲ್ಲಾ ಹೊರಗಡೆ ಬಂದುಬಿಡುತ್ತದಲ್ಲ ಪ್ರಮೀಳ ಏನಾದರೂ ಮಾತನಾಡುವುದಕ್ಕೆ ಶುರು ಮಾಡಿದರೆ ಎಲ್ಲಾ ಹುಳುಕುಗಳು ಹೊರಗೆ ಬರುತ್ತದಲ್ಲ, ಹೇಗಾದರೂ ಮಾಡಿ ಇದನ್ನು ತಪ್ಪಿಸೋಣ ಅಂತ ಅವರು ಹೀಗೆ ಮಾಡುತ್ತಿದ್ದಾರೆ. ಏನೂ ಹದರಿಕೊಳ್ಳಬೇಡಿ. ಇದ್ದದ್ದನ್ನು ಇದ್ದಹಾಗೆ ಹೇಳತಕ್ಕವಳು ನಾನು ರೆಕಾರ್ಡ್‌ನಲ್ಲಿ ಇರತಕ್ಕದ್ದನ್ನು ಹೇಳತಕ್ಕವಳು.

ಏನು ಬೇಕಾದರೂ ರೆಕಾರ್ಡನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಯೋಚನೆ ಮಾಡಬೇಡಿ. ನಿಮ್ಮ ರೆರ್ಕಾಡ್ಸ್ ಇವತ್ತು ತೆಗೆದುನೋಡಿ. ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ, ತಮ್ಮ ನಾಯಕರ ಹತ್ತಿರ ಕೇಳುತ್ತಿದ್ದೇನೆ. ಕೇರಳದಲ್ಲಲ್ಲ, ತಮಿಳುನಾಡಿನಲ್ಲಲ್ಲ, ನಮ್ಮ ಕರ್ನಾಟಕದಲ್ಲಿ ರಸಗೊಬ್ಬರ ಕಾರ್ಖಾನೆಗಳು ಮುಚ್ಚಿಹೋಗಿವೆ. ಏತಕ್ಕೆ ಮುಚ್ಚಿವೆ ಎಂದು ಕೇಳುತ್ತಿದ್ದೇನೆ. ಅದರ ಪರಿಣಾಮವಾಗಿ ಇವತ್ತು ಬೆಲೆಗಳು ಹೆಚ್ಚಾಗುತ್ತಿವೆ. ಕರ್ನಾಟಕದಲ್ಲಿ ಇರತಕ್ಕ ರೈತರಿಗೆ ರಸಗೊಬ್ಬರ ಸರಿಯಾದ ಬೆಲೆಯಲ್ಲಿ ಸಿಗುತ್ತಿಲ್ಲ. ಸಿಗುವುದಕ್ಕೆ ಸಾಧ್ಯವಿಲ್ಲ. ಇದೇ ರೀತಿ ಮುಚ್ಚುತ್ತಾ ಹೋದರೆ ಬೆಲೆಗಳು ಗಗನಕ್ಕೆ ಏರುತ್ತಾ ಹೋಗುತ್ತವೆ. ಕರ್ನಾಟಕದ ರೈತರ ಸ್ಥಿತಿ ಅಧೋಗತಿಯಾಗುತ್ತದೆ. ಆದ್ದರಿಂದ ರೈತರ ಸಾಲ ಮನ್ನಾ ಮಾಡಿಬಿಟ್ಟಿದ್ದೇವೆ ಎಂದು ಹೆಗ್ಗಳಿಕೆ ತೆಗೆದುಕೊಳ್ಳುತ್ತಿದ್ದೀರಲ್ಲ, ತಮಗೆ ಹೆಗ್ಗಳಿಕೆ ಬೇಕಾದರೆ ಮೊಟ್ಟಮೊದಲು ರಸಗೊಬ್ಬರ ಕಾರ್ಖಾನೆಗಳು ಏನು ಮುಚ್ಚಿವೆ ಅವುಗಳನ್ನೆಲ್ಲಾ ತೆಗೆಯುತಕ್ಕ ಪ್ರಯತ್ನ ಮಾಡಿ. ರಸಗೊಬ್ಬರದ ಬೆಲೆಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿ, ರೈತರಿಗೆ ಕಡಿಮೆ ಬೆಲೆಯಲ್ಲಿ ಸಿಗುವಹಾಗೆ ಮಾಡಿ, ಆಗ ನಿಮ್ಮ ಹೊಗಳಿಕೆ ತೆಗಳಿಕೆ ಆಮೇಲೆ ನೋಡೋಣ. ಇನ್ನು ಮೂರನೇ ಸಾಧನೆ....

ಶ್ರೀ ಕೆ.ಎನ್.ನಾಗೇಗೌಡ : ಒಂದು ನಿಮಿಷ ಕೇಳಿ. ಅವರು ತಪ್ಪು ಮಾಹಿತಿ ಕೊಡುತ್ತಿದ್ದಾರೆ.ರಾಜ್ಯಸರ್ಕಾರದವರು...

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಭಾಧ್ಯಕ್ಷರೆ, ದಯವಿಟ್ಟು ತಾವು ಹೇಳಬೇಕು. ಒಂದು ಸಾರಿ ಎರಡು ಸಾರಿ ಸುಮ್ಮನಿರರಬಹುದು. ನಾನು ಈಲ್ಡ್ ಆಗುವುದಿಲ್ಲ ಈಗ. ನಾನು ತಪ್ಪು ಮಾಹಿತಿ ಕೊಟ್ಟರೆ ಪ್ರಿವಿಲೈಜ್ ತನ್ನಿ. ತಪ್ಪು ಮಾಹಿತಿಯನ್ನು

ಕೊಡುವುದಕ್ಕೂ ಸಾಧ್ಯವಿಲ್ಲ, ಕೊಡುವುದೂ ಇಲ್ಲ. ಮಾನ್ಯ ಸಭಾಧ್ಯಕ್ಷರೆ, ಮೂರನೆಯ ಸಾಧನೆ ಏನು? ಬಡವರಿಗೆ ಅಕ್ಕಿಯನ್ನು ಸುಲಭದರದಲ್ಲಿ ಏಪ್ರಿಲ್ 1ನೇ ತಾರೀಖಿನಿಂದ ಕೊಟ್ಟಿದ್ದೇವೆ ಎಂದು. ಎಂಥ ಅಕ್ಕಿ ಸ್ವಾಮಿ ಕೊಟ್ಟಿರುವುದು? ರೇಷನ್ ಅಂಗಡಿಯಲ್ಲಿ ಇರತಕ್ಕ ಅಕ್ಕಿ ತಿಂದರೆ ಇನ್ನೊಂದು ತಿಂಗಳಲ್ಲಿ ನೋಡಬಹುದು ವಿಕ್ಟೋರಿಯಾ ಆಸ್ಪತ್ರೆ ಮತ್ತು ಎಲ್ಲಾ ಆಸ್ಪತ್ರೆಗಳಲ್ಲೂ ಕೂಡ ಗ್ರಾಹಕರ ಪ್ರಮಾಣ ಹೆಚ್ಚಾಗಿಹೋಗುತ್ತದೆ.

ಔಷಧಿಗಳು ಸಿಗುತ್ತಿಲ್ಲ ಎನ್ನುವುದನ್ನು ತಾವು ನೋಡಿಕೊಳ್ಳಬೇಕು. ತಾವು ಈ ಅಕ್ಕಿಯನ್ನು ತಿನ್ನಬೇಕಾಗಿತ್ತು, ಅಕ್ಕಿಯನ್ನು ತಿಂದು ನೋಡಿ ಯಾರಾದರೂ ತಿನ್ನತಕ್ಕಂತಹ ಯೋಗ್ಯ ವಾಗಿರತಕ್ಕಂತಹ ಅಕ್ಕಿ ಏನಾದರೂ ಈ ರೇಷನ್ ಸಭಾಧ್ಯಕ್ಷರೆ ನಾನು ಕೇಳುತ್ತಿದ್ದೇನೆ, ಕೇವಲ ಅನ್ನ ತಿಂದು ಬದುಕುವುದಕ್ಕೆ ಸಾಧ್ಯ ಇದೆಯಾ, ಅನ್ನದ ಜೊತೆ ಬೇಳೆ ಬೇಕು. ಬೇಳೆ ಬೆಲೆ ಏನಾಗಿದೆ ಅಂದರೆ ಗಗನಕ್ಕೆ ಏರಿದೆ ಕೆ.ಜಿ.ಗೆ 11ರಿಂದ 12ರೂ ಇದ್ದುದು ತೊಗರಿಬೇಳೆ 22ರಿಂದ 30 ರೂಪಾಯಿ ವರೆಗೆ ಹೊರಟುಹೋಗಿದೆ. ಬೇಳೆ ಒಂದು ಕೇಜಿ ಆದರೆ ಅಕ್ಕಿ ಮೂರು ಕೇಜಿ ಲೆಕ್ಕದಲ್ಲಿ ಕೊಡಬೇಕು. 10 ಕೇಜಿ ಅಕ್ಕಿ ಕಡಿಮೆ ಬೆಲೆಯಲ್ಲಿ ಕೊಡುತ್ತೀರಿ.

ಶ್ರೀ ಎಂ. ನಾರಾಯಣ ಸ್ವಾಮಿ : ಅಕ್ಕಿ ಇನ್ನೂ ಬಂದೇ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಮಕ್ಕಳ ಮೇಲೆ ದಾಳಿ ನಡೆಯುತ್ತಿದೆ ತಾವು ರಕ್ಷಣೆ ಕೊಡದೆ ಇದ್ದರೆ ಹೇಗೆ? ನಿಮ್ಮಿಂದ ರಕ್ಷಣೆ ಸಿಗಬೇಕು ಸಿಗುತ್ತಿಲ್ಲ. ಈ ತರಹ ದಾಳಿ ಮಾಡಿದರೆ ಸರಿಯಲ್ಲ.

ಅಧ್ಯಕ್ಷರು : ಕೊಡುತ್ತೇನೆ. ಈ ಪರಿಸ್ಥಿತಿ ಹತೋಟಿ ಮೀರುವ ಹಾಗೆ ಮಾಡುತ್ತಾ ಇರತಕ್ಕಂಥವರೇ ವಾಟಾಳ್‌ರವರು.

ಶ್ರೀ ವಾಟಾಳ್ ನಾಗರಾಜ್ : ಇಲ್ಲ,ನಾನು ಪಾಪ ಪ್ರಮೀಳಾರವರು ಆಡುತ್ತಿರುವ ಮಾತುಗಳನ್ನು ಬಹಳ ಗಂಭೀರವಾಗಿ ಕೇಳುತ್ತಿದ್ದೇನೆ.

ಅಧ್ಯಕ್ಷರು : ಪ್ರಮೀಳಾರವರು ಏನು ಹೇಳಿದರು ಅಂದರೆ, ಒಂದರಿಂದ ಅಕ್ಕಿ ಕೊಡುತ್ತೇವೆ ಎಂದು ಹೇಳಿದರು, ಈಗ 5 ದಿವಸ ಆಯಿತು ಕಳಪೆ ಅಕ್ಕಿ ಇನ್ನೂ ಕೊಟ್ಟಿಲ್ಲ ಎಂದು ಹೇಳಿದರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈಗ ಕೊಟ್ಟಿರತಕ್ಕಂತಹ ಅಕ್ಕಿ ಮುಂದೆ ಕೊಡುವ ಅಕ್ಕಿ ಯಾವ ರೀತಿ ಇದೆ ಎಂದು ಹೇಳಿದರೆ ನಾವು....

ಅಧ್ಯಕ್ಷರು : ಅದರಿಂದ ಡಿಫೆನ್ಸ್ ವೀಕ್ಸ್ ಆಯಿತು.

ಶ್ರೀ ವಾಟಾಳ್ ನಗರಾಜ್ : ನನ್ನ ವಾದ ಯಾವುದು ಅಂದರೆ ಅವರು ಮುಂದೆ ಬರುವ ಅಕ್ಕಿ ಯಾವುದೆಂದು ನೋಡಿದ್ದಾರೆಯೇ? ಒಂದನೇ ತಾರೀಕು ಹಂಚುವ ಅಕ್ಕಿ ನೀವು ತಂದು ಇಟ್ಟಿರಬಹುದು ನಿಮ್ಮ ಸರ್ಕಾರದವರು ದಾಸ್ತಾನು ಮಾಡಿದ್ದಾರೆ ಅದನ್ನು ನೋಡಿದ್ದಾರೆ ಅಕ್ಕಿ ಸರಿಯಲ್ಲ್ ಎಂದು. ಆ ಅಕ್ಕಿ ತಿಂದರೆ ವಾಂತಿ, ಬೇದಿ, ಕಾಲರಾ ಎಲ್ಲಾ ಬರುತ್ತದೆ. ಎಂದು ಹೇಳಿ ಅವರು ನಮ್ಮ ಮುಖಕ್ಕೆ ತಿವಿಯುತ್ತಿದ್ದಾರೆ.

ಅಧ್ಯಕ್ಷರು : ತಮಗೆ ಗೊತ್ತಿದ್ದ ಹಾಗೆ ನಾವು ಇಲ್ಲಿ ಇಮ್ಯಾಜಿನೇಷಮ್ ಮೇಲೆ ಪ್ರಿಸಂಪ್ಷನ್ ಮೇಲೆ ಮಾತನಾಡುವುದಕ್ಕೆ ಅವಕಾಶವಿಲ್ಲ. ಸರ್ಕಾರದ ನೀತಿ ಪ್ರಕಾರ ಏಪ್ರಿಲ್ ಒಂದರಿಂದ ಪ್ರಾರಂಭ ಮಾಡುತ್ತಾರೆ. ಅದು ಹೋಗಿ ಸಾಂಕೇತಿಕವಾಗಿ ಪ್ರಾರಂಭ ಮಾಡಿ ಬಂದಿದ್ದಾರೆ. ಇನ್ನು ಈಗ ಹೊರಗೆ ಬಂದು ಅಕ್ಕಿ ಸರಬರಾಜು

ಆಗಿಲ್ಲ ಆದ್ದರಿಂದ ಬಾರದೆ ವಸ್ತುವಿನ ಬಗ್ಗೆ ನೀವು ಮಾತನಾಡಿದರೆ ಆಧಾರ ಇಲ್ಲದ ಮಾತಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಾವು ಏಪ್ರಿಲ್ ಒಂದು ಎಂದು ಹೇಳುತ್ತಿದ್ದೀರಿ, ಇದು ನನಗೆ ಅನುಮಾನ ಏಕೆಂದರೆ ಅದು ಮೂರ್ಖರ ದಿನ. ಅವತ್ತು ಏನಾದರೂ ಅವರು ಅಕ್ಕಿ ಕೊಟ್ಟರೆ ನಮ್ಮನ್ನು ಅಪಾಯಕ್ಕೆ ಸಿಗುಸುತ್ತಾರೆ. ಆದ್ದರಿಂದ ಬೇರೆ ದಿನ ಕೊಡಲಿ ಎಂದು ನಾನು ಹೇಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ನೋಡದೆ ಹೇಳುತ್ತೇನೆ ಎಂದು ತಾವು ದಯವಿಟ್ಟು ತಿಳಿದುಕೊಳ್ಳಬೇಡಿ. ಏಕೆಂದರೆ, ನಾವೂ ಸಹ ರೇಷನ್‌ನಲ್ಲಿ ಅಕ್ಕಿ ತೆಗೆದುಕೊಳ್ಳುವುದು. ಏಕೆಂದರೆ ಸಾರ್ವಜನಿಕರು ಏನು ತಿನ್ನುತ್ತಾರೆ ಅದನ್ನೇ ನೋಡೋಣ ಎಂದು. ಬಹಳ ಅಗ್ಗದ ಬೆಲೆಯಲ್ಲಿ ಅಕ್ಕಿ ಕೊಡುತ್ತೇವೆಂದು ಹೇಳುತ್ತಾರಲ್ಲಾ, ನಮಗೆ ಕೊಡುವ ಅಕ್ಕಿಯೇನ್ನೇ ಅವರಿಗೂ ಕೊಡುವುದು, ಅವರಿಗೆ ಕೊಡುವುದು ಕಡಿಮೆ ದರ ಅಷ್ಟೆ, ಅವರಿಗೆ ಬೇರೆ ಸ್ಪೆಷಲ್ ಅಕ್ಕಿ, ನಮಗೆ ಬೇರೆ ಸ್ಪೆಷಲ್ ಅಕ್ಕಿ ಎಂದು ರೇಷನ್ ಕಾರ್ಡಿನಲ್ಲಿ ಕೊಡುವುದಿಲ್ಲ. ಅವರಿಗೆ ಕೊಡುವ ಅಕ್ಕಿಯನ್ನೇ ನಮಗೂ ಕೊಡತಕ್ಕಂಥಾದ್ದು. ಒಂದೇ ವ್ಯತ್ಯಾಸವೆಂದರೆ ಅವರಿಗೆ ಕಡಿಮೆ ದರದಲ್ಲಿ ಕೊಡುತ್ತಾರೆ.ಅಕ್ಕಿ ಮಾತ್ರ ಒಂದೇ.

ಅಧ್ಯಕ್ಷರು : ಮೊನ್ನೆ ಮಂಗಳೂರಿನಲ್ಲಿ ಆಹಾರ ಮಂತ್ರಿಗಳು ಸ್ವಲ್ಪ ಸೂಕ್ಷ್ಮವಾಗಿ ಕ್ಲ್ಯಾರಿಫೈ ಮಾಡಿದ್ದಾರೆ ಅಂತಹ ಅಕ್ಕಿಯನ್ನು ನಾವು ಸರಬರಾಜು ಮಾಡುವ ಹಾಗಿಲ್ಲ. ಹಾಗೆ ಒಂದು ವೇಳೆ ಸಪ್ಲೈ ಮಾಡಿದರೆ ಕನ್‌ಸ್ಯೂಮರ್ಸ್ ಯಾರು ತೆಗೆದುಕೊಳ್ಳಬೇಡಿ. ಎಂದೇ ಸಾಕಷ್ಟು ಪ್ರಚಾರ ಮಾಡಿದ್ದಾರೆ. ಅಂಥದ್ದು ಇದ್ದರೆ ನಮ್ಮ ಗಮನಕ್ಕೆ ತನ್ನಿ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ ಎಂದು ಬಹಳ ಕ್ಲೀಯರ್ ಆಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಭಾಧ್ಯಕ್ಷರೆ ,ನಾವು ಹೇಳತಕ್ಕಂಥಾದ್ದು ಇವರು ಇಲ್ಲಿ ಕ್ಲಿಯರೆನ್ಸ್ ಕೊಡುತ್ತಾರೆ. ಆದರೆ ಫೇರ್ ಪ್ರೈಸ್ ಡಿಪೋನವರು ಅಲ್ಲಿ ಹೋಗಿ ಅಕ್ಕಿ ತೆಗೆದುಕೊಳ್ಳಬೇಕಾದರೆ, ನೀವು ಇದೇ ಅಕ್ಕಿಯನ್ನು ತೆಗೆದುಕೊಂಡು ಹೋದರೆ ಬೇರೆ ಸಕ್ಕರೆ ಎಲ್ಲಾ ಕೊಡುತ್ತೇವೆಂದು ಹೇಳುತ್ತಾರೆ. ಇನ್ನೂ ಇದರ ಬಗ್ಗೆ ತಾವು ಹೇಳಿದಂತೆ ಕೇವಲ ನಾಲ್ಕು ದಿನ ಆಗಿದೆ ನಿಜ. ಬೇಳೆ ಬೆಲೆ ಹೆಚ್ಚಿದೆ ಅನ್ನಕ್ಕೆ ಸಾರು ಬೇಡವೇ? ಸಾರಿಗೆ ವಗ್ಗರಣೆ ಹಾಕಬೇಕೋ ಬೋಡವೋ? ವಗ್ಗರಣೆ ಹಾಕುವಂತಹ ಎಣ್ಣೆ ಬೆಲೆ ಗಗನಕ್ಕೆ ಹೋಗಿದೆ. ಮಕ್ಕಳಿಗೆ ಒಂದು ಚಮಚ ತುಪ್ಪ ಹಾಕೋಣ ಅಂದರೆ ತುಪ್ಪದ ಬೆಲೆ ಗಗನಕ್ಕೆ ಹೋಗಿದೆ. ಮೆಣಸಿನ ಕಾಯಿ ಬೆಲೆ ಗಗನಕ್ಕೆ ಹೋಗಿದೆ. ಅತಿಥಿಗಳು ಬರುತ್ತಾರೆ, ಪಾಯಸ ಮಾಡೋಣ ಅಂದರೆ ಗೋಡಂಬಿ ದ್ರಾಕ್ಷಿ ಅದಕ್ಕೂ ತೆರಿಗೆ, ಬೆಲೆ ಜಾಸ್ತಿ. ಸರ್ಕಾರಕ್ಕೆ ಏನಾಗಿದೆ?

ಶ್ರೀ ವಾಟಾಳ್ ನಾಗರಾಜ್ : ಅವರು ಬೇರೆ ವಿಷಯ ತೆಗೆದುಕೊಳ್ಳಲಿ, ಬರೀ ದ್ರಾಕ್ಷಿ ಗೊಡಂಬಿ ಹೇಳುವುದಕ್ಕೆ ಪ್ರಯತ್ನ ಮಾಡಿದರೆ ನಮ್ಮ ಪರಿಸ್ಥಿತಿ ಏನು? ಅದರಿಂದ ಎಲ್ಲರೂ ಈಗ ಊಟ ಮಾಡಿಕೊಂಡು ಬಂದರೂ ನಮಗೆ ಬಾಯಿ ರುಚಿಯಾಗಿ ಬಾಯಿಲ್ಲಿ ನೀರು ಬರುತ್ತದೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಭಾಧ್ಯಕ್ಷರೇ,ನಾನು ಹೇಳುವುದನ್ನು ದಯವಿಟ್ಟು ತಾವು ಅರ್ಥ ಮಾಡಿಕೊಳ್ಳಬೇಕು. ಅಕ್ಕಿ ಬೆಲೆ ಕಡಿಮೆಯಾಗಿದೆ ಎಂದು ಹೇಳಿ ಬೇರೆ ಎಲ್ಲಾ ಬೆಲೆಗಳನ್ನು ಹೆಚ್ಚು ಮಾಡಿದರೆ ಆ ಅಕ್ಕಿ ಬೆಲೆ ಸನ್ಮಾನ್ಯ ನಾಗೇಗೌಡರು

ಹೇಳಿದ ಹಾಗೆ ಅಕ್ಕಿ ಬೆಲೆ ಕಡಿಮೆ ಮಾಡಿದೆ ಎಂದು ಹೇಳಿ, ಬೆಣ್ಣೆ ಎಣ್ಣೆ ಎಲ್ಲದಕ್ಕೂ ಹೆಚ್ಚು ಮಾಡಿದರು. ರಾಗಿ ಬೆಲೆ ಏನು ಮಾಡಿದಿರಿ ರಾಗಿ ತಿನ್ನುವುದು ಬೇಡವೇ? ಮಂಡ್ಯದಲ್ಲಿ ಎಲ್ಲೆಲ್ಲದ....

ಶ್ರೀ ಆರ್. ಕೃಷ್ಣಪ್ಪ : ಇನ್ನು ಸರ್ಕಾರ ಅದರ ಬಗ್ಗೆ ಯೋಚಿಸಿಲ್ಲ. ಅದರಿಂದ ತಾವು ದಯವಿಟ್ಟು ಸರ್ಕಾರದ ನ್ಯಾಯ ಬೆಲೆ ಅಂಗಡಿಗಳ ಬಗ್ಗೆ ಮಾತನಾಡಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಬೇಳೆ ಕೂಡ ನ್ಯಾಯಬೆಲೆ ಅಂಗಡಿಯಲ್ಲಿ ವಿತರಣೆ ಮಾಡುತ್ತಾರೆ ತಮಗೆ ಗೊತ್ತಿದೆಯೋ ಅಥವಾ ಇಲ್ಲವೋ ಆದ್ದರಿಂದ ಇದನ್ನು ನಾವು ಜನಕ್ಕೆ ಬೆಲೆ ಕಡಿಮೆ ಮಾಡಬೇಕೆಂದರೆ ಅದನ್ನು ಏನಾದರೂ ನಿಜವಾಗಿ ಮಾಡುವುದಾದರೆ ಅಕ್ಕಿ ಜೊತೆಯಲ್ಲಿ ಇವೆಲ್ಲವನ್ನೂ ಕೂಡ ವಿತರಣೆ ಮಾಡಿದರೆ ಜನರಿಗೆ ಅನುಕೂಲವಾಗುತ್ತದೆ. ಅದು ಬಿಟ್ಟು ಅಕ್ಕಿಯನ್ನು ಕಡಿಮೆ ಮಾಡುತ್ತೇವೆಂದರೆ ಹೇಗೆ? ಜೋಳಕ್ಕೆ ಇವತ್ತು ಒದ್ದಾಡುತ್ತಿದ್ದಾರೆ. ಉತ್ತರ ಕರ್ನಾಟಕದ ಜನ ರೆಲ್ಲರಿಗೂ ಕೂಡ ಜೋಳದ ರೊಟ್ಟಿ ಅವರಿಗೆ ಪ್ರತಿ ದಿನದ ಆಹಾರ. ಜೊಳದ ಬೆಲೆ ಏನಾದರೂ ಕಡಿಮೆ ಮಾಡಿ ಕೊಡುತ್ತಿದ್ದೀರಾ ಅಂದರೆ ಇಲ್ಲ. ಹೋಗಲಿ ಪಂಜಾಬಿನಲ್ಲಿ ಇರುವುದನ್ನು ನಾನು ಹೇಳುತ್ತಿದ್ದೇನೆ. ರಾಗಿ ಮುದ್ದೆ ತಿನ್ನತಕ್ಕಂತಹವರಿಗೆ ರಾಗಿ ಬೆಲೆ ಏನಾದರೂ ಕಡಿಮೆ ಬೆಲೆ ಕೊಡವುದಕ್ಕೆ ವ್ಯವಸ್ಥೆ ಮಾಡಿದ್ದೀರಾ? ಅಕ್ಕಿ ಮಾತ್ರ ಮಾಡಿದ್ದೀರಿ. ರಾಗಿ ಇಲ್ಲ, ಜೋಳ ಇಲ್ಲ, ಮಿಕ್ಕಿದ್ದು ಯಾವ ವಸ್ತುಗಳು ಇಲ್ಲ ಎಂದು ಹೇಳಿ. ಅಕ್ಕಿ ಬೆಲೆ ಬಹಳ ಕಡಮೆ ಮಾಡಿದ್ದೇವೆ ಎಂದು ಹೇಳುವುದಕ್ಕೆ ಹೋಗಬೇಡಿ. ತಾವು ಹೇಳಿದಂತಹ ಮೂರು ಹೆಗ್ಗಳಿಕೆಯೂ ಕೂಡ ಸಾರ್ವಜನಿಕರಿಗೆ ಅನ್ಯಾಯ ಆಗತಕ್ಕಂಥ ವಿಷಯ ಅದರಲ್ಲಿ ಏನೂ ಕೂಡ ನ್ಯಾಯವಾದ ಬೆಲೆ ಯಾರಿಗೂ ಸಿಕ್ಕಿಲ್ಲ, ಯಾರಿಗೂ ಕೊಡುವ ಹಕ್ಕಿಲ್ಲ. ಇದರಿಂದ ಹೊಗಳಿಕೆ ಮಾಡಿಕೊಂಡು ಅಂದರೆ ನಮ್ಮ ಸರ್ಕಾರ ಮಾಡಿದೆ ಎಂದು ಹೊಗಳಿಕೆ ಪಡೆದುಕೊಳ್ಳುವುದಕ್ಕೆ ಹೋಗಬೇಡಿ. ಹೊಗಳಿ ಹೊಗಳಿ ಎನ್ನ ಹೊನ್ನ ಸೂಲಕ್ಕೆ ಏರಿಸಬೇಡಿ ಅಂತ ಬಸವಣ್ಣನವರು ಹೇಳಿದ್ದಾರೆ.

ಹಾಗೆ ನೀವು ಮಾತನಾಡಬೇಡಿ. ಆ ರೀತಿ ಕೆಲಸ ಮಡಾಬೇಡಿ. ನಾವೇ ಆರಿಸಿದಂತಹ ನಮ್ಮ ನಾಯಕನ ಕೆಲಸವನ್ನು ಹೊಗಳಿಕೆ ರೀತಿಯಲ್ಲಿ ಮಾಡಬೇಡಿ. ಶಾಶ್ವತವಾಗಿ ಕೆಲಸ ಕೊಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ನಮ್ಮ ಸಭಾ ನಾಯಕರಿದ್ದಾರೆ. ಅವರು 22.3.1975ನೇ ಇಸವಿಯಲ್ಲಿ ಈ ಸದನದಲ್ಲಿ ಭಾಷಣ ಮಾಡುತ್ತಾ ಒಂದು ಮಾತು ಹೇಳಿದರು. ಏನೆಂದರೆ ಆಡಳಿತದಲ್ಲಿ ಹೆಚ್ಚು ದಕ್ಷತೆ ಬರಬೇಕಾದರೆ ಮುಖ್ಯಮಂತ್ರಿಗಳಿಗೆ ಹೆಚ್ಚು ಕೆಲಸ ಇರಬಾರದು ಎಂದು. ಬರೀ ಟಿ.ಎ.ಡಿ.ಎ. ಯನ್ನು ಮಾತ್ರ ಇಟ್ಟುಕೊಂಡು ಪೋಲೀಸ್ ಇಲಾಖೆ, ಇಂಟಲಿಜೆನ್ಸ್ ಇಲಾಖೆ, ಹೈಕೋರ್ಟ್ ಸಿಎಸ್‌ಡಿ ಗಳನ್ನು ಇಟ್ಟುಕೊಂಡು ಉಳಿದ ಎಲ್ಲಾ ಖಾತೆಗಳನ್ನು ತಮಗೆ ವಿಶ್ವಾಸವಿರುವ ತಮ್ಮ ಸಹೋದ್ಯೋಗಿಗಳಿಗೆ ಕೊಟ್ಟು ಅವರು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಾರೆ ಎನ್ನತಕ್ಕದ್ದನ್ನು ಮೇಲ್ವಿಚಾರಣೆ ಮಾಡುವುದು ಬಹಳ ಒಳ್ಳೆಯದು ಎಂದು ಹೇಳಿದ್ದರು. ಯಾರು ಅಧ್ಯಕ್ಷರೇ? ನಮ್ಮ ನಾಯಕರಾದ ಶ್ರೀಮಾನ್ ದೇವೇಗೌಡರು 22 ಮಾರ್ಚ್ 1975ನೆ ಇಸವಿಯಲ್ಲಿ ಇದೇ ಸದನದಲ್ಲಿ ವಿಧೇಯಕವನ್ನು ತರುವ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರಾಗಿ ಮಾತನಾಡಿದರು. ನಾನು ಇವತ್ತಿನ ದಿವಸ ಕೇಳುತ್ತಿದ್ದೇನೆ. ಅವತ್ತು ತಾವು ಹೇಳಿದ ಕೆಲಸವನ್ನು ತಾವು ಏನಾದರೂ ಮಾಡಿದ್ದೀರಾ? ಇವತ್ತು ಪೋರ್ಟ್‌ಫೋಲಿಯೋಗಳನ್ನು ಹಂಚಿದ್ದಾರೆ. ಮುಖ್ಯಮಂತ್ರಿಗಳು ಇರಿಗೇಷನ್ ಬಿಡಿಎ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಮ್‌ಆರ್‌ಡಿಎ, ವಕ್ಫ್, ಕ್ಯಾಬಿನೆಟ್ ಅಫೇರ್ಸ್ ಡಿಪಿಎಆರ್ ಪೋಲೀಸ್ ಇಂಟರಿಜೆನ್ಸ್ ಫ್ರಮ್ ಹೋಂ ಎಲ್ಲಾ ತೆಗೆದುಕೊಂಡಿದ್ದಾರೆ.

ತಾವು ಅವತ್ತು ಹೇಳಿದ್ದು ಒಂದು ಇವತ್ತು ಹೋಮ್ ಇಂಟಲಿಜೆನ್ಸ್‌ನ್ನು ಸಿಂಧ್ಯರವರಿಗೆ ಕೊಟ್ಟಿದ್ದಾರೆ. ಅವತ್ತು ಅದನ್ನು ಇಟ್ಟುಕೊಳ್ಳಬೇಕೆಂದು ಹೇಳಿದರು, ಹೋಗಲಿ ಬಿಡಿ. ಮಿಕ್ಕಿದ್ದು ಏನು ಇವರು ಅವತ್ತು ಏನು ಹೇಳಿದ್ದರು, ಯಾವುದು ಬೇರೆಯವರಿಗೆ ಕೊಡಬೇಕೆಂದು ಹೇಳಿದರು, ಅದನ್ನೆಲ್ಲಾ ತಾವು ಇಟ್ಟುಕೊಂಡು ಅವತ್ತು ಹೇಳಿದ್ದು ಒಂದು ಇವತ್ತು ಆಗಿರುವುದು ಒಂದು. ಆದರಿಂದ ಅವರೇ ಹೇಳಿರುವ ಪ್ರಕಾರ ದಕ್ಷತೆ ಬರಬೇಕಾದರೆ ನಮ್ಮ ಸರ್ಕಾರದಲ್ಲಿ ಅವರು ಕ್ಯಾಬಿನೆಟ್‌ನಲ್ಲಿ ಯಾವ್ಯಾವುದು ಇದೆ ಅದನ್ನು ಇಟ್ಟುಕೊಂಡು ಮಿಕ್ಕಿದ್ದನು ಬೇರೆ ಮಂತ್ರಿಗಳಿಗೆ ಕೊಡುತ್ತಿರೋ ಕೊಡುವ ವ್ಯವಸ್ಥೆಯನ್ನು ಮಾಡುತ್ತೀರೋ ಅಥವಾ ಈ ಹಿಂದೆ ನಾನು ಹೇಳಿದ್ದು ವಿರೋಧ ಪಕ್ಷದ ನಾಯಕನಾಗಿ ಹೇಳಿದೆ, ಇವತ್ತು ನಾನು ಸಭಾ ನಾಯಕ ಆಗಿದ್ದೇನೆ. ನನಗೆ ಇಷ್ಟ ಬಂದ ಹಾಗೆ ಮಾಡಬಹುದು. ಅದರಿಂದ ನಾನು ಯಾವುದು ಬೇಕಾದರೂ ಕ್ಯಾಬಿನೆಟ್‌ನಲ್ಲಿ ಇಟ್ಟುಕೊಳ್ಳಬಹುದು ಎಂದು ಅನ್ನುತ್ತೀರೋ ತಾವೇ ಹೇಳಬೇಕು.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಸಭಾ ನಾಯಕರು ಈ ಸಭೆಯಲ್ಲಿ ಏನು ಮಾತನಾಡಿದ್ದರು ಅದನ್ನು ಹೇಳುತ್ತಿದ್ದೇನೆ. ಅವತ್ತು ನೀವು ಹೇಳಿದ್ದು ಒಂದು ಇವತ್ತು ನೀವು ಮಾಡುತ್ತಿರುವುದು ಒಂದು, ಇದು ಸರಿಯೇ? ಎಂದು ಪ್ರಶ್ನೆ ಮಾಡುತ್ತಿದ್ದೇನೆ. ತಮ್ಮಲ್ಲಿ ಆಭಾಷಣದ ಪ್ರತಿ ಇರಲಿಲ್ಲ ಅಂದರೆ ಈ ಭಾಷಣದ ಪ್ರತಿ ನನ್ನ ಹತ್ತಿರ ಇದೆ ನಿಮಗೆ ಕಳುಹಿಸಿಕೊಡುತ್ತೇನೆ. ತಾವು ಓದಿಕೊಳ್ಳಿ. ಇವತ್ತು ಅವರು ಏನು ಹೇಳಿದ್ದಾರೆ ಅದನ್ನು ಕೇಳುತ್ತಿದ್ದೇನೆ. ಇವತ್ತು ಆ ರೀತಿಯ ದಕ್ಷತೆ ಬರಬೇಕಾದರೆ ನಾನು ಹೇಳುತ್ತಿದ್ದೇನೆ. ಆ ಕೆಲಸವನ್ನು ತಾವೂ ಮಾಡಬೇಕು. ನಮ್ಮ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕನ್ನಡದ ಬಗ್ಗೆ ಒಂದು ಮಾತು ಹೇಳಿದ್ದಾರೆ ಬಹಳ ದುಃಖಕರವಾದ ಸಂಗತಿ. ಏನು ಹೇಳುತ್ತಾರೆಂದರೆ,

"My Government will vigorusly foster the use of kannada in administration at all levels. the existing schemes for the promotion of kannada are being previewed. The institutions working in this field will be strengthened."

ನಾವು ಇಲ್ಲಿ ಏನು ಕೇಳುತ್ತದ್ದೇವೆ. "vigerusly forther use of Kannada in administration "ಅಂತ ಹೇಳಿದ್ದರಲ್ಲ ಏನು ಕ್ರಮ ತೆಗೆದುಕೊಂಡಿದ್ದೀರಿ? ಹೋದವರ್ಷ ಇದೇ ಮಾರ್ಚ್ ತಿಂಗಳಿನಲ್ಲಿ ಸನ್ಮಾನ್ಯ ಮೊಯಿಲಿಯವರು ಒಂದು ಆದೇಶ ತಂದರು. ಸುತ್ತೋಲೆ ಹೊರಡಿಸಿದರು. ಅದು ಏನೆಂದರೆ ಸರ್ಕಾರದಲ್ಲಿ ಕೆಲಸದಲ್ಲಿ ಇರತಕ್ಕಂಥ 'ಸಿ' ಕ್ಲಾಸ್ ಉದ್ಯೋಗಿಗಳಿಗೆ ಕನ್ನಡ ಕಡ್ಡಾಯ ಎಂದು ಹೇಳಿ ಒಂದು ಆದೇಶವನ್ನು ಹೊರಡಿಸಿದರು. ಅದಕ್ಕೆ ಅಡ್ಡ ಬಂತು. ಮೇ ತಿಂಗಳಿನಲ್ಲಿ ಆ ಆದೇಶವನ್ನು ಹಿಂದಕ್ಕೆ ತೆಗೆದುಕೊಂಡರು. ಎಲ್ಲಾ ಕನ್ನಡದ ಅಭಿಮಾನಿಗಳು ವಿರೋಧ ಮಾಡಿದರು. ಮಾರ್ಚ್ ತಿಂಗಳಿನಲ್ಲಿ (ಸಿ) ಗ್ರೂಪ್ ಸರ್ಕಾರಿ ಉದ್ಯೋಗಿಗಳಿಗೆ ಕನ್ನಡ ಕಡ್ಡಾಯ ಎಂದು ಆದೇಶ ತಂದರು. ಮೇ ತಿಂಗಳಿನಲ್ಲಿ ಅದನ್ನು ವಿತ್‌ಡ್ರಾ ಮಾಡಿದರು.

ಶ್ರೀ ವಾಟಾಳ್ ನಾಗರಾಜ್ : ಏಪ್ರಿಲ್ ಒಂದು ಎಂದರೆ ಗೊತ್ತಾಯಿತಲ್ಲ, ಏಪ್ರಿಲ್ ಒಂದನೇ ಕನ್ನಡಿಗರನ್ನು ಮೂರ್ಖರನ್ನಾಗಿ ಮಾಡಿದರು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮೇ ತಿಂಗಳಲ್ಲಿ ನೋಟಿಫಿಕೇಷನನ್ನು ವಾಪಸ್ಸು ತೆಗೆದುಕೊಂಡರು. ಕಾರಣ ಏನು? ಇದು ಏನು ಆಡಳಿತ? ಎಲ್ಲಾ ಕನ್ನಡ ಸಂಘಸಂಸ್ಥೆಗಳು ಹೋದರು. ಮಂತ್ರಿಗಳನ್ನು ಕೇಳಿದರು. ಮುಖ್ಯಮಂತ್ರಿಗಳನ್ನು ಕೇಳಿದರು. ಮುಖ್ಯಮಂತ್ರಿಆಗಿದ್ದಂಥವರು ಏನು ಹೇಳಿದರೆಂದರೆ ಆಯಿತು ಇದನ್ನು ಸರಿಪಡಿಸುತ್ತೇನೆ

ಎಂದರು. ಕಾರ್ಯದರ್ಶಿಯವರಿಗೆ ಕಳುಹಿಸಿದರು. ಚೀಫ್ ಸೆಕ್ರೆಟರಿಯವರ ಹತ್ತಿರ ಹೋದರು. ಅಲ್ಲಿಗೆ ಹೋದಾಗ ಅವರು ನಾನು ಅದಕ್ಕೆ ಆದೇಶ ಹೊರಡಿಸುತ್ತೇನೆ ಎಂದು ಹೇಳಿದರು. ಆದರೆ ಏನಾಯಿತು? ನಂತರ ಹೇಳಿದರು, ಎಲೆಕ್ಷನ್ ನೋಟೀಫಿಕೇಷನ್ ಬಂದುಬಿಡ್ತು. ಆದುದರಿಂದ ಚುನಾವಣೆಯ ಆದಮೇಲೆ ಇದನ್ನು ಜಾರಿಗೆ ತರುವುದಕ್ಕೆ

ಪ್ರಯತ್ನ ಮಾಡುತ್ತೀವಿ ಎಂದು ಹೇಳುವಂತಹ ಮಾತು. ನಾನು ಕೇಳುತ್ತಿದ್ದೇನೆ, ಕರ್ನಾಟಕ ರಾಜ್ಯದಲ್ಲಿ ಇರತಕ್ಕಂಥ ಸರ್ಕಾರಿ ಉದ್ಯೋಗಿಗಳ ಬಗ್ಗೆ ತಂದ ನೋಟೀಫೀಕೇಷನ್‌ನ್ನು ಏನು ವಾಪಸ್ಸು ತೆಗೆದುಕೊಂಡಿದ್ದರು ಅದರ ಬಗ್ಗೆ ಇನ್ನು ಕೂಡ ಏನೂ ಮಾಡಲಿಲ್ಲ. "Vigorously foster the use of Kannada in administration" ಅಂತ ಹೇಳಿದ್ದಾರೆ. ಅದರ ಬಗ್ಗೆ ಆ ನೋಟಿಫಿಕೇಷನ್‌ನ್ನು ಇದುವರೆಗೂ ಕೂಡ ಕಂಡಿಲ್ಲ, ಯಾರೂ ಅದನ್ನು ನೋಡಲಿಲ್ಲ ಹೋಗಲಿ, ಅದನ್ನು ಇಲ್ಲಿ ಆಡಳಿತದಲ್ಲಿ ತರದೇ ಇದ್ದರೆ ಹೋಗಲಿ. ಕನ್ನಡದ ಸಾಹಿತ್ಯ ಮತ್ತು ಸಂಗೀತದ ಬಗ್ಗೆ ಹೇಳುವುದಾದರೆ, ಇವತ್ತು ಕೆಂಗೇರಿಯಲ್ಲಿ ಒಂದು ನೃತ್ಯಗ್ರಾಮ ಇದೆ. ಕರ್ನಾಟಕದಲ್ಲಿ ಇರತಕ್ಕಂಥ ಕನ್ನಡ ಸಾಹಿತಿಗಳು, ಸಂಗೀತಗಾರರಿಗೆ, ನೃತ್ಯಗಾರರಿಗೆ ಇವತ್ತು ದುಡ್ಡು ಕೊಡುತ್ತಾ ಇಲ್ಲ. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ನೃತ್ಯಗ್ರಾಮದ ಹೆಸರಿನಲ್ಲಿ ಕರ್ನಾಟಕದವರಲ್ಲದವರಿಗೆ ಎರಡು ಲಕ್ಷ ರೂಪಾಯಿಯನ್ನು ತಕ್ಷಣ ಸ್ಯಾಂಕ್ಷನ್ ಮಾಡಿದ್ದಾರೆ. ಹೇಗೆ ಆಯಿತು? ಅಧಿಕಾರಿಗಳು ಬರೆದರು. ಹೆಡ್ ಆಫ್ ಡಿಪಾರ್ಟ್‌ಮೆಂಟ್ ಬರೆದರು, ಇದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಬರೆದರು, ಹಾಗೂ ಕೊಡಬಾರದು ಎಂದು ಬರೆದರು. ಏನಾಯಿತು? ಅವರು ಹೋದರು, ಅಲ್ಲಿ 2 ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿಸಿಕೊಂಡು ಬಂದರು.

ಅಲ್ಲಿ ನೃತ್ಯಗ್ರಾಮವಾಯಿತು. ನಾನು ಕೇಳುತ್ತೇನೆ, ನಮ್ಮಲ್ಲಿ ಅಂತಹ ಪ್ರತಿಭಾನ್ವಿತ ನೃತ್ಯಗಾರರು ಇಲ್ಲವೇ? ಯು.ಆರ್. ಕೃಷ್ಣರಾವ್, ರಾಧಾ ಶ್ರೀನಿವಾಸ್ ಅಂತಹವರು ನಮ್ಮಲ್ಲಿ ಎಷ್ಟು ಜನ ಇಲ್ಲ. ನಮ್ಮಲ್ಲಿ ಪದ್ಮಿನಿ ರಾವ್, ಉಷಾದಾತಾರ್ ಅಂತಹವರು ಎಷ್ಟು ಜನ ಇದ್ದಾರೆ. ಯಾರಿಗೂ ಇಲ್ಲ, ನೃತ್ಯ ಕಲೆಗೂ ಇಲ್ಲ, ಕರನಾಟಕದವರಿಗೂ ಇಲ್ಲ. ಆದರೆ ಬೇರೆಯವರಿಗೆ ಕೊಟ್ಟರು. ಮಧ್ಯಪ್ರದೇಶ ಬೇರೆ ಕಡೆಯಿಂದ ಬಂದವರಿಗೆ ನೃತ್ಯ ಗ್ರಾಮದ ಹೆಸರಿನಲ್ಲಿ ಅವರಿಗೆ 2 ಲಕ್ಷ ರೂಪಾಯಿಯನ್ನು ಕೊಟ್ಟರು. ಇವತ್ತು ಬಿಇಎಲ್ ಏನಾಗಿದೆ. ಅಲ್ಲಿ ಕನ್ನಡದವರನ್ನು ಪ್ರಮೋಷನ್ ಮಾಡುತ್ತೇವೆ ಎಂದು ಮಾಡಿದರು. ಆದಕ್ಕೆ ಮಾನ್ಯ ಮುಖ್ಯಮಂತ್ರಿಗದು ಕೂಡ ಪತ್ರ ಬರೆದರು. ಕೇಂದ್ರ ಸರ್ಕಾರದಕ್ಕೂ ಕೂಡ ಪತ್ರ ಬರೆದರು. ಕನ್ನಡದವರನ್ನು ಕಳುಹಿಸಿಕೊಡಿ ಹಾಗೆ ಎಂದು ಹೇಳಿದರು. ಕರ್ನಾಟಕದ 18 ಎಂಪಿಗಳು ಪ್ರಧಾನ ಮಂತ್ರಿಗಳಿಗೆ ಕಾಗದ ಬರೆದರು. ಕರ್ನಾಟಕದವರಿಗೆ ಅಲ್ಲಿ ಅಧಿಕಾರ ಕೊಡಿ ಎಂದು. ಕನ್ನಡಿಗರಿಗೆ ಅಲ್ಲಿ ಸೀನಿಯಾರಿಟಿ ಇದ್ದರೂ ಕೂಡ, ಎಫಿಷಿಯಂಟ್ ಇದ್ದರೂ ಕೂಡ ಅವರಿಗೆ ಆಡಳಿತದಕ್ಷತೆ ಇದ್ದರೂ ಕೂಡ ಕನ್ನಡದವರನ್ನು ಬಿಟ್ಟು ಬೇರೆ ಒಬ್ಬರನ್ನು ತೆಲುಗು ದೇಶದವರನ್ನು, ಇವತ್ತು ಅಲ್ಲಿ ಮುಖ್ಯ ಅಧಿಕಾರಿಯನ್ನಾಗಿ ಮಾಡಿದರು. ನಾನು ಹೇಳುತ್ತೇನೆ....

ಅಧ್ಯಕ್ಷರು : ಬಿಇಎಲ್‌ನಲ್ಲಿ ಅಗೋ ಪೋಸ್ಟಿಂಗ್ಸ್‌ಗೆ ಸ್ಟೇಟ್ ಗವರ್ನ್‌ಮೆಂಟ್‌ನವರು ಏನು ಮಾಡುತ್ತಾರೆ?

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಹೇಳುತ್ತೇನೆ, ಅದಕ್ಕೆ ಕಾರಣ ಇದೆ. ನಮ್ಮ ಮುಖ್ಯಮಂತ್ರಿಗಳು, ನಮ್ಮ ಎಂಪಿಗಳು ಬರದಂತಹ ಕಾಗದಕ್ಕೆ ಇವತ್ತು ಕೇಂದ್ರ ಸರ್ಕಾರದಲ್ಲಿ ಬೆಲೆ ಇಲ್ಲ. ನಮ್ಮ ಮುಖ್ಯಮಂತ್ರಿಗಳು ಬರೆದಂತಹ ಪತ್ರಕ್ಕೆ ಪ್ರಧಾನ

ಮಂತ್ರಿಗಳು ಬೆಲೆ ಕೊಡುತ್ತಾ ಇಲ್ಲ. ಕರ್ನಾಟಕದಲ್ಲಿ ಇರತಕ್ಕಂಥ ಎಲ್ಲಾ ಪಬ್ಲಿಕ್ ಅಂಡರ್ ಟೇಕಿಂಗ್ಸ್, ಸೆಂಟ್ರಲ್ ಗವರ್ನ್‌ಮೆಂಟ್ ಅಂಡರ್ ಟೇಕಿಂಗ್ಸ್ ಇವತ್ತು ಏನಾಗಿದೆಯೆಂದರೆ ಸುಮಾರು 60 ಸಾವಿರ ಕನ್ನಡಿಗರ ಸ್ಥಾನ ಖಾಲಿ ಉಳಿಯುತ್ತವೆ. ಸನ್ಮಾನ್ಯ ದೇಶಪಾಂಡೆಯವರು ಕೇಳಬೇಕು. ಕರ್ನಾಟಕದಲ್ಲಿ ಇನ್ನು ಒಂದೆರಡು ವರ್ಷಗಳಲ್ಲಿ 60 ಸಾವಿರ ಕನ್ನಡದ ಉದ್ಯಮಗಳು ಖಾಲಿ ಆಗುತ್ತವೆ. ನಾನು ನಿಮ್ಮನ್ನು ಕೇಳುತ್ತಿದ್ದೇನೆ, ತಾವು ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ? ಕರ್ನಾಟಕದಲ್ಲಿ ಇರತಕ್ಕಂಥ ಜನಗಳನ್ನು, ಕರ್ನಾಟಕದ ಪ್ರಜೆಗಳನ್ನು ಕನ್ನಡದ ಜನಗಳನ್ನು ಅಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ? ಸರೋಜಿನಿ ಮಹಿಷಿಯವರ ಒಂದು ರಿಪೋರ್ಟ್ ಬಂತು. ಆ ಪ್ರಕಾರವಾಗಿ ತಾವು ಏನಾದರೂ ಕ್ರಮ ತೆಗೆದುಕೊಂಡು ಕನ್ನಡಿಗರಿಗೆ ಆದ್ಯತೆಯ ಮೇಲೆ ಕೆಲಸ ದೊರೆಯುವಂತೆ ಮಾಡಿಕೊಡುತ್ತೀರಾ? ಇದರ ಬಗ್ಗೆ ಏನಾದರೂ ಯೋಜನೆಯನ್ನು ಹಾಕಿಕೊಂಡಿದ್ದೀರಾ ಎಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಒಂದು ಕಡೆ ಆಂಧ್ರದವರು ಪ್ರಭಾವಶಾಲಿಗಳಾಗಿ ಕರ್ನಾಟಕದಲ್ಲಿ ತಮ್ಮವರನ್ನೇ ಹಾಕಿಸಿಕೊಂಡರು. ಇನ್ನು ಮಂಗಳೂರಿನ ಕೊಂಕಣ ರೈಲ್ವೆ ಏನಾಗುತ್ತದೆ. ಮಂಗಳೂರು ಕುಂದಾಪುರ ರೈಲ್ವೆಯಲ್ಲಿ....

ಶ್ರೀ ಎಂ. ನಾರಾಯಣ ಸ್ವಾಮಿ : ಮಾನ್ಯ ಅಧ್ಯಕ್ಷರೇ, ಚರ್ಚೆ ಬೇರೆ ಕಡೆ ಹೋಗುತ್ತಿದೆ, ಇದು ಕೇಂದ್ರ ಸರ್ಕಾರದ ಕಡೆ ಹೋಗುತ್ತಿದೆ, ರಾಜ್ಯ ಸರ್ಕಾರದ ಕಡೆ ತಿರುಗಿಸಬೇಕು.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕರ್ನಾಟಕದಲ್ಲಿ ಕನ್ನಡ ಏನಾಗುತ್ತಿದೆ ಎಂದು ಹೇಳಬೇಕಾಗುತ್ತದೆ. ಕುಂದಾಪುರದಲ್ಲಿ ಉಡುಪಿಯಲ್ಲಿ ರೈಲು ಮಾರ್ಗವನ್ನು ಹಾಕಿದ್ದಾರೆ. ಸನ್ಮಾನ್ಯ ಜಾಫರ್ ಶರೀಫ್‌ರವರು ಕರ್ನಾಟಕಕ್ಕೆ ರೈಲು ಕೊಟ್ಟಿದ್ದಾರೆ. ಆದರೆ ನಮ್ಮ ಕರ್ನಾಟಕದ ಜನರ ಭೂಮಿಗಳನ್ನು ಅಕ್ವೈರ್ ಮಾಡಿದರು. ನಮ್ಮ ಜನಗಳನ್ನು ಮೂಲೆಗೆ ಒತ್ತಿದರು. 4 ಸಾವಿರ ರೂಪಾಯಿ ಪರಿಹಾರ ಕೊಡುವ ಕಡೆ ಕರ್ನಾಟಕದ ಜನ 200, 300 ರೂಪಾಯಿಗೆ ಒಪ್ಪಿ ನಮಗೆ ರೈಲ್ವವೆ ಬರಲಿ ಎಂದು ಸಂತೋಷದಿಂದ ಜಮೀನು ಕೊಟ್ಟರು. ಆದರೆ ಆ ರೈಲ್ವೆ ಸ್ಟೇಷನ್‌ನಲ್ಲಿ ಕನ್ನಡಿಗರಿಗೆ ಜಾಗ ಇಲ್ಲ. ಅಲ್ಲಿ ಐದು ಅಂಗಡಿಗಳು ಇದ್ದರೆ ಒಬ್ಬರೂ ಕನ್ನಡಿಗರು ಇಲ್ಲ. ಅಧಿಕಾರಿಗಳನ್ನು ಅಲ್ಲಿ ಕನ್ನಡಿಗರನ್ನು ಹಾಕುತ್ತಾ ಇಲ್ಲ. ಅಲ್ಲಿ 4 ಸಾವಿರ ಎಂಪ್ಲಾಸ್ ಇದ್ದರು. 6 ಸಾವಿರ ಸಂಬಳ ತೆಗೆದುಕೊಳ್ಳುತ್ತಿದ್ದರು. ಆ ಕನ್ನಡಿಗರನ್ನೆಲ್ಲಾ ಮನಗೆ ಕಳುಹಿಸಿದ್ದಾರೆ. ಅಲ್ಲಿ ಬೇರೆಯವರನ್ನು ತಂದರು. ಸಂಬಳ 1200 ರೂ. ಮಾಡಿದರು. ಈಗ 900 ರೂ. ಮಾಡಿದ್ದಾರೆ.

ಅಧ್ಯಕ್ಷರು : ಅಲ್ಲಿಗೆ ಏನು ಮಾಡುತ್ತಾರೆಂದರೆ ಫ್ಲಾಟ್‌ಫಾರಂ ಮತ್ತು ರೆಸ್ಟೋರೆಂಟ್‌ಗೆ ಟೆಂಡರ್ ಕರೆಯುತ್ತಾರೆ. ಟೆಂಡರ್ ಕರೆದಾಗ ಯಾರು ಹೈಯೆಸ್ಟ್ ಬೆಡ್ ಮಾಡುತ್ತಾರೆ ಅವರಿಗೆ ಹೋಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಟೆಂಡರ್ ಫಾರಂ ಕೊಡುವುದರಲ್ಲಿ ಅನ್ಯಾಯ ನಡೆಯುತ್ತಿದೆ. ನೀವು ಒಂದು ಮನವಿಯನ್ನು ಸ್ವೀಕಾರ ಮಾಡಬೇಕು. ಕುಂದಾಪುರದಲ್ಲಿ ಆಗಲಿ, ಉಡುಪಿಯಲ್ಲಾಗಲಿ, ಮಂಗಳೂರಿನಲ್ಲಿ ಆಗಲಿ, ಇದು ಸ್ಪಷ್ಟ, ಅಲ್ಲಿ ಟೆಂಡರ್‌ಫಾರಂ ಕೂಡುತ್ತಾ ಇಲ್ಲ. ಅಲ್ಲಿ ಮಲೆಯಾಳಿಗಳು ಬುದ್ಧಿವಂತರಾಗಿ ಫಾರಂ ತೆಗೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ಟೆಂಡರ್ ಫಾರಂ ಅಲ್ಲಿ ಸಿಕ್ಕುತ್ತಾ ಇಲ್ಲ ಎಂದು ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಕೊಡುತ್ತಾ ಇಲ್ಲ. ಕೊಡದೇ ಗುಟ್ಟಾಗಿ ಅನ್ಯಾಯ ಮಾಡಿ ಫಾರಂ ತೆಗೆದುಕೊಂಡು ಹೋಗುತ್ತಾರೆ. ಈ ರೀತಿಯಾಗಿ ಅಲ್ಲಿ ಮೋಸ ನಡೆಯುತ್ತಿದೆ. ಮತ್ತು ಒಂದು ಅಂಗಡಿಗಳು ಸಹ ಕನ್ನಡಿಗರದ್ದು ಇಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಟೆಂಡರ್ ಫಾರಂ ಹಾಗಿದ್ದಲ್ಲಿ, ಮಂಗಳೂರಿನಿಂದ ಅಲ್ಲಿ ಹೋಗುವವರೆಗೆ ಮಲೆಯಾಳಿ ಹಾಡುಗಳನ್ನು ಕೇಳಬೇಕು. ನಮ್ಮ ಕರ್ನಾಟಕದಲ್ಲಿ ಕನ್ನಡ ಹಾಡು ಕೇಳತಕ್ಕಂಥ ಸುಯೋಗ ಬೇಡವೇ? ಅದು ಕೂಡ ಇಲ್ಲ. ಇದು ಉತ್ತರದ ಕಡೆ. ಇನ್ನು ಬೆಳಗಾಂನಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಅಲ್ಲಿ ಏನಾಗಬಹುದು ಎಂದು ಹೇಳಿದ್ದಾರೆ. ತಮಿಳುನಾಡಿನಲ್ಲಿ ಏನಾಗುತ್ತಿದೆ, ಕನ್ನಡ ಜನರು ಏನಾಗುತ್ತಿದ್ದಾರೆ ಎಂದು ತಾವು ನೋಡುತ್ತಿದ್ದೀರಿ. ನಮ್ಮ ಮುಖ್ಯಮಂತ್ರಿಗಳು ಕರ್ನಾಟಕದಿಂದ ಎಂದರೆ ಸರ್ಕಾರದ ವತಿಯಿಂದ ಯಾವುದಾದರೂ ಪತ್ರವನ್ನು ಪ್ರಧಾನ ಮಂತ್ರಿಗಳಿಗೆ ಬರೆದರೆ ಅದಕ್ಕೆ ಆದ್ಯತೆ ಕೊಡಬೇಕಾದ್ದು ಅವರ ಕರ್ತವ್ಯ. ಇದರ ಬಗ್ಗೆ ಕರ್ನಾಕದಲ್ಲಿರತಕ್ಕಂಥ ಎಲ್ಲಾ ಶಾಸಕರ ಒತ್ತಾಯ. ಇದನ್ನು ನೆಗ್ಲೆಟ್ ಮಾಡುವುದಕ್ಕೆ ಆಗುವುದಿಲ್ಲ. ಅದು ನಮ್ಮನ್ನು ಅವಮಾನ ಮಾಡಿದ ಹಾಗೆ ಆಗುತ್ತದೆ. ಆ ಕೆಲಸವನ್ನು ಮಾಡಬೇಕಾಗುತ್ತದೆ. ಅದಕ್ಕೆ ಆ ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಂದು ಕಡೆ ಪ್ರಧಾನ ಮಂತ್ರಿಯವರು ಹೇಳಿದರು. ನಮ್ಮ ಮುಖ್ಯಮಂತ್ರಿಯವರ ಕೈಕೆಳಗೆ ಇರತಕ್ಕಂಥ ಅಧಿಕಾರಿಗಳು ಇವತ್ತು ಏನು ಮಾಡುತ್ತಿದ್ದಾರೆ. ಹೋಗಲಿ ಅವರಾದರೂ ಅವರ ಮಾತನ್ನು ಕೇಳುತ್ತಿದ್ದಾರೆಯೇ? ಅದನ್ನು ತಾವು ಇವತ್ತು ನೋಡಬೇಕಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದೆ. ಏನೆಂದರೆ ನನ್ನ ಕ್ಷೇತ್ರದಲ್ಲಿ ಒಂದು ಸಾರಾಯಿ ಅಂಗಡಿ ಇದೆ, ಅದರ ಎದುರುಗಡೆ ಆಸ್ಪತ್ರೆ ಇದೆ. ಆದ್ದರಿಂದ ಆ ಅಂಗಡಿಯನ್ನು ಎತ್ತಿಸಬೇಕು ಎಂದು. ತಕ್ಷಣ ಮುಖ್ಯಮಂತ್ರಿಗಳು ಆದೇಶ ಕೊಟ್ಟರು. ಅದನ್ನು ಶಾಶ್ವತವಾಗಿ ಎತ್ತಬೇಕೆಂದು ಡೆಪ್ಯೂಟಿ ಕಮಿಷನರ್‌ಗೆ ಪತ್ರ ಬರೆದರು. ಆದರೆ ಆ ಡಿ.ಸಿ. ಏನು ಮಾಡಿದ್ದಾರೆಂದರೆ ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂಥ ಆದೇಶಕ್ಕೆ ಬೆಲೆ ಕೊಡದೆ, ಶಾಸಕರಾಗಿ ಹೇಳಿದಂಥ ಮಾತುಗಳಿಗೆ ಬೆಲೆ • ಕೊಡದೆ ಏಕೆ ಅದನ್ನು ಸ್ಥಳಾಂತರಿಸಬೇಕು ಎಂದು ಶೋ ಕಾಸ್ ನೋಟೀಸ್ ಕೊಟ್ಟಿದ್ದಾರೆ. ಇನ್ನೊಂದು ಜಾಗಕ್ಕೆ ಏಕೆ ಹೋಗಬೇಕು. ಇದು ನಮ್ಮ ಮುಖ್ಯಮಂತ್ರಿಗಳು ಕೊಟ್ಟಂತಹ ಪತ್ರಕ್ಕೆ ಅವರ ಸಬ್ ಆರ್ಡಿನೇಟ್ಸ್ ಹೊರಡಿಸಿದರು. ತಾವು ಬೆಳಿಗ್ಗೆ ಹೇಳಿದ್ದೀರಿ. ಅಖಿಲ ಭಾರತ ಮಹಿಳಾ ವಕೀಲಾ ವೇದಿಕೆಗೆ 15 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಆದೇಶ ಹೊರಡಿಸಿದರು. ಇದನ್ನು ಹೇಳುವುದಕ್ಕೆ ನನಗೆ ಬಹಳ ದುಃಖವಾಗುತ್ತದೆ. 31ನೇ ತಾರೀಖಿನ ದಿವಸ ಕಾನೂನಿನ ಕಾರ್ಯದರ್ಶಿಗಳು ಕೂಡ ಕೊಡಬೇಕು ಎಂದು ಬರೆದರು. ಆದರೆ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ನೋಟ್ ಹಾಕುತ್ತಾರೆ. ಅವರಿಗೆ ಕೊಡಬೇಕಾದಂತಹ ಅಗತ್ಯ ಇಲ್ಲ ಎಂದು.

5.10 ಪಿ.ಎಂ

ಇವರಿಗೆ ಏಕೆ ಕೊಡಬೇಕು? ಇವರಿಗೆ ಏನು ಯೋಗ್ಯತೆ ಇದೆ? ಎಂದು ಹೇಳುತ್ತಾರೆ. ಕಾನೂನು ಮಂತ್ರಿಗಳು ಕೊಟ್ಟ ಆದೇಶವನ್ನು ಧಿಕ್ಕರಿಸಿ, ನ್ಯಾಯಾಂಗದ ಅಧಿಕಾರ ವರ್ಗದವರನ್ನು ಧಿಕ್ಕರಿಸಿ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಅದನ್ನು 5 ಸಾವಿರ ರೂ.ಗಳಿಗೆ ಕಡಿಮೆ ಮಾಡಿದರು. ಅಷ್ಟೇ ಅಲ್ಲ, ಇನ್ನು ಮೂರು ವರ್ಷಗಳು ಗ್ರಾಂಟ್ ಕೇಳಬಾರದೆಂಬ ಷರತ್ತಿಗೆ ಒಳಪಡಿಸಿ ಇದನ್ನು ಬಿಡುಗಡೆ ಮಾಡಿದರು. ಇದರ ಬಗ್ಗೆ ನಾನು ಕೇಳುತ್ತೇನೆ. ಕರ್ನಾಟಕದಲ್ಲಿ ಮಹಿಳೆಯರಿಗೆ, ಮಹಿಳಾ ವಕೀಲರುಗಳಿಗೆ ಕೊಡತಕ್ಕಂಥ ಪ್ರಾಶಸ್ತ್ಯ ಇದೇನಾ? ಕಾನೂನು ಮಂತ್ರಿಗಳು ಹೇಳಿದಂತಹ ಮಾತಿಗೆ ಅಧಿಕಾರವಿಲ್ಲವೇ? ಈ ರೀತಿ ತೆಗೆಯುವಂತಹ ಕೆಲಸವನ್ನು ಅಧಿಕಾರಿಗಳು

ಮಾಡಬಹುದಾ? ನಿಮ್ಮ ಅಧಿಕಾರಿಗಳು ನೀವು ಹೇಳಿದ ಮಾತಿಗೆ ಬೆಲೆ ಕೊಡುತ್ತಿಲ್ಲ. ನೀವು ಹೇಳಳಿದೆ ಮಾತಿಗೆ ಕೇಂದ್ರಸರ್ಕಾರದಲ್ಲಿ ಬೆಲೆ ಇಲ್ಲ. ಈ ರೀತಿಯಾದರೆ ಇನ್ನು ಪ್ರಜೆಗಳ ಸ್ಥಿತಿ ಏನಾಗಬೇಕು? ಎಂಬ ಚಿತ್ರವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ತಾವು ಇದರ ಬಗ್ಗೆ ಯೋಚನೆ ಮಾಡಬೇಕು. ಇನ್ನು ಮದ್ಯಪಾನ ಸಂಯಮ ಮಂಡಳಿ, ಹಾಗೆಂದರೆ ಮದ್ಯಪಾನವನ್ನು ಜಾರಿಗೆ ತರುವುದು ಎಲ್ಲಾ ಕುಡಿಯಿರಿ ಎಂದು ಹೇಳುವುದು. ಅದನ್ನು ಸಂಯಮ ಮಾಡುವುದಕ್ಕೆ ಈ ಮಂಡಳಿಯನ್ನು ತಂದಿರುವುದು. ಈ ಮದ್ಯಪಾನ ಸಂಯಮ ಮಂಡಳಿಗೆ ಒಬ್ಬ ಅಧ್ಯಕ್ಷರನ್ನು ನೇಮಕ ಮಾಡುವುದು. ಸನ್ಮಾನ್ಯ ವೀರಪ್ಪ ಮೊಯಿಲಿಯವರು ಇದ್ದಾಗ ಒಂದು ಆದೇಶವನ್ನು ಹೊರಡಿಸಿದರು. ಅದರಲ್ಲಿ ಅದನ್ನು ಮೇಲ್ದರ್ಜೆಗೆ ಏರಿಸಿದ್ದೇನೆಂದು ಹೇಳಿ ಕ್ಯಾಬಿನೆಟ್ ಮಿನಿಸ್ಟರ್ ದರ್ಜೆಗೇರಿಸಿದರು. ಆಗ ಅಧ್ಯಕ್ಷರ ದರ್ಜೆ ಮಿನಿಸ್ಟರ್ ಗ್ರೇಡ್ ಆಯಿತು.

ತಾವು ಮಾಡಿಕೊಳ್ಳಿ, ನಾವೇನು ಬೇಡವೆನ್ನುವುದಿಲ್ಲ. ಈ ಮದ್ಯಪಾನ ಸಂಯಮ ಮಂಡಳಿಗೆ ಕೊಟ್ಟಿರುವಂತಹ ಗ್ರಾಂಟ್ 10 ಲಕ್ಷ ರೂ.ಗಳು ಇದರಲ್ಲಿ ಎಂಟೂವರೆ ಲಕ್ಷ ಮತ್ತು ಒಂದೂವರೆ ಲಕ್ಷ ರೂ.ಗಳು. ಎಲ್ಲಾ ಸಿಬ್ಬಂದಿವರ್ಗದವರಿಗೆ ಹಿಂದಿನ ಸರ್ಕಾರದವರು ಇಟ್ಟಿದ್ದಾರೆ. ಈಗ ಸರ್ಕಾರ ಕೂಡ ಅದನ್ನು ಚಾಚು ತಪ್ಪದೆ 10 ಲಕ್ಷ ರೂ.ಗಳನ್ನು ಮದ್ಯಪಾನ ಸಂಯಮ ಮಂಡಳಿಗೆ ಕೊಡುತ್ತಿದೆ. ಈ ಮಂಡಳಿ ಏಕೆ ಬೇಕು? ಕ್ಯಾಬಿನೆಟ್ ದರ್ಜೆ ಏಕೆ ಬೇಕು? ಅದರಿಂದ ಉಪಯೋಗವಿಲ್ಲ. ಅದನ್ನು ರದ್ದು ಮಾಡಿ. ಇಂತಹ Postಗಳು ಹಲವಾರು ಇವೆ. ಇವತ್ತು ಇನ್ನೂರು ಕೋಟಿ ರೂ.ಗಳಷ್ಟು ಟ್ಯಾಕ್ಸ್‌ನ್ನು ಹಾಕಿದ್ದೀರಿ. ಇಂಥದ್ದನ್ನು ರದ್ದು ಮಾಡಿದರೆ ಟ್ಯಾಕ್ಸ್ ಹಾಕುವುದೇ ಬೇಕಾಗುವುದಿಲ್ಲ. ಜನರಿಗೂ ಒಳ್ಳೆಯದಾಗುತ್ತದೆ. ಆ ಕಾರಣಕ್ಕಾಗಿ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಕಾವೇರಿಯ ನೀರು ಮಹಿಳೆಯರಿಗೆ ಅತ್ಯಂತ ಅವಶ್ಯಕವಾಗಿ ಬೇಕಾಗಿರುವಂಥಾದ್ದು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ರಾತ್ರಿ ವೇಳೆಯಲ್ಲಿ ಹೋಗಿ ನೀರು ತರುವವರು ನಾವು, ಅಡಿಗೆ ಮಾಡುವವರು ನಾವು, ನೀರು ಇಲ್ಲದೆ ಅಡಿಗೆ ಮಾಡಲು ಆಗುವುದಿಲ್ಲ. ಅದಕ್ಕೋಸ್ಕರ ನೀರಿನ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ನೀವು ಏನೇ ಆಗಿದ್ದರೂ ಪತಿಯೆ ಪರಮ ದೈವ.

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ವಾಟಾಳ್ ನಾಗರಾಜ್‌ರವರೆ, ಪತಿಯೆ ಪರಮ ದೈವಕ್ಕೆ ಮುಂಚೆ ಮಾತೃ ದೇವೋಭವ ಎಂದು ಹೇಳಿದ್ದಾರೆ.

ಅಧ್ಯಕ್ಷರು : ನಾರಾಯಣ ಸ್ವಾಮಿಯವರೆ, ನೀವು ಆಗಾಗ ಎದ್ದು ನಿಲ್ಲುತ್ತಿದ್ದರೆ ಜಾಲಪ್ಪನವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಂ. ನಾರಾಯಣ ಸ್ವಾಮಿ : ಹೆಣ್ಣುಮಕ್ಕಳನ್ನು ನಾವು ಗೌರವದಿಂದ ನೋಡುತ್ತೇವೆ. ನಾವೆಲ್ಲ ನಿಮ್ಮ ಮಕ್ಕಳಲ್ಲವೆ?

ಶ್ರೀಮತಿ ಪ್ರಮೀಳ ನೇಸರ್ಗಿ : ಮಕ್ಕಳ ತರಹ ಇರ್ರೀ, ಬೇರೆ ತರಹ ಆಗಬೇಡಿ ಎಂದು ನಾವು ಹೇಳೋದು. ಮಾನ್ಯ ಅಧ್ಯಕ್ಷರೆ, ನೀವು ಕಾಲು ಗಂಟೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದೀರಿ ಆದುದರಿಂದ, ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ. ಮಾನ್ಯ ನಾಣಯ್ಯನವರು ಒಂದು ಮಾತು ಹೇಳಿದ್ದು ಜ್ಞಾಪಕಕ್ಕೆ ಬಂತು. ಏನೆಂದರೆ, ಇಬ್ಬರು ಹೆಣ್ಣು ಮಕ್ಕಳು ಇರುವ ಕಡೆ ಬೇರೆ ಬೇರೆ ಅಭಿಪ್ರಾಯಗಳು ಇರುತ್ತವೆ ಎಂದು, ಇದು ಸರಿಯಾಗಿರುವುದಿಲ್ಲ. ಇದನ್ನು ಪೇಪರ್‌ನಲ್ಲಿ ಓದಿದೆ. ಇವತ್ತು ವಿಧಾನಸಭೆಯಲ್ಲಿ ನಾವು ಹೆಣ್ಣು ಮಕ್ಕಳು 7 ಜನರು ಇದ್ದೇವೆ. ನಮ್ಮಲ್ಲಿ ಬೇಧ ಇಲ್ಲ, ಭಿನ್ನಾಭಿಪ್ರಾಯವಿಲ್ಲ, ನಾವೆಲ್ಲ ಒಗ್ಗಟ್ಟಾಗಿ ಕೆಲಸ

ಮಾಡುತ್ತಿದ್ದೇವೆ. ನಾವೆಲ್ಲಾ ಹೆಣ್ಣು ಮಕ್ಕಳು 7 ಜನರು ಇದ್ದೇವೆ. ನಮ್ಮಲ್ಲಿ ಭೇದವಿಲ್ಲ, ಭಿನ್ನಾಭಿಪ್ರಾಯವಿಲ್ಲ, ನಾವೆಲ್ಲ ಒಗ್ಗಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ನಾವೆಲ್ಲಾ ಹೆಣ್ಣು ಮಕ್ಕಳು ಒಗ್ಗಟ್ಟಿಗೆ ಅವರ ಏಳಿಗೆಗೆ, ಕೆಲಸ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ನಾವು 224 ಜನ ಶಾಸಕರು ಹೊಡೆದಾಟಬೇಕೆಂದರೆ ಹೆಣ್ಣು ಮಕ್ಕಳೊಬ್ಬಳು ಸಾಕು.

ಅಧ್ಯಕ್ಷರು : ಅವರು ಏನು ಹೇಳುತ್ತಿದ್ದಾರೆಂದು ನೀವು ಕೇಳಿಸಿಕೊಂಡಿರಾ? 224 ಜನರು ಹೊಡೆದಾಡುವುದಕ್ಕೆ ಒಬ್ಬ ಹೆಣ್ಣುಮಗಳು ಸಾಕು ಎಂದು ಹೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದು ಇತಿಹಾಸ. ಚರಿತ್ರೆಯಲ್ಲಿ ಹೇಳಿದ್ದು ಬೇಡ. ಅಂತಹ ಕ್ಲಿಯೋಪಾತ್ರಾ ಬಂದರೆ ಆಗುತ್ತದೆ. ಈ ಸದನದಲ್ಲಿ ಅದು ಆಗುವುದಕ್ಕೆ ಸಾಧ್ಯವಿಲ್ಲ. ಅಂತಹ ಯಾವ ಹೆಣ್ಣುಮಗಳು ಚುನಾಯಿತಳಾಗಿ ಇದುವರೆಗೆ ಇಲ್ಲಿಗೆ ಬಂದಿಲ್ಲವೆಂದು ನಾನು ಆಶ್ವಾಸನೆ ಕೊಡುತ್ತಿದ್ದೇನೆ. ಅದರ ಬಗ್ಗೆ ಯೋಚನೆ ಬೇಡ. ಒಂದು ವೇಳೆ ಆ ರೀತಿಯ ಪರಿಸ್ಥಿತಿ ಬಂದರೆ ನಿಮಗೆಲ್ಲಾ ಸಮಾಧಾನ ಮಾಡಿ ಸರಿಯಾದ ದಾರಿಗೆ ನಿಮ್ಮನ್ನು ತರುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ, ಯೋಚಿಸಬೇಡಿ.

ಶ್ರೀ ವಾಟಾಳ್ ನಾಗರಾಜ್ : ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ ಇದನ್ನು ನೀವು ಒಪ್ಪುತ್ತೀರಾ?

ಶ್ರೀಮತಿ ಪ್ರಮೀಳಾ ನೇಸರ್ಗಿ : ಗಂಡು ಮಾಯೆ ಎಂಬರು, ಗಂಡು ಮಾಯೆಯಲ್ಲ. ಆತ್ಮಕ್ಕೆ ಹೆಣ್ಣೂ ಇಲ್ಲ, ಗಂಡೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಗಂಡು ಮಾಯೆ ಎಂದು ಎಲ್ಲಿಯೂ ಹೇಳಿಲ್ಲ. ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ, ಗಂಡು ಮಾಯೆ ಎಂಬರು, ಗಂಡು ಮಾಯೆಯಲ್ಲ, ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ, ಮನವ ಮುಂದಣ ಆಸೆಯೇ ಮಾಯೆ ಕಾಣಾ, ಅಂತ ಹೇಳಿದ್ದಿರೆ

ಶ್ರೀಮತಿ ಪ್ರಮೀಳಾ ನೇಸರ್ಗಿ : ನಮ್ಮ ಮೈಸೂರು ಅರಮನೆಯಲ್ಲಿ ಇರುವ ಸಂಚಿ ಹೊನ್ನಮ್ಮ ಹದಿಬದೆಯ ಧರ್ಮದಲ್ಲಿ ಈ ರೀತಿ ತಿಳಿಸಿದ್ದಾರೆ. ಪೆಣ್ಣು ಪೆಣ್ಣೆಂದೇಕೆ ಬೀಳುಗಳೆವಿರಿ ಕಣ್ಣು ಕಾಣದ ಗಾವಿಲರು. ಅಂತ ಇದರ ಬಗ್ಗೆ ತಾವು ಯೋಚನೆ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಇಬ್ಬರು ಹೆಂಡಿರ ಕಾಟ, ಇರುಳು ತಿಗಣೆಯ ಕಾಟ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅದಕ್ಕೋಸ್ಕರ ಇಬ್ಬರು ಹೆಂಡಿರುಬೇಡ, ಒಬ್ಬಳು ಹೆಣ್ಣೇ ಸಾಕು. ಕಾಮನ್ ಸಿವಿಲ್ ಕೋಡ್ ತನ್ನಿ ಎಂದು. ನಮ್ಮ ಪಕ್ಷ ಪ್ರತಿಪಾದನೆ ಮಾಡುತ್ತಿದೆ.

ಅಧ್ಯಕ್ಷರು : ಪ್ರಮೀಳಾ ನೇಸರ್ಗಿಯರ, ಅನುಭವ ದೊಡ್ಡದು, ಅನುಭವಸ್ಥರಾಗಿರುವವರು ಹೇಳುತ್ತಿದ್ದಾರೆ. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅನುಭವಸ್ಥರು ಬಹಳ ಜನ ಇದ್ದಾರೆ. ಅವರು ಗಂಭೀರವಾಗಿ ಕುಳಿತಿದ್ದಾರೆ.

ಅಧ್ಯಕ್ಷರು : ನೀವು ಏತಕ್ಕೆ ವೈಜನಾಥ್ ಪಾಟೀಲ್‌ರವರ ಕಡೆ ಕೈ ತೋರಿಸುತ್ತಿದ್ದೀರಲ್ಲಾ.

ಶ್ರೀ ವಾಟಾಳ್ ನಾಗರಾಜ್ : ನಮ್ಮನ್ನು ಏಕೆ ನೀವು ಬೀದಿಗೆಳೆಯುತ್ತೀರಿ? ಅನುಭವಸ್ಥರು, ಪಂಡಿತರು, ಮೇಧಾವಿಗಳು ಇಲ್ಲಿ ಬಹಳ ಜನರಿದ್ದು ಗಂಭೀರವಾಗಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಕನ್ನಡ ಅಭಿವೃದ್ಧಿ ಪ್ರಾಧಿಕಾರವಿದ್ದು, ಅದಕ್ಕೊಬ್ಬರು ಅಧ್ಯಕ್ಷರಿದ್ದು, ಕನ್ನಡವನ್ನು ಆಡಳಿತದಲ್ಲಿ ಅನುಷ್ಠಾನಕ್ಕೆ ತರುವಲ್ಲಿ ನಿಮಗೆ ಯೋಚನೆಯಿದೆಯೇ? ಎಂದು ಕೇಳುತ್ತಿದ್ದೇನೆ. ಕಾವೇರಿ ಜಲದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಇವೊತ್ತು ಎಲ್ಲಾ ಸದಸ್ಯರುಗಳಿದ್ದಾರೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ, ಕಾವೇರಿ ಜಲ ವಿವಾದ ಇದೆಯೆಲ್ಲಾ, ಇದರ ಬಗ್ಗೆ ಎಷ್ಟು ಹೇಳಿದರೂ ಸಾಲದು. ಇದನ್ನು ಖೋಡ್ಡ ಇಂಜಿನಿಯರಿಂಗ್ ಎನ್ನುವವರೆಗೆ IIIrd stage ಕೊಟ್ಟಿತ್ತು.

ಯಾವಾಗ ಮುಗಿಯಬೇಕಾಗಿತ್ತು, ಕೆಲಸ ಪ್ರಾರಂಭವಾಗಿದ್ದು 2-1-89ಕ್ಕೆ ಮುಗಿಯಬೇಕಾದದ್ದು 1-7-91ಕ್ಕೆ, ಇನ್ನು ಮುಗಿದಿಲ್ಲ, ಇವತ್ತು ಬೆಳಿಗ್ಗೆ ಪೇಪರ್‌ನಲ್ಲಿ ಇದಕ್ಕೆ 50 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದಾರೆ ಅಂತ ಇತ್ತು. ಕಾವೇರಿ 4ನೇ ಹಂತದ ಯೋಜನೆಯನ್ನು ಪ್ರಾರಂಭಿಸಲಾಗುವುದೆಂದು ಹೇಳಿದ್ದೀರಿ ಮೂರನೆಯದೆ ಇನ್ನೂ ಮುಗಿದಿಲ್ಲ, ಕಾವೇರಿ ನಾಲ್ಕನೇ ಹಂತದ ಯೋಜನೆಗೆ ದುಡ್ಡು ಕೊಡುವುದಕ್ಕೆ ಎಲ್ಲಿಂದ ಬಂತು? ಸನ್ಮಾನ್ಯ ಸಭಾಧ್ಯಕ್ಷರೆ, 16 ಕೋಟಿಯನ್ನು ಅವರು ಕೊಡಬೇಕಾಗಿತ್ತು. ಈಗಾಗಲೇ 25 ಕೋಟಿಗೂ ಹೆಚ್ಚು ಕೊಟ್ಟಿದ್ದಾರೆ. ಹತ್ತು ಕೋಟಿಗಿಂತಲೂ ಹೆಚ್ಚಾಗಿ ಖೋಡೆ ಇಂಜಿನಿಯರ್‌ರವರಿಗೆ ಕೊಟ್ಟಿದ್ದಾರೆ ಈ ಒಂದು ಇಂಜಿನಿಯರ್‌ರವರು ಐದು ಕೋಟಿ ರೂಪಾಯಿಗಳ ಸ್ಕ್ರ್ಯಾಪ್‌ನ್ನು ಜಲಮಂಡಳಿಯ ಅಧ್ಯಕ್ಷರು ಮಾಡಿದ್ದಾರೆ, ಅದು ಅವರಿಗೆ ಸೇರಿದ್ದಲ್ಲ. ಐದು ಕೋಟಿ ರೂಪಾಯಿಗೋಸ್ಕರ ಜಲಮಂಡಳಿಯ ಅಧ್ಯಕ್ಷರು ಈ ಖೋಡೆ ಇಂಜಿನಿಯರ್ ಗ್ರೂಪ್‌ರವರಿಗೆ ಮಾರಾಟ ಮಾಡಿದ್ದಾರೆ. ಅದು ಲೆಕ್ಕಕ್ಕೆ ಬಂದಿಲ್ಲ, ಸೆಂಟ್ರಲ್ ಎಕ್ಸೈಜ್‌ನವರಿಗೆ 2.5 ಕೋಟಿ ರೂಪಾಯಿಗಳನ್ನು ಕಟ್ಟಬೇಕಾಗಿದೆ, ಅದನ್ನು ಕಟ್ಟಿಲ್ಲ, ಮಂಡ್ಯ ಜಿಲ್ಲೆಯ ಎಕ್ಸೈಜ್ ಆಫೀಸರ್‌ರವರು ಅವರನ್ನು ಅರೆಸ್ಟ್ ಮಾಡುವುದಕ್ಕೆ ಬಂದರು, ಮಾಡುವುದಕ್ಕೆ ಬಂದವರನ್ನು ತೆಗೆದುಹಾಕಿದರು, ಅವರನ್ನು ಬಿಟ್ಟುಬಿಟ್ಟರು, ಇಲ್ಲಿ ಟೆಂಡರ್‌ಗಳನ್ನು ಕರೆದರು, ಸಭಾಧ್ಯಕ್ಷರೆ, ನಾನು ಇವತ್ತು ಕೇಳುತ್ತಿದ್ದೇನೆ ಆ ಟೆಂಡರ್ ಪ್ರಿಂಟಾಗಿರುವುದೆ ಅವತ್ತು.

ಇದರ ಪೂರ್ತಿ ರೆಕಾರ್ಡ್ಸ್ ನನ್ನ ಹತ್ತಿರ ಇದೆ. ಅದನ್ನು ನಾನು ಕೊಡುತ್ತೇನೆ, ಅವತ್ತೇ ಟೆಂಡರ್ ಕರೆದಿರತಕ್ಕಂಥದ್ದು, ಟೆಂಡರ್ ಹಾಕುವುದಕ್ಕೂ ಅವತ್ತೇ ಕೊನೆಯ ದಿನ. ಇದರ ಬಗ್ಗೆ ಅಕೌಂಟ್ ಸೂಪರಿಂಟೆಂಡೆಂಟ್ ಅವರು ಬಹಳ ಚೆನ್ನಾಗಿ ಪರಿಶೀಲಿಸಿ ಇವರೆಲ್ಲಾ ಮಾಡಿರುವುದು ತಪ್ಪು ಅಂಥ ಹೇಳಿ ರಿಪೋರ್ಟ್ ಕೊಟ್ಟು ಬಿಡಿದರೆ ಅವನ ಎತ್ತಂಗಡಿ ಆಯಿತು, ಅವರನ್ನು ಅಲ್ಲಿ ಇರಲಿಕ್ಕೆ ಬಿಡಲಿಲ್ಲ, ನಾನು ಕೇಳುತ್ತಿದ್ದೇನೆ, ನಜೀರ್ ಅಹಮ್ಮದ್ ಎಂಬತಕ್ಕಂಥ ಏಕಮಾತ್ರ ವ್ಯಕ್ತಿ ಆ ಇಲಾಖೆಯಲ್ಲಿ ಏನೆಲ್ಲಾ ಅಕ್ರಮಗಳು ನಡೆಯುತ್ತಿದೆ ಕಾರ್ಯಪಾಲಕ ಅಭಿಯಂತ್ರರರು ಈ ರೀತಿ ಅಕ್ರಮಗಳನ್ನು ಮಾಡಿದ್ದಾರೆ. ಅಂತ ಹೇಳಿ ನೋಟ್ ಹಾಕಿದರೆ ಅವನನ್ನು ಅಲ್ಲಿಂದ ಟ್ರಾನ್ಸ್‌ಫರ್ ಮಾಡಿದರು. ಅವರನ್ನು ಕೇಳುವವರೇ ಇಲ್ಲ. ಸ್ವಾಮಿ ಒಂದೇ ದಿವಸ ಟೆಂಡರ್, ಆ ಟೆಂಡರ್ ಕಾಪಿ ನನ್ನ ಬಳಿಯೇ ಇದೆ. ಒಂದೂ ಟೆಂಡರ್‌ನ್ನೂ ಓಪನ್ ಮಾಡಿಲ್ಲ.....

ಶ್ರೀ ಆರ್ ರೋಷನ್ ಬೇಗ್ (ಬೆಂಗಳೂರು ಮಹಾನಗರ ಪಾಲಿಕೆ ರಾಜ್ಯ ಸಚಿವರು) : ಅದು ಯಾವಾಗ ಆಗಿದ್ದು?

ಶ್ರೀಮತಿ ಪ್ರಮೀಳ ನೇಸರ್ಗಿ : ಅದು ಕಾಂಗ್ರೆಸ್ ಪಕ್ಷ ಇದ್ದ ಕಾಲದಲ್ಲೇ ಆಗಿದೆ. ನಿಮ್ಮ ಕಾಲದಲ್ಲಿ ಅಲ್ಲ. ನಾನು ಏತಕ್ಕೆ ಹೇಳುತ್ತೇನೆ ಎಂದರೆ ಇವತ್ತು ನೀವು ಕುಡಿಯುವ ನೀರಿಗಾಗಿ ಹಣ ಬಿಡುಗಡೆ ಮಾಡಿದ್ದೀರಿ ಎಂಬುದು ಪತ್ರಿಕೆಯಲ್ಲಿ

ಬಂತು. ಅದನ್ನು ನೋಡಿ ನನಗೆ ಬಹಳ ದುಃಖ ಆಯಿತು. ಇವರು ಕೊಡುವುದೇ ಕೊಟ್ಟಿಲ್ಲ, ಸ್ಟಾಪ್ ಬೇರೆ ಮಾರಿಕೊಂಡಿದ್ದಾರೆ, ಇಂಜಿನಿಯರ್‌ಗಳು ಹಣವನ್ನು ಮಾಡಿಕೊಂಡಿದ್ದಾರೆ, ಟೆಂಡರ್‌ಗಳಲ್ಲಿ ಅಕ್ರಮವಾಗಿದೆ, ಈ ಟೆಂಡರನ್ನು ಧನಲಕ್ಷ್ಮಿ ಮತ್ತು ಇನ್ನೊಂದು ಕಂಪನಿಗೆ ಕೊಟ್ಟಿದ್ದಾರೆ, ಅವರಿಗೆ ಕೊಟ್ಟು ಕೆಲಸಗಳನ್ನು ಮಾಡಿಕೊಳ್ಳುತ್ತಾರೆ. ಆದರೆ ಕೆಲಸ ಇವತ್ತಿನವರೆಗೂ ಮುಗಿದಿಲ್ಲ. ಆದರೂ ಕೂಡ ಜಲಮಂಡಳಿಯಲ್ಲಿ ದುಡ್ಡಿಲ್ಲ ಎಂದು ಹೇಳಿ ಹಣವನ್ನು ಬಿಡುಗಡೆ ಮಾಡಿಸಿಕೊಳ್ಳುತಕ್ಕಂಥ ಪರಿಸ್ಥಿತಿ ಇವತ್ತು ಬಂದಿದೆ. ನೀವು ಇವತ್ತಿನದಿವಸ ಈ ಸೂಪರಿಟೆಂಡೆಂಟ್ ಹಾಕಿರತಕ್ಕಂಥ ನೋಟ್‌ನ್ನು ತೆಗೆಸಿ ನೋಡಿದರೆ ಈ ಕಾವೇರಿ ಕಾಲದಲ್ಲಿ ಎಷ್ಟು ಅಕ್ರಮಗಳು ಆಗಿವೆ ಎಂಬುದು ಗೊತ್ತಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದಲ್ಲ, ಎರಡಲ್ಲ, ಇಲ್ಲಿ ಆಗಿರತಕ್ಕ ಹತ್ತು ಅಕ್ರಮಗಳ ಬಗ್ಗೆ ದಾಖಲೆಗಳನ್ನು ಸಂಗ್ರಹಿಸಿದ್ದೇನೆ. ದಯವಿಟ್ಟು ನಾನು ಅದನ್ನು ತಮ್ಮ ಮುಖಾಂತರ ಕೊಡುವುದಕ್ಕೆ ಸಿದ್ಧನಿದ್ದೇನೆ. ಬೇರೆ ಏನಾಗಿದೆ ಎಂದರೆ ಐವತ್ತು ಲಕ್ಷದ ಬೆಲೆಗೆ ಇಂಜಿನಿಯರ್‌ಗೆ ಕೊಟ್ಟರು, ಐವತ್ತು ಲಕ್ಷ ರೂಪಾಯಿಗಳ ಚೆಕ್‌ಗೆ ಕಾರ್ಯನಿರ್ವಾಹಕ ಅಭಿಯಂತರರು ಸಹಿ ಹಾಕದೆ ಕೊಡಬಹುದಾ? ನಾನು ಕೇಳುತ್ತಿದ್ದೇನೆ ಕಾರ್ಯನಿರ್ವಾಹಕ ಅಭಿಯಂತರರ ಸಹಿ ಇಲ್ಲ, ದುಡ್ಡು ಕೊಟ್ಟರು, ಕೌಂಟರ್‌ಸಹಿ ಆಗಿಲ್ಲ, ದುಡ್ಡು ಹೋಯಿತು, ಏತಕ್ಕೆ ಕೇಳುತ್ತಿದ್ದೇನೆಂದರೆ ನಿಮ್ಮ ಕಾಲದಲ್ಲಿ ಆಗಿದೆ, ನೀವು ಮಾಡಿದ್ದೀರಿ ಎಂದು ಹೇಳುತ್ತಿಲ್ಲ. ಹಿಂದಿನವರು ಮಾಡಿರತಕ್ಕಂಥ ಅಕ್ರಮಗಳನ್ನು ತೆಗೆದುನೋಡಿ, ಯಾರು ತಪ್ಪಿತಸ್ಥರು ಆಗಿದ್ದಾರೋ, ಯಾರು ಅನ್ಯಾಯವನ್ನು ಮಾಡಿದ್ದಾರೋ ಯಾರು ಅಕ್ರಮಗಳನ್ನು ಮಾಡಿದ್ದಾರೋ ಅವರುಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾದುದು ಪ್ರತಿಯೊಂದು ಸರ್ಕಾರದ ಕರ್ತವ್ಯ.

ಆ ಕಾರಣದಿಂದ ಹೇಳುತ್ತಿದ್ದೇನೆಯೇ ಹೊರತು ಬೇರೆ ಕಾರಣದಿಂದ ಅಲ್ಲ. ಸನ್ಮಾನ್ಯ ಸಭಾಧ್ಯಕ್ಷರೆ, ಸೆಂಟ್ರಲ್ ಎಕ್ಸೈಜ್, ಮಂಡ್ಯ, ಇವರು ಖೋಡೆ ಇಂಜಿನಿಯರ್‌ರನ್ನು ಅರೆಸ್ಟ್ ಮಾಡಲು ಬಂದಿದ್ದರು, ತಾವು ಬೇಕಾದರೆ ರೆಕಾರ್ಡ್ಸ್‌ಗಳನ್ನು ತರಿಸಿ ನೋಡಿ. ಎಕ್ಸೈಜ್ ಡ್ಯೂಟಿ ಕೊಟ್ಟಿಲ್ಲ, ಹಣ ಹೊರಟುಹೋಯಿತು, ಸನ್ಮಾನ್ಯ ಸಭಾಧ್ಯಕ್ಷರೆ, ಅವುಗಳ ಹೆಸರನ್ನು ಮಾತ್ರ ಹೇಳಿಬಿಡುತ್ತೇನೆ. ಬಾಲಾಜಿ ಇಂಜಿನಿಯರಿಂಗ್ ವರ್ಕ್ಸ್‌ಗೆ ಕೊಟ್ಟಿರತಕ್ಕಂಥ ವರ್ಕ್ಸ್‌ನಲ್ಲಿ ಅಕ್ರಮ, ಧನಲಕ್ಷ್ಮಿ ಕನಸಟ್ರ್ಕ್ಷನ್‌ಗೆ ಕೊಡಬಾರದು ಎಂದು ಹೇಳಿ, ಸನ್ಮಾನ್ಯ ಅಧ್ಯಕ್ಷರೆ ಏನು ಮಾಡಿದ್ದರೆಂದರೆ, ಟೆಂಡರ್ ಕರೆಯಬೇಕಾದರೆ ಒಂದು ಬುಕ್ ಇರುತ್ತದೆ. ಒಂದು, ಎರಡು ಅಂತ ನಂಬರ್ ಇರುತ್ತದೆ, ಇಷ್ಟು ಯಾರೂ ಟೆಂಡರ್ ಫಾರಂನ್ನು ತೆಗೆದುಕೊಂಡಿಲ್ಲ, ಅದಕ್ಕೆ ಏನು ಮಾಡಿದ್ದಾರೆ 200/ಎ, 200/ಬಿ ಅಂದರೆ ಪಕ್ಕದಲ್ಲಿ ಎ, ಬಿ ಅಂಥ ಹಾಕಿಕೊಂಡು ಬಿಟ್ಟು ಅವರಿ ಬೇಕಾದವರಿಗೆ ಟೆಂಡರನ್ನು ಕೊಟ್ಟು ಮಾಡಬಾರದಂಥ ಅಕ್ರಮಗಳನ್ನು ಈ ಜಲಮಂಡಳಿಯವರು ಮಾಡಿದ್ದಾರೆ. ಅದಕ್ಕೋಸ್ಕರ ತಮ್ಮ ಗಮನವನ್ನು ಸೆಳೆಯುತ್ತಿದ್ದೇನೆ, ಇಲ್ಲಿ ನಾವು ನೀರಿಲ್ಲ, ನೀರಿಲ್ಲ ಎಂದು ಹೋರಾಡುತ್ತಿದ್ದೇವೆ. ಆದರೆ, ಅವರು ನೀವು ದುಡ್ಡು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆದರೆ ಅಕ್ರಮ ಆಗಿರತಕ್ಕಂಥದ್ದು ಆಗಿರತಕ್ಕ ಅವ್ಯವಹಾರದಲ್ಲೇ ಹೊರತು ಬೇರೆ ಆಗಿಲ್ಲ. ಅದಕ್ಕೋಸ್ಕರ ತಮ್ಮ ಗಮನವನ್ನು ಈ ಸಂದರ್ಭದಲ್ಲಿ ನಾನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರೆ, ಸಬ್ ರಿಜಿಸ್ಟಾರ್‌ಗಳ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾದುದು ನನ್ನ ಆದ್ಯ ಕರ್ತವ್ಯ ಎಂದು ತಿಳಿದುಕೊಂಡಿದ್ದೇನೆ. ಈ ಚುನಾವಣೆ ನಡೆಯುವುದಕ್ಕೆ ಮುಂಚೆ ಸಬ್ ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ಬ್ರೀಫ್‌ಕೇಸ್‌ಗಳು ಇರುತ್ತಿತ್ತು, ಅದರ ಜೊತೆಗೆ ಮನೆಗೆ ಹೋಗುತ್ತಿದ್ದರು. ಸ್ವಾಮಿ, ಇವತ್ತು ಗೋಣಿಚೀಲಗಳ ಬೆಲೆ ಹೆಚ್ಚಾಗಿದೆ. ಏಕೆ ಅಂಥ ವಿಚಾರಿಸಿದರೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದುಡ್ಡುಗಳನ್ನು ಗೋಣಿಚೀಲದಲ್ಲಿ ತೆಗೆದುಕೊಂಡು ಹೋಗುತ್ತಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು

ಕೇಳುತ್ತಿದ್ದೇನೆ, ದಯವಿಟ್ಟು ಇದರ ಬಗ್ಗೆ ವಿಚಾರಣೆ ಮಾಡಲು ಇಬ್ಬರು ಅಧಿಕಾರಿಗಳನ್ನು ಹಾಕಿದರೆ ತಮಗೆ ಗೊತ್ತಾಗುತ್ತದೆ. ಸಬ್ ರಿಜಿಸ್ಟ್ರಾರ್ ಆದವರು ಗೋಣಿಚೀಲದಲ್ಲಿ ಹಣವನ್ನು ತುಂಬಿಕೊಂಡು ಮನೆಗೆ ಹೋಗುವಂಥ ಪರಿಸ್ಥಿತಿ ಇವತ್ತು ಬಂದಿದೆ, ನಮಗೆ ಯಾರು ಹೇಳುವವರು ಕೇಳುವವರು ಇಲ್ಲ ಎಂಬಂತೆ ಸಬ್ ರಿಜಿಸ್ಟ್ರಾರ್‌ರವರು ವರ್ತನೆ ಮಾಡುತ್ತಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಕೆಂಪಯ್ಯನವರು ಸಬ್ ರಿಜಿಸ್ಟ್ರಾರ್ ಆಗಿದ್ದಾಗ ಸನ್ಮಾನ್ಯ ಬೈರೇಗೌಡರು ವಿಚಾರಣೆ ಮಾಡಿಸಿದರು, ತೆಗೆಯಬೇಕು ಎಂದೂ ಹೇಳಿದರು, ಸಸ್ಪೆನ್‌ಷನ್‌ನಲ್ಲಿ ಇಟ್ಟರು, ಎಲ್ಲಾ ವಿಚಾರಣೆ ಆಯಿತು, ರಿಪೋರ್ಟ್ ಬಂತು. ಇವತ್ತು ಅದು ಡಿವಿಜನಲ್ ಕಮಿಷನರ್ ಪಾರ್ಥಸಾರಥಿಯವರ ಬಳಿಗೆ ಹೋಗಿ ಅದು ಮೂಲೆಗುಂಪಾಗಿದೆ ಮತ್ತೆ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಒದಗಿ ಬಂದಿದೆ. ಇದೇ ರೀತಿ ಹಲವಾರು ಸಬ್ ರಿಜಿಸ್ಟ್ರಾರ್ ಆಫೀಸ್‌ನ ಪರಿಸ್ಥಿತಿ ಆಗಿದೆ. ಸನ್ಮಾನ್ಯ ಮುಖ್ಯಮಂತ್ರಿಗಳೇ ದಯವಿಟ್ಟು ಇದರ ಬಗ್ಗೆ ಗಮನಕೊಡಿ, ಇಂತಹ ಅಕ್ರಮಗಳಲ್ಲಿ ತೊಡಗಿರತಕ್ಕಂಥ ಆಫೀಸರ್‌ಗಳನ್ನು ಮತ್ತೆ ತರತಕ್ಕಂಥ ಪ್ರಯತ್ನವನ್ನು ತಾವು ದಯವಿಟ್ಟು ಮಾಡಬೇಡಿ. ಸಬ್ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಈ ರೀತಿಯ ಅಕ್ರಮಗಳು ಆಗುವುದಕ್ಕೆ ಅವಕಾಶ ಕೊಡಬೇಡಿ, ತಮಗೆ ಹೇಳುವುದಾದರೆ ತಮ್ಮ ಕ್ಷೇತ್ರವಾದ ರಾಮನಗರದಲ್ಲಿ ಒಬ್ಬ ಸಬ್ ರಿಜಿಸ್ಟ್ರಾರ್ ಇದ್ದಾನೆ, ಏನಾಗಿದೆ ಎಲ್ಲಾ ಕ್ರಯಪತ್ರ, ಪವರ್ ಆಫ್ ಅಟಾರ್ನಿ ಕ್ಯಾನ್ಸಲ್ ಮಾಡಿ ಆ ವ್ಯಕ್ತಿ ತೆಗೆದುಕೊಂಡು ಹೋಗಿ ಸಬ್ ರಿಜಿಸ್ಟ್ರಾರ್ ವಶಕ್ಕೆ ಕೊಡುತ್ತಾನೆ, ಪವರ್ ಆಫ್ ಅಟಾರ್ನಿ ಅಂದಮೇಲೆ ಕ್ಯಾನ್ಸಲ್ ಮಾಡುತ್ತಾರೆ, ರಿಜಿಸ್ಟ್ರು ಮಾಡುವುದಿಲ್ಲ, ಎದುರುಗಡೆಯ ಪಾರ್ಟಿಗೆ ಹೇಳಿಕಳುಹಿಸಿ ಅವರನ್ನು ಕರೆಸಿಕೊಂಡು ಆ ಪವರ್ ಆಫ್ ಅಟಾರ್ನಿ ಮೇಲೆ ಪತ್ರಗಳನ್ನು ಬರೆಸಿಕೊಂಡು ರಿಜಿಸ್ಟ್ರು ಮಾಡಿಕೊಂಡು ಬಿಡುತ್ತಾರೆ. ಪತ್ರಗಳನ್ನು ರಿಜಿಸ್ಟ್ರು ಮಾಡಿಕೊಂಡು ಆಮೇಲೆ ಪವರ್ ಆಫ್ ಅಟಾರ್ನಿ ಕೊಡುತ್ತಾರೆ, ಅಷ್ಟೆ ಅಲ್ಲ ಸನ್ಮಾನ್ಯ ಮುಖ್ಯ ಮಂತ್ರಿಗಳೇ ಸುಪ್ರೀಂ ಕೋರ್ಟ್‌ನಲ್ಲಿ ಆ ಜಮೀನು ಅವರದು ಎಂದು ತೀರ್ಮಾನವಾಗಿದೆ.

ಅದಾದನಂತರ ಅವರನ್ನು ಕರೆಸಿಕೊಂಡು ಅಗ್ರಿಮೆಂಟು, ಸೇಲು ಅಂಥ ಹೇಳಿ ರಿಜಿಸ್ಟ್ರು ಮಾಡಿಸಿಕೊಳ್ಳುತ್ತಾರೆ, ರಾತ್ರಿ ಒಂಭತ್ತೂವರೆಯವರೆಗೂ ಪಾರ್ಟಿಯನ್ನು ಕೂಡಿ ಹಾಕಿ ಇಟ್ಟುಕೊಂಡು ಪತ್ರಗಳನ್ನು ಬರೆಸಿಕೊಳ್ಳತಕ್ಕಂಥ ಸಬ್‌ರಿಜಿಸ್ಟ್ರಾರ್ ನಮ್ಮಲ್ಲಿದ್ದರೆ ಪರಿಸ್ಥಿತಿ ಏನಾಗಬಹುದು, ಇವತ್ತು ಪೇಪರ್‌ನಲ್ಲಿ ಈ ವಿಷಯಗಳು ಬಂದಾಗ ನನಗೆ ಬಹಳ ಆಶ್ಚರ್ಯವಾಯಿತು. ಅಂತಹ ಪರಿಸ್ಥಿತಿ ಇಲ್ಲಿ ಆಗಬಾರದು, ಈ ರೀತಿಯ ಪರಿಸ್ಥಿತಿ ನಮ್ಮ ಕರ್ನಾಟಕಕ್ಕೆ ಬರಬಾರದು. ಇಂತಹ ಸಬ್ ರಿಜಿಸ್ಟ್ರಾರ್‌ರವರನ್ನು ಎಲ್ಲಿ ಇರಬೇಕೋ ಅಲ್ಲಿ ಇಡಬೇಕಾದ್ದು ತಮ್ಮ ಕರ್ತವ್ಯ. ಇಂತಹ ಸಬ್ ರಿಜಿಸ್ಟ್ರಾರ್‌ಗಳು ಏನಾದರು ತಪ್ಪು ಮಾಡಿದ್ದರೆ ದಯವಿಟ್ಟು ತಾವು ವಿಚಾರಣೆಯನ್ನು ಮಾಡಿದರೆ ಸಂಪೂರ್ಣವಾಗಿ ಮಾಹಿತಿ ತಮಗೆ ಬರುತ್ತದೆ. ಇದರ ಬಗ್ಗೆ ಆಗಿರತಕ್ಕಂಥ ಗೊಂದಲ ಮಯವಾದ ಪರಿಸ್ಥಿತಿಯನ್ನು ದೂರಕ್ಕೆ ಎಸೆಯತಕ್ಕಂಥಾದ್ದು ತಮ್ಮ ಕರ್ತವ್ಯ. ಈ ಕೆಲಸವನ್ನು ತಾವು ಖಂಡಿತವಾಗಿಯೂ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಮತ್ತು ತಾವು ಇದನ್ನು ಖಂಡಿತವಾಗಿ ಮಾಡುತ್ತೀರಿ ಎಂಬ ಆಶ್ವಾಸನೆ ನನಗೆ ಇದೆ. ಸನ್ಮಾನ್ಯ ಸಭಾಧ್ಯಕ್ಷರೆ, ಒಂದೇ ಒಂದು ಮಾತನ್ನು ಹೇಳುತ್ತಿದ್ದೇನೆ.....

ಶ್ರೀ ಆರ್.ಎಲ್. ಜಾಲಪ್ಪ : ದಯವಿಟ್ಟು ಆ ವಿವರಗಳನ್ನು ತೋರಿಸಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಆ ಎಲ್ಲಾ ರೆಕಾರ್ಡುಗಳನ್ನು ತಂದಿದ್ದೇನೆ, ತಮಗೆ ಕೊಡುತ್ತೇನೆ. ಈಗಾಗಲೇ ಮಾನ್ಯ ಸಭಾಧ್ಯಕ್ಷರು ನನಗೆ ಜಾಸ್ತಿ ಹೆಚ್ಚು ಮಾತನಾಡಬೇಡಿ ಎಂದು ಹೇಳಿ ಆದೇಶ ಕೊಟ್ಟಿರತಕ್ಕ ಸಂದರ್ಭದಲ್ಲಿ ಅವರ

ಗಮನದಲ್ಲಿಟ್ಟುಕೊಂಡು ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಶ್ರೀರಾಮರೆಡ್ಡಿಯವರು ಮಹಾಚೈತ್ರದ ಬಗ್ಗೆ ವ್ಯಾಖ್ಯಾನ ಮಾಡಿದರು, ಇದು ಒಂದು ದೊಡ್ಡ ಸಮುದಾಯದ ಒಂದು ಸಮಾಜದ ಪ್ರಶ್ನೆ ಇಲ್ಲಿರತಕ್ಕಂಥ ಸಮಾಜದ ಪ್ರಶ್ನೆಯಲ್ಲ ಅವಮಾನವಾದಂಥ, ಅವಹೇಳನಕಾರಿಯಾದಂಥ ಮಾತುಗಳನ್ನು ನಮ್ಮ ನಾಯಕರಾದಂಥ ಬಸವಣ್ಣನವರ ಬಗ್ಗೆ ಏನಾದರೂ ಅವಹೇಳನಕಾರಿಯಾಗತಕ್ಕಂಥದ್ದು ಬಂದಾಗ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳೇ ಅದನ್ನು ಗಮನಕ್ಕೆ ತೆಗೆದುಕೊಂಡು ಅದನ್ನು ವಿತ್‌ಡ್ರಾ ಮಾಡಿದ್ದಾರೆ. ಅದಕ್ಕೋಸ್ಕರ ಇಡೀ ವೀರಶೈವ ಸಮಾಜ ಅವರನ್ನು ಅಭಿನಂದಿಸುತ್ತದೆ. ಆದರೆ ಇದರ ಬಗ್ಗೆ ಹೇಳತಕ್ಕಂಥ ಸಂದರ್ಭದಲ್ಲಿ ಇತಿಹಾಸ, ಚರಿತ್ರೆ ಇದರ ಬಗ್ಗೆ ಕೂಡ ತಾವು ತಿಳಿದುಕೊಳ್ಳಬೇಕಾಗುತ್ತದೆ. ಸನ್ಮಾನ್ಯ ಚಿದಾನಂದಮೂರ್ತಿಗಳು ಮಹಾಚೈತ್ರದಲ್ಲಿ ಚರಿತ್ರೆಗೆ, ಇತಿಹಾಸಕ್ಕೆ ಅಪಚಾರವಾಗಿದೆ ಎಂದು ಹೇಳುತ್ತಿದ್ದಾರೆ. ಮಹಾಚೈತ್ರ ನಾಟಕದ ಐತಿಹಾಸಿಕ ಧಾರ್ಮಿಕ ಪುರುಷ ಬಸವಣ್ಣನವರ ಸಾಮಾಜಿಕ ಅಂಧೋಲನ ಇಲ್ಲಿ ಬಳಕೆ ಆಗಿರತಕ್ಕಂಥದ್ದು ಇತಿಹಾಸಕ್ಕೆ, ಎಲ್ಲರಿಗೂ ಕೂಡ ಅಪಚಾರವಾಗಿದೆ ಎಂದು ಚಿದಾನಂದಮೂರ್ತಿಯವರು ಹೇಳಿದ್ದಾರೆ, ಪಾಟೀಲ್ ಪುಟ್ಟಪ್ಪನವರು ಬರೆದಿದ್ದಾರೆ, ಬಹಳ ದೊಡ್ಡ ದೊಡ್ಡ ಮೇಧಾವಿಗಳು ಬರೆದಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಸನ್ಮಾನ್ಯ ಸದಸ್ಯರಾದ ಜೀವರಾಜ ಆಳ್ವರವರು ಪತ್ರಿಕೆಗಳು ಏನು ಬೇಕಾದರೂ ಬರೆದು ತಪ್ಪಿಸಿಕೊಳ್ಳಬಹುದು ಎಂದು ತಿಳಿದುಕೊಂಡಿದ್ದರೆ ಅದು ತಪ್ಪು ಎಂದು ಹೇಳಿದರು. ಇವತ್ತು ನಾವು ಕೂಡ ಹೇಳತಕ್ಕಂಥದ್ದೆ, ಯಾರು ಸಾಹಿತಿಗಳಿದ್ದಾರೆ, ಯಾರೂ ಕೂಡ ಈ ಸಮಾಜದಲ್ಲಿ ಏನು ಬೇಕಾದರೂ ಬರೆಯಬಹುದು. ಯಾವ ಸಮುದಾಯಕ್ಕಾದರೂ ನೋವನ್ನು ಉಂಟುಮಾಡತಕ್ಕಂಥ, ನಮ್ಮ ಚರಿತ್ರೆಗೆ, ಇತಿಹಾಸಕ್ಕೆ ಅಪಚಾರ ಆಗತಕ್ಕಂಥದ್ದನ್ನು ಬರೆದು ತಪ್ಪಿಸಿಕೊಳ್ಳಬಹುದು ಎಂದು ತಿಳಿದುಕೊಂಡಿದ್ದರೆ ಅದು ತಪ್ಪು ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಬಸವಣ್ಣನವರ ಬಗ್ಗೆ ಏನು ಹೇಳಿದ್ದಾರೆ ಎಂದರೆ ಬಿಜ್ಜಳನ ಆಸ್ತಿಯನ್ನು ಲೂಟಿ ಮಾಡಿ ಅವರು ದಾಸೋಹವನ್ನು ನಡೆಸುತ್ತಿದ್ದರು ಎಂಬುದಾಗಿ ಹೇಳಿದ್ದಾರೆ. ನಾನು ಇವತ್ತು ಈ ಸದನದಲ್ಲಿ ಕೇಳುತ್ತಿದ್ದೇನೆ. ಬಸವಣ್ಣನವರ ಬಗ್ಗೆ ಯಾರಾದರೂ ಈ ರೀತಿಯಾಗಿ ಹೇಳುವುದು ಸಾಧ್ಯವೇ? ಯಾವುದಕ್ಕೂ ಆಸೆ ಪಡದೇ ಇರತಕ್ಕಂತಹ ಬಸವಣ್ಣನವರ ಬಗ್ಗೆ ಈ ಮಾತನ್ನು ಹೇಳಿದ್ದಾರೆ. ಅವರು ಹೇಳಿದ ಒಂದೊಂದು ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಬಸವಣ್ಣನವರು ಜಾತಿಗಳ ನಡುವೆ ಯಾವ ವ್ಯತ್ಯಾಸವನ್ನೂ ಕೂಡ ಮಾಡುವುದಕ್ಕೆ ಇಷ್ಟಪಡುತ್ತಾ ಇರಲಿಲ್ಲ, ಸಮಾಜದಲ್ಲಿರತಕ್ಕ ಎಲ್ಲಾ ದೋಷಗಳನ್ನು ದೂರ ಮಾಡತಕ್ಕ ಮಹಾನ್ ವ್ಯಕ್ತಿ ಬಸವಣ್ಣನವರು. ಅವರು ಜಂಗಮರ ಬಗ್ಗೆ ಇನ್ನೊಂದು ಮಾತು ಹೇಳಿದ್ದಾರೆ. ಇವತ್ತು ಎಷ್ಟೋ ಜನ ಜಂಗಮರು ಇರಬಹುದು, ಈ ಸದನದಲ್ಲೂ ಕೂಡ ಕೆಲವು ಮಾನ್ಯ ಸದಸ್ಯರು ಜಂಗಮರು ಇರಬಹುದು. ಅವರು ಸಾರಾಸಗಟಾಗಿ ಜಂಗಮರ ಬಗ್ಗೆ ಏನು ಹೇಳಿದ್ದಾರೆ ಎಂದರೆ ಮಹಾ ಮಹಿಮರಾದ ಜಂಗಮರನ್ನು ಅವರು ಕುಲಗೆಟ್ಟವರು ಉಗಿದು ಬಿಟ್ಟವರು ಎಂದು ಹೇಳಿದ್ದಾರೆ. ಇದನ್ನು ನೀವು ಒಪ್ಪುತ್ತೀರಾ? ನಮ್ಮ ಮಕ್ಕಳು ಇದನ್ನು ಒಪ್ಪುತ್ತಾರೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಬಹುಶಃ ಪುಸ್ತಕವನ್ನು ಓದಿಲ್ಲವೆಂದು ಕಾಣುತ್ತದೆ. ಅವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ.

(ಗೊಂದಲ)

ಶ್ರೀಮತಿ ಪ್ರಮೀಳ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ನಾನು ಬಹಳ ಮನನೊಂದು ಈ ಮಾತನ್ನು ಹೇಳುತ್ತಿದ್ದೇನೆ. ಬಿಜ್ಜಳನ ಆಸ್ತಿಯನ್ನು ಲೂಟಿ ಮಾಡಿ ದಾಸೋಹ ಮಾಡಿದ್ದಾರೆಯೇ? ಬಸವಣ್ಣನವರು. ಇದನ್ನು ನಾವು ಕೇಳಬಾರದೇ? ಎಂತಹ ಮಹಾಮಹಿಮರು ಬಸವಣ್ಣನವರು.

ಹೊನ್ನಿನೊಳಗೊಂದೊರೆಯ
ವಸ್ತ್ರದೊಂದು ಎಳೆಯ
ಅನ್ನದೊಳಗೊಂದಗುಳ
ಇಂದಿಂಗೆ ನಾಳಿಂಗೆ ಬೇಕೆಂದೆ
ನೆಂದರೆ ನಿಮ್ಮಾಣೆ,
ನಿಮ್ಮ ಪ್ರಮಥರಾಣೆ

ಎಂದು ಬಸವಣ್ಣನವರು ತಮ್ಮ ವಚನವೊಂದರಲ್ಲಿ ಹೇಳಿದ್ದಾರೆ. ಇಂತಹವರಿಗೆ ಅಪಚಾರ ಮಾಡಿದ್ದಾರೆ. ಚರಿತ್ರೆಗೆ, ಇತಿಹಾಸಕ್ಕೆ ಅಪಚಾರ ಮಾಡಿದ್ದಾರೆ. ಬಸವಣ್ಣನವರ ಹುಟ್ಟಿನ ಬಗ್ಗೆ ಅಪಹಾಸ್ಯ ಮಾಡಿದ್ದಾರೆ. ಇದನ್ನು ಸಹಿಸಿಕೊಂಡು ನೀವು ಇರುತ್ತೀರಾ? ಒಂದು ಸಮಾಜದಲ್ಲಿರತಕ್ಕಂಥ ಮಹಾಮಹಿಮರ ಬಗ್ಗೆ ಇಂತಹ ಮಾತು ಬಂದಾಗ ನೀವು ಸುಮ್ಮನೆ ಇರುತ್ತೀರಾ? ಇವತ್ತಿನ ದಿವಸ ಅನುಮತಿ ಕೊಡಿ, ನಾವು ಪ್ರಾಸಿಕ್ಯೂಟ್ ಮಾಡುತ್ತೇವೆ ಎಂದು ಜನ ಕೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೇ ಅವರಿಗೆ ಅನುಮತಿ ಕೊಡಿ. ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಿ. ಕೋರ್ಟಿನಲ್ಲಿ ಏನು ತೀರ್ಮಾನ ಆಗುತ್ತದೋ ಅದಕ್ಕೆ ನಾವು ಬದ್ಧರಾಗಿದ್ದೇವೆ. ಮಹಾಚೈತ್ರ ಪಠ್ಯ ಪುಸ್ತಕವನ್ನು ರದ್ದು ಮಾಡಿ ಸರ್ಕಾರದವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಒಂದು ಸಮುದಾಯಕ್ಕೆ ಸಮಾಜಕ್ಕೆ ಆಗಿರತಕ್ಕ ಅನ್ಯಾಯವನ್ನು ಈ ಮೂಲಕ ಸರಿಪಡಿಸಿದ್ದಾರೆ. ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತಿದ್ದೇನೆ. ಇಂತಹ ಪುಸ್ತಕಗಳನ್ನು ಪಠ್ಯಪುಸ್ತಕಗಳನ್ನಾಗಿ ಇನ್ನು ಮುಂದೆ ದಯವಿಟ್ಟು ಇಡಬೇಡಿ. ಅಂತಹವರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಈ ರೀತಿಯಾಗಿ ಆಗದಂತೆ ನೋಡಿಕೊಳ್ಳಬೇಕಾದ್ದು ಪ್ರತಿಯೊಬ್ಬರ ಕರ್ತವ್ಯ. ನಮ್ಮ ಮಕ್ಕಳು ಭವಿಷ್ಯದಲ್ಲಿ ಇಂತಹ ತಪ್ಪು ಚರಿತ್ರೆಯನ್ನು ಇತಿಹಾಸದಲ್ಲಿ ಕಲಿಯಬಾರದು, ಕಲಿಯುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಅಧ್ಯಕ್ಷರೇ, ನೀವು ಒಂದು ಗಂಟೆ ಸಮಯದೊಳಗೆ ಮಾತನಾಡಬೇಕೆಂದು ಹೇಳಿದ್ದೀರಿ. ಆದರೆ ನಾನು ಇನ್ನೂ ಕೇವಲ ಅರ್ಧ ಗಂಟೆ ಮಾತ್ರ ಮಾತನಾಡಿದ್ದೇನೆ.

ಅಧ್ಯಕ್ಷರು : ನಿಮ್ಮ ಗಡಿಯಾರ ಸರಿಯಾಗಿ ಕೆಲಸ ಮಾಡುವಂತೆ ಕಾಣುತ್ತಿಲ್ಲ. ನೀವು ಈಗಾಗಲೇ ಒಂದು ಗಂಟೆ ಮಾತನಾಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಹಿಳಳೆಯರು ಸುಳ್ಳು ಹೇಳುವುದಿಲ್ಲ ಎಂದುಕೊಂಡಿದ್ದೆ. ಆದರೆ ಪ್ರಮೀಳರವರು ಒಂದು ಗಂಟೆ ಮಾತನಾಡಿ, ಕೇವಲ ಅರ್ಧ ಗಂಟೆ ಅಷ್ಟೇ ಮಾತನಾಡಿದ್ದೇನೆ ಎನ್ನುತ್ತಾರಲ್ಲ.

ಶ್ರೀಮತಿ ಪ್ರಮೀಳ ನೇಸರ್ಗಿ : ನಾನು ಇನ್ನು ಜಾಸ್ತಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ನಿನ್ನೆ ಜಿಲ್ಲಾ ಪಂಚಾಯತ್ ಅಮೆಂಡ್‌ಮೆಂಟ್ ಬಿಲ್ ಮೇಲೆ ಮಾತನಾಡುತ್ತಾ, ಅಲ್ಪಸಂಖ್ಯಾತರನ್ನು ಹಿಂದುಳಿ ವರ್ಗದವರನ್ನು ನಾವು ಉದ್ಧಾರ ಮಾಡಿದ್ದೇವೆ. ನಾವು ಬಿಟ್ಟರೆ ಮತ್ತೆ ಬೇ

ಯಾರೂ ಅವರ ಉದ್ಧಾರ ಮಾಡಿಲ್ಲ ಎಂದು ಹೇಳಿದರು. ಈ ದೇಶದಲ್ಲಿ ಅಲ್ಪಸಂಖ್ಯಾತರು ಎಂದರೆ ಏನು ಕೇವಲ ಒಂದೇ ಧರ್ಮದವರಾ? ಕ್ರೈಸ್ತರೂ ಅಲ್ಪಸಂಖ್ಯಾತರೇ ಆಗಿದ್ದಾರೆ. ಇವತ್ತು ಸರ್ಕಾರದವರು ಅಲ್ಪಸಂಖ್ಯಾತರ ಆಯೋಗವನ್ನು ಮಾಡಿದ್ದೀರಿ. ಅದಕ್ಕೆ ಒಬ್ಬ ಕ್ರೈಸ್ತ ಧರ್ಮವರನ್ನು ಅಧ್ಯಕ್ಷರನ್ನಾಗಿ ಮಾಡತಕ್ಕ ಔದಾರ್ಯವನ್ನು ಸರ್ಕಾರವು ತೋರಿಸಲಿ. ಕ್ರೈಸ್ತರೂ ಕೂಡ ಅಲ್ಪಸಂಖ್ಯಾತರು. ಕ್ರೈಸ್ತ ಧರ್ಮದವರಿಗೂ ಕೂಡ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗತಕ್ಕ ಅವಕಾಶ ಕಲ್ಪಿಸಿ ಕೊಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ ನನಗೆ ಇಷ್ಟು ಮಾತನಾಡಲು ಅವಕಾಶ ಮಾಡಿ ಕೊಟ್ಟ ಅಧ್ಯಕ್ಷರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಕ್ಯಾಂಡಿಡೇಟ್ಸ್ ಯಾರಾದರೂ ಇದ್ದರೆ ಹೇಳಿ.

ಶ್ರೀಮತಿ ಪ್ರಮೀಳ ನೇಸರ್ಗಿ : ರಾಮಕೃಷ್ಣರವರು ಇದ್ದಾರೆ, ಫರ್ನಾಂಡೀಸ್‌ರವರು ಇದ್ದಾರೆ. ಎಲ್ಲರಿಗೂ ಅವಕಾಶ ಮಾಡಿ ಕೊಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ತಾವು ಹೇಳಿದ್ದೂ ರೆಕಾರ್ಡ್‌ಗೆ ಹೋಗಿದೆ. ಅವರು ಹೇಳಿದ್ದೂ ರೆಕಾರ್ಡ್‌ಗೆ ಹೋಗಿದೆ. ಇದಕ್ಕೆ ಒಂದು ಲಿಮಿಟ್ ಇರಲಿ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಇತಿಹಾಸವನ್ನು ಅವರ ಮೂಗಿನ ನೇರಕ್ಕೆ ಬರೆಯಲಿಕ್ಕೆ ಸಾಧ್ಯವಿಲ್ಲ. ಅವರು ಹೇಳಿದ್ದೆಲ್ಲಾ ಮಹಾಚೈತ್ರ ಪುಸ್ತಕದಲ್ಲಿ ಇಲ್ಲ.

(ಗೊಂದಲ)

ಅಧ್ಯಕ್ಷರು : ಅವರವರ ಅಭಿಪ್ರಾಯಕ್ಕೆ ಅವರು ಬದ್ಧರು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಷ್ಟ ದೈವದ ಆರಾಧನೆ ಮಾಡಿಕೊಂಡು ಕಾಲ ಕಳೆಯುವವರು ಇಲ್ಲಿ ಇತಿಹಾಸ ಹೇಳಲಿಕ್ಕೆ ಹೊರಟರೆ ಹೇಗೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಾಮನ ಹೆಸರು ಹೇಳಿಕೊಂಡು ಓಟು ಕೇಳುವಂತಹ ಜನ, ಇವತ್ತು ನಮಗೆ ಪಾಠ ಹೇಳುತ್ತಾರಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ರಾಷ್ಟ್ರಪಿತನ ಕೊಲೆಗೆ ಅಪವಾದವನ್ನು ಹೊತ್ತುಕೊಂಡಿರತಕ್ಕಂತಹ ಜನ ನೀವು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಡ್ಡ ದಾರಿ ಹಿಡಿಯುತ್ತಿರುವವರು ನೀವು. ಇನ್ನೊಬ್ಬರ ಅಭಿಪ್ರಾಯವನ್ನು ಮನ್ನಣೆ ಮಾಡಲಿಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ.....

(ಗೊಂದಲ)

ಅಧ್ಯಕ್ಷರು : ಮಾನ್ಯ ಶ್ರೀರಾಮರೆಡ್ಡಿಯವರೇ, ದಯ ಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು : ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಭಿನ್ನಾಭಿಪ್ರಾಯಗಳು ಏನಿದ್ದರೂ ಕೂಡ ಅದನ್ನು ಪರಿಣಾಮಕಾರಿಯಾಗಿ ಪ್ರತಿಪಾದನೆ ಮಾಡತಕ್ಕ ಕೆಲಸವನ್ನು ಈ ಸದನದಲ್ಲಿ ನೀವು ಮಾಡಬಹುದು. ಅದನ್ನು ಒಂದು ಹತೋಟಿ ಮೀರಿ ಹೋಗುವಂತಾದ್ದು ಸಾಧುವಲ್ಲ. ಅದನ್ನು ಮಾಡಿಕೊಳ್ಳುವುದಕ್ಕೆ ಹೊರಗೆ ಬೇಕಾದಷ್ಟು ಜಾಗ ಇದೆ. ಈ ಸದನದಲ್ಲಿ ಅದಕ್ಕೆ ಅವಕಾಶ ಇಲ್ಲ. ನಿಮ್ಮ ನಿಮ್ಮ ಅಭಿಪ್ರಾಯಗಳಿಗೆ ನೀವು ಸ್ವತಂತ್ರರು. ನಿಮ್ಮ ಅಭಿಪ್ರಾಯವನ್ನು ನೀವು ಪ್ರತಿಪಾದನೆ ಮಾಡಬಹುದು. ಎಲ್ಲರೂ ಸಾಕಷ್ಟು ಹೇಳಿದ್ದೀರಿ. ಪರಸ್ಪರ ನೀವೇ ಜಗಳ ಶುರು ಮಾಡಿಕೊಂಡು ಎಲ್ಲಿಗೆ ಅಂದರೆ ಅಲ್ಲಿಗೆ ಹೋದರೆ ಏನು ಪ್ರಯೋಜನ?

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಕೆಲವು ವಿಭೂತಿ ಪುರುಷರು ಈ ನಾಡಿನಲ್ಲಿ ಜನ್ಮ ತಾಳಿದ್ದಾರೆ. ಬಹುಶಃ 800 ವರ್ಷಗಳ ಹಿಂದೆ ನಮ್ಮ ಸಮಾಜದ ಅಂದಿನ ಪರಿಸ್ಥಿತಿಯಲ್ಲಿದ್ದಂತಹ ಒಬ್ಬ ದಾರ್ಶನಿಕರು, ಸಮಾಜ ಸುಧಾರಕರು ಬಸವಣ್ಣನವರು. ಇವತ್ತು ನಾವು ಆಧುನಿಕ ಸಮಾಜದಲ್ಲಿ ಇದ್ದೇವೆ ಎನಿಸಿಕೊಂಡಿರುವವರು. ಏನೇನು ಪ್ರಗತಿಪರವಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ. ಜಾತ್ಯಾತೀತರಾಗಿ ಇರುತ್ತೇವೆ ಎಂದು ಹೇಳುತ್ತೇವೆ. ಆದರೆ ಅಂದಿನ ಪರಿಸರದಲ್ಲಿ ಅದನ್ನು ಅಕ್ಷರಶಃ ಜಾರಿಗೆ ತಂದಂತಹ ಒಬ್ಬ ವಿಭೂತಿ ಪುರುಷರು ಮಹಾನುಭಾವರು ಬಸವಣ್ಣನವರು. ಜೊತೆಗೆ ಅವರು ಸಮಾಜದ ಸುಧಾರಕರೂ ಆಗಿದ್ದರು. ಇಡೀ ಸಮಾಜಕ್ಕೆ ಅವರು ಪೂಜ್ಯರಾಗಿದ್ದರು. ಯಾರೇ ಆಗಲಿ, ಅವರ ಬಗ್ಗೆ ಲಘುವಾಗಿ ಮಾತನಾಡತಕ್ಕದ್ದು ಸರಿಯಲ್ಲ. ಭಿನ್ನಾಭಿಪ್ರಾಯಗಳು ಇದ್ದರೆ ಇರಲಿ. ಆ ಪ್ರಶ್ನೆ . ಬೇರೆ. ಹೋಗುವವರ ದಾರಿ ಬೇರೆ ಬೇರೆ ಇರಬಹುದು. ಆದರೆ ಲಘುವಾಗಿ ಪರಿಗಣಿಸತಕ್ಕದ್ದು ಬೇರೆಯವರ ಮನಸ್ಸಿಗೆ ಒಂದು ಸಮಾಜಕ್ಕೆ ನೋವು ಉಂಟು ಮಾಡತಕ್ಕದ್ದು ಆಗಬಾರದು.

+ ಶ್ರೀ ಬಿ.ಆರ್. ಯಾವಗಲ್ (ನರಗುಂದ) : ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಪ್ರಸ್ತಾವವನ್ನು ನಾನು ಬೆಂಬಲಿಸುತ್ತೇನೆ. ಇವತ್ತು ಅನೇಕ ವಿಚಾರಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಕಳೆದ ನಾಲ್ಕು ತಿಂಗಳ ನಮ್ಮ ಸರ್ಕಾರದ ಕಾರ್ಯ ವೈಖರಿ ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳಬೇಕು, ಇಚ್ಛಾ ಶಕ್ತಿ ವ್ಯಕ್ತ ಮಾಡಬೇಕೆನ್ನುವುದರ ಸಂಕೇತವಾಗಿದೆ ಎಂದು ತಮ್ಮೆದುರಿಗೆ ನಮ್ರವಾಗಿ ಹೇಳಬಯಸುತ್ತೇನೆ. ಇವತ್ತು ಅನೇಕ ವಿಚಾರಗಳ ಬಗ್ಗೆ ರಾಜ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಹೊಸ ವಿಚಾರಗಳನ್ನು ಪ್ರತಿಪಾದನೆ ಮಾಡಿರುವಂತಹ ರಾಜ್ಯಪಾಲರ ಭಾಷಣವನ್ನು ನಾವು ನೋಡುತ್ತಿದ್ದೇವೆ. ಅದರಲ್ಲಿ ಬಹಳ ಮುಖ್ಯವಾದುದು ಈದ್ಗಾ ವಿಚಾರ. ನನ್ನ ದೃಷ್ಟಿಯಲ್ಲಿ ವೈಯಕ್ತಿಕವಾಗಿ ಇದು ಪ್ರಮುಖ ವಿಚಾರ. ನಮ್ಮ ಜಿಲ್ಲೆಯ ಒಂದು ಕೇಂದ್ರವಾದ ಹುಬ್ಬಳ್ಳಿ, ಧಾರವಾಡ ನಗರಗಳಲ್ಲಿ ಕಳೆದ 3-4 ವರ್ಷಗಳಿಂದ ಈ ಒಂದು ಸಮಸ್ಯೆ ಉಲ್ಬಣಗೊಂಡಿತ್ತು. ಇದು ರಾಷ್ಟ್ರ ಮಟ್ಟದವರೆಗೂ ಹಬ್ಬಿತ್ತು. ಇದು ಬೇಕಾಗಿತ್ತೋ, ಬೇಕಾಗಿರಲಿಲ್ಲವೋ ಎನ್ನುವುದರ ಬಗ್ಗೆ ನಾನು ಚರ್ಚೆ ಮಾಡುವುದಿಲ್ಲ. ಆ ಸಮಸ್ಯೆ ಬೆಳೆದು ಅದರ ದುಷ್ಪರಿಣಾಮ ರಾಷ್ಟ್ರದ ರಾಜ್ಯದ ಎಲ್ಲೆಡೆ ಆಯಿತು. ವಿಶೇಷವಾಗಿ ಹುಬ್ಬಳ್ಳಿ, ಧಾರವಾಡದಲ್ಲಿರತಕ್ಕ ಜನತೆಗೆ ಆಗಸ್ಟ್ 15 ಮತ್ತು ಜನವರಿ 26 ದಿನಾಂಕಗಳು ಬಂದರೆ ಭಯದ ವಾತಾವರಣ ಉಂಟಾಗುತ್ತಿತ್ತು. ಹುಬ್ಬಳ್ಳಿ, ಧಾರವಾಡ ನಗರಗಳ ಮೂಲಕ

ಹಾದು ಹೋಗತಕ್ಕಂತಹ ಜನಗಳಿಗೂ ಒಂದು ಭಯದ ದಿನವಾಗಿ ಪರಿವರ್ತನೆ ಆಗಿತ್ತು. ಕಳೆದ ಹಲವಾರು ವರ್ಷಗಳಲ್ಲಿ ನಾವು ಇದನ್ನು ನೋಡಿದ್ದೇವೆ.

5.40 ಪಿ.ಎಂ

ಇದೊಂದು ಜಟಿಲ ಸಮಸ್ಯೆ ಆಗಿದ್ದು ಇದನ್ನು ಬಿಡಿಸುವುದಕ್ಕೆ ಸಾಧ್ಯವಿಲ್ಲ. ಕಾರಣ ಯಾರೇ ಇರಲಿ. ಒಟ್ಟಾರೆ ಇದು ಮುಗಿದು ಹೋದರೆ ಸಾಕು ಎನ್ನತಕ್ಕ ಪರಿಸ್ಥಿತಿ ಇತ್ತು. ಆಗಿನ ಸರ್ಕಾರಗಳು ಯಾವುದೇ ಇದ್ದರೂ ಕೂಡ ಅದರ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದುವೋ, ಅಥವಾ ಇಲ್ಲವೋ ಎಂಬುದಕ್ಕಿಂತ, ಅದು ಆಗಲಿಲ್ಲ, ಅದರಿಂದಾಗತಕ್ಕ ದೊಡ್ಡ ಅನಾಹುತ, ನಾಲ್ಕಾರು ಜನರು ಅಮಾಯಕರು ಸಂಕಟಕ್ಕೆ ಸಿಕ್ಕಿ, ತೊಂದರೆಯನ್ನು ಅನುಭವಿಸಿದ್ದನ್ನು ನಾವು ನೋಡಿದ್ದೇವೆ. ಅವತ್ತು ಒಳಗಡೆ ಇದ್ದವರು ಹೊರಗಡೆಗೆ ಹೋಗುವಂತಿರಲಿಲ್ಲ, ಹೊರಗಡೆ ಇದ್ದವರು ಒಳಗಡೆ ಬರುವಂತಿರಲಿಲ್ಲ. ದೂರದೂರದ ಪ್ರದೇಶದಿಂದ ಬಸ್ಸುಗಳಲ್ಲಿ ಬಂದವರು ಬಸ್ ಸ್ಟ್ಯಾಂಡ್, ರೈಲ್ವೆ ಸ್ಟೇಷನ್‌ಗಳಿಂದ ಪೊಲೀಸರು ತಾತ್ಕಾಲಿಕವಾಗಿ ಒದಗಿಸಿದ ವಾಹನಗಳಲ್ಲಿ ತಮ್ಮ ತಮ್ಮ ಮನೆಗಳಿಗೆ ಹೋದುದನ್ನು ನೋಡಿದ್ದೇವೆ. ಆಗಿನ ರಾಜಕೀಯ ಪರಿಸ್ಥಿತಿ ಪಲ್ವೈರಸೇಷನ್ ಏನಿತ್ತು ಅದನ್ನು ಯಾವರೀತಿ ಬಿಡಿಸಬೇಕೆಂದು ಸರ್ಕಾರ ಯೋಚಿಸುತ್ತಿದೆ. ಅಲ್ಪಸಂಖ್ಯಾತರ ಭಾವನೆಗಳನ್ನು ಹತ್ತಿಕ್ಕಬಾರದು, ಅದೇ ರೀತಿ ಬೇರೆ ಜನರ ಭಾವನೆಗಳನ್ನು ನಿವಾರಿಸಬೇಕೆಂದು ಏನು ಸಂಧಿಗ್ಧ ಪರಿಸ್ಥಿತಿ ಇತ್ತು. ಅವತ್ತಿನ ಸರ್ಕಾರ ಏನು ಮಾಡಿರಲಿಲ್ಲ. ಯಾರು ಈ ಕೆಲಸವನ್ನು ಮಾಡುವುದಕ್ಕೆ ಆಗಿರಲಿಲ್ಲ, ಯಾರು ಈ ಸಮಸ್ಯೆಯನ್ನು ಬಿಡಿಸುವುದಕ್ಕೆ ಹೋಗಿರಲಿಲ್ಲವೋ ಈ ಸಮಸ್ಯೆಯ ಸೃಷ್ಟಿಗೆ ಕಾರಣರಾಗಿದ್ದರೋ ಅಂಥ ಈ ಸಮಸ್ಯೆಯನ್ನು ಈ ಸರ್ಕಾರ ಪರಿಹಾರ ರಾಜಕೀಯ ಪಕ್ಷಗಳು ಎಂದರೆ ಇದ್ದಿದ್ದೇ ಬಿಡಿ. ಅದರ ಕ್ರೆಡಿಟ್‌ನ್ನು ಜನತಾ ದಳದವರು ತೆಗೆದುಕೊಂಡರೋ, ಅಥವಾ ಬಿ.ಜೆ.ಪಿ. ಯವರು ತೆಗೆದುಕೊಂಡರೋ ಅಥವಾ ಕಾಂಗ್ರೆಸ್‌ನವರು ತೆಗೆದುಕೊಂಡರೋ ಅಥವಾ ಬೇರೆ ಇನ್ನಾವ ಪಕ್ಷದವರು ತೆಗೆದುಕೊಂಡರೋ ಎಂಬುದಕ್ಕಿಂತ ಆ ಭಾಗದ ಜನರ ದೃಷ್ಟಿಯಿಂದ ಒಂದು ದೊಡ್ಡ ಸಾಧನೆಯನ್ನು ಈ ಸರ್ಕಾರ ಮಾಡಿದೆ. ಆ ಭಯದ ವಾತಾವರಣ ಮೋಡಿದಂತೆ ಏನು ಕವಿದಿತ್ತೋ ಅದನ್ನು ದೂರ ಮಾಡುವುದಕ್ಕೆ ಮಾಡಿದ ಪ್ರಯತ್ನ ಒಂದು ಹೆಗ್ಗಳಿಕೆಯಾಗಿದೆ. ಈ ರಾಜ್ಯಪಾಲರ ಭಾಷಣದಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ ಅದು ಅತ್ಯಂತ ಸೂಕ್ತವಾದುದೆಂದು ನಾನು ಭಾವಿಸುತ್ತೇನೆ.

ಇನ್ನು ಅಲ್ಲಿ ಪರಿಸ್ಥಿತಿ ಏನು ಉತ್ಕಟ ಮಟ್ಟಕ್ಕೆ ಮುಟ್ಟಿತ್ತು, ಬೇರೆ ಬೇರೆ ಸಮಾಜದವರು ಪರಸ್ಪರ ಪ್ರೀತಿ ವಿಶ್ವಾಸಗಳಿಂದ ನೋಡುವುದಕ್ಕೆ ಸಾಧ್ಯವೇ ಇಲ್ಲವೇನೋ ಎನ್ನತಕ್ಕ ಪರಿಸ್ಥಿತಿ ಇತ್ತು. ಅನೇಕ ಅಂದರೆ ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿರುವ ಹೋಳಿ ಹಬ್ಬದ ಆಚರಣೆಯಲ್ಲಿ ಯಾರೋ ಒಬ್ಬ ವ್ಯಕ್ತಿ ಹಿಂದಿ ಮಾತನಾಡಿದ ಎಂದು ಒಂದು ಕೋಮಿನವರು, ಅಥವಾ ಇನ್ನಾರೋ ಕೋಮಿನವರು ಗಡ್ಡ ಬಿಟ್ಟಿದ್ದ ಎಂದು ಮತ್ತೊಂದು ಕೋಮಿನವರು ಹೀಗೆ ಒಬ್ಬರನ್ನೊಬ್ಬರು ಇರಿದುಕೊಂಡು ಅವರು ಇಷ್ಟು ಜನರನ್ನು ಕೊಂದಿದ್ದಾರೆ, ಅದೇ ರೀತಿ ನಾವೂ ಇಷ್ಟು ಜನರನ್ನು ಕೊಲ್ಲಬೇಕು ಎಂದು ಕೊಂದಿದ್ದಾರೆ. ಆ ಸಮಸ್ಯೆಯನ್ನು ಬಿಡಿಸುವುದಕ್ಕೆ ಇದೇ ಪೊಲೀಸ್ ಇಲಾಖೆ, ಅವತ್ತಿನ ಮುಖ್ಯಮಂತ್ರಿಗಳು, ನಮ್ಮ ಪಕ್ಷದ ಅಧ್ಯಕ್ಷರು, ವಿರೋಧ ಪಕ್ಷದ ನಾಯಕರು ಎಲ್ಲರೂ ಪ್ರಯತ್ನ ಮಾಡಿದರೂ ಈ ಒಂದು ಸಣ್ಣ ಘಟನೆಯನ್ನು ನಡೆಯುವುದನ್ನು ತಪ್ಪಿಸುವುದಕ್ಕೆ ಆಗಲಿಲ್ಲ. ಅಲ್ಲಿನ ಪರಿಸ್ಥಿತಿ ಏನಿದೆ ಅದರ ಹಿನ್ನೆಲೆಯಲ್ಲಿ ಕೋಮು ಭಾವನೆ ಬರದಂತೆ ತಡೆಗಟ್ಟುವ ವ್ಯವಸ್ಥೆ, ಆ ಮನೋಭಾವನೆಯನ್ನು ಮೆಟ್ಟಿನಿಲುವಂಥ ವ್ಯವಸ್ಥೆಯನ್ನು ಮಾಡಬೇಕಾಗಿರುವುದು ಅತ್ಯಂತ ಅಗತ್ಯವೆಂದು ಹೇಳಬಯಸುತ್ತೇನೆ. ಇದನ್ನು ನಾವು ತಡೆಯದೇ ಹೋದರರೆ ಉತ್ತರ

ಭಾರತದ ಕಡೆಗಳಲ್ಲಿ ನಡೆಯುತ್ತಿರುವುದನ್ನು ನಾವು ಇಲ್ಲೂ ಕಾಣಬೇಕಾಗಬಹುದು. ಅಂಥದ್ದು ಇಲ್ಲಿ ಆಗಬಾರದು.

ಇನ್ನು ಜಿಲ್ಲಾ ಪಂಚಾಯಿತಿಗಳ ಬಗ್ಗೆ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ತಮಗೆ ಗೊತ್ತಿದೆ, ಜಿಲ್ಲಾ ಪಂಚಾಯಿತಿ ವ್ಯವಸ್ಥೆ ವಿಕೇಂದ್ರೀಕರಣ ವ್ಯವಸ್ಥೆ. ಮಾನ್ಯ ದಿವಂಗತ ನಜೀರ್ ಸಾಬ್‌ರವರು ಹಿಂದೆ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದಾಗ, ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ವ್ಯವಸ್ಥೆ ವಿಕೇಂದ್ರೀಕರಣದ ಬಗ್ಗೆ ಒಂದು ಕಲ್ಪನೆ ಬಗ್ಗೆ ಅವರು ಕನಸ್ಸನ್ನು ಕಂಡಿದ್ದರು. ತಮಗೂ ಗೊತ್ತಿದೆ. ಇದಕ್ಕಾಗಿ ಜಾಯಿಂಟ್ ಸೆಲೆಕ್ಟ್ ಕಮಿಟಿಯೂ ಕೂಡ ರಚನೆಯಾಗಿತ್ತು, ಅದರಲ್ಲಿ ಅನೇಕ ಹಿರಿಯ ಸದಸ್ಯರು ಸದಸ್ಯರಾಗಿದ್ದಿರಿ. ಇಡೀ ದೇಶದಲ್ಲೇ ಅತ್ಯಂತ ಮಾದರಿಯಾದ ರೀತಿಯಲ್ಲಿ ವಿಕೇಂದ್ರೀಕರಣ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೇ ವ್ಯವಸ್ಥೆ ಆಯಿತು. ಪಶ್ಚಿಮ ಬಂಗಾಳ ಮತ್ತು ಕೇರಳಗಳನ್ನು ಬಿಟ್ಟರೆ ಎಲ್ಲೂ ಕಾನೂನಾಗಿ ಇದು ಜಾರಿಗೆ ಬಂದಿರಲಿಲ್ಲ. ಅದಕ್ಕೆ ಬೇರೆ ಬೇರೆ ಕಾರಣಗಳು ಇರಬಹುದು. ಅದಕ್ಕೆ ತಾಂತ್ರಿಕ ಕಾರಣ ಇರಬಹುದು, ಅದು ಮಾನ್ಯ ರಾಷ್ಟ್ರಾಧ್ಯಕ್ಷರ ಅಂಕಿತಕ್ಕೆ ಹೋಗಬೇಕಾದ ಪರಿಸ್ಥಿತಿ ಇದ್ದಿರಬಹುದು. ಆದರೆ ಎಕ್ಸಿಕ್ಯುಟಿವ್ ಆರ್ಡರ್ ಮೇಲೆ ಅದು ನಮ್ಮಲ್ಲಿ ನಡೆಯುತ್ತಿತ್ತು. ಸರ್ಕಾರದ ಮರ್ಜಿಯ ಮೇಲೆ ಅದು ಅಸ್ತಿತ್ವದಲ್ಲಿ ಇತ್ತು. ರಾಜ್ಯದಲ್ಲಿ ಅತ್ಯಂತ ಮಾದರಿಯಾದ ವ್ಯವಸ್ಥೆಯನ್ನು ತರುವುದಕ್ಕೆ ಸಾಧ್ಯವಾಯಿತು.

ಅಂಥ ವ್ಯವಸ್ಥೆಯನ್ನು ಮತ್ತೆ ಬದಲಾಯಿತಿ ಈಗ ಆ ವ್ಯವಸ್ಥೆಗೆ ಹೋಗುವುದು ಬೇಡ ಹೆಗ್ಗಳಿಕೆ ಬೇಡ ಎಂದು ಹೇಳುವುದಾದರೆ ಇದು ಎಷ್ಟರಮಟ್ಟಿಗೆ ಸರಿ ಎಂದು ನಾನು ತಮ್ಮ ಮೂಲಕ ಕೇಳಬಯಸುತ್ತೇನೆ. ಹಿಂದಿನ ಸರ್ಕಾರ ಏತಕ್ಕೆ ಮುಂದಕ್ಕೆ ಹಾಕಿತ್ತು ಎಂಬುದನ್ನು ತಾವು ನೋಡಬೇಕು. ಬಹಳ ಸಣ್ಣ ಸಣ್ಣ ಕಾರಣಗಳಿಂದಾಗಿ, ಇದನ್ನು ಮುಂದಕ್ಕೆ ಹಾಕುತ್ತಾ ಬಂತು. ಸುಪ್ರೀಂ ಕೋರ್ಟ್‌ನವರು ಇವರ ಮೇಲೆ ಎಷ್ಟೇ ಒತ್ತಡ ತಂದರೂ, ಎಷ್ಟು ನೋಟೀಸನ್ನು ಕೊಟ್ಟರೂ, ಎಷ್ಟೇ ತಾಕೀತನ್ನು ಮಾಡಿದರೂ ಇದನ್ನು ಮುಂದಕ್ಕೆ ಹಾಕುತ್ತಾ ಬಂದಿತ್ತು. ಇವತ್ತು ಅದು ಒಂದು ಅಂತಿಮ ರೂಪಕ್ಕೆ ಬಂದಿದೆ. ಹೊಸ ಒಂದು ಸಾಮಾಜಿಕ ನ್ಯಾಯವನ್ನು ಅಳವಡಿಸಿ, ಯಾರು ಇದನ್ನು ಕನ್ಸೀವ್ ಮಾಡಿ ತರುವುದಕ್ಕೆ ಪ್ರಯತ್ನ ಮಾಡಿದ್ದರೋ ಅವರ ಕಲ್ಪನೆಯನ್ನೂ ಮೀರಿ, ಅಷ್ಟೇ ಅಲ್ಲ ಎಲ್ಲರ ಕಲ್ಪನೆಯನ್ನೂ ಮೀರಿ ಇವತ್ತು ಆ ಚುನಾವಣೆಗಳು ನಡೆದಿವೆ. ಕೇವಲ ಚುನಾವಣೆ ನಡೆದಿರುವುದು ಅಷ್ಟೇ ಅಲ್ಲ, ಅದಕ್ಕೆ ಅಕೌಂಟಬಿಲಿಟಿಯೂ ಕೂಡ ಇದೆ. ಇವತ್ತು ಕೆಲವು ಮಾನ್ಯ ಹಿರಿಯ ಸದಸ್ಯರು ಮಾತನಾಡುವಾಗ ಹೇಳಿದರು. ವಿವಿಧ ವರ್ಗಗಳು ಅಂದರೆ ಯಾರಿಗೆ ರಾಜಕೀಯವಾಗಿ ಅಧಿಕಾರವನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲವೋ ಅಂಥವರೂ ಕೂಡ ಜಿಲ್ಲಾಪಂಚಾಯಿತಿಗಳಲ್ಲಿ ಅಧ್ಯಕ್ಷರಾಗುವುದಕ್ಕೆ ಅವಕಾಶವಿದೆ, ಸದಸ್ಯರಾಗುವುದಕ್ಕೋ ಸಾಧ್ಯತೆ ಇದೆ. ಈ ದೇಶದ ಈ ರಾಜ್ಯದ ರಾಜಕೀಯದಲ್ಲಿ ತಮ್ಮ ಪಾಲನ್ನು ಪಡೆಯುವುದಕ್ಕೆ ಇದರಲ್ಲಿ ಅವಕಾಶವಿದೆ.

ಮಾನ್ಯ ಅಧ್ಯಕ್ಷರೆ, ದಿವಂಗತ ಮಾನ್ಯ ನಜೀರ್ ಸಾಬ್‌ರವರು ನಮಗೆ, ನಿಮಗೆ ಎಲ್ಲರಿಗೂ ಅವರು ಬಹಳ ಒಳ್ಳೆಯ ಸ್ನೇಹಿತರು. ಅವರು ಯಾವ ರೀತಿ ಈ ಕಾನೂನನ್ನು ಮಾಡಿದರೆಂದು ತಮಗೆ ನೆನಪಿರಬಹುದು. ಈ ಕಾನೂನಿನ ಮೂಲಕ ತಮ್ಮ ಜೀವನದ ಕೊನೆಯ ಉದ್ದೇಶವನ್ನು ಈಡೇರಿಸುತ್ತಿದ್ದೇನೆ ಎಂಬ ಮಟ್ಟಕ್ಕೆ ಅವರು ತರುವುದಕ್ಕೆ ಪ್ರಯತ್ನ ಮಾಡಿದರು. ಕೇವಲ ಅಷ್ಟೇ ಅಲ್ಲ. ದೇಶಾದ್ಯಂತ ಅತ್ಯಂತ ಅನೇಕ ಮೇಧಾವಿಗಳನ್ನು, ಮಾನ್ಯ ಎಸ್.ಕೆ.ದೇ. ಅವರಂಥವರನ್ನು ಭೇಟಿ ಮಾಡಿ ಅವರನ್ನು ಇಲ್ಲಿಗೆ ಕರೆಸಿಕೊಂಡು ಪ್ರತಿಯೊಂದು ವಿಷಯದ ಮೇಲೆ ಪ್ರತಿಯೊಂದು ಪ್ರೊವಿಷನ್ ಮೇಲೆ, ಸಣ್ಣ ಸಣ್ಣ ಅಧಿಕಾರಿಗಳ ಜೊತೆಯಲ್ಲಿ ಸಹ ಚರ್ಚೆ ಮಾಡಿ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ಮಂಡಲ ಪಂಚಾಯಿ

ಕಾರ್ಯದರ್ಶಿ ಯಾರು ಆಗಬೇಕೆಂಬ ಬಗ್ಗೆ ಒಂದು ಡಾಕ್ಯುಮೆಂಟ್‌ನ್ನೂ ತಯಾರು ಮಾಡಿದ್ದರು. ಯಾರ್ಯಾರಿಗೆ ಏನೇನು ಅಧಿಕಾರಗಳನ್ನು ಕೊಡಬೇಕು, ಯಾರ್ಯಾರಿಗೆ ಏನೇನು ಜವಾಬ್ದಾರಿಯನ್ನು ನಿರ್ವಹಿಸುವ ಸಾಮರ್ಥ್ಯವಿದೆ, ಯಾರನ್ನು ಇಟ್ಟರೆ ಏನಾಗುತ್ತದೆ, ಅವರಿಗೆ ಪೂರಕವಾಗಿ ಯಾರ್ಯಾರು ಬೇಕು ಎನ್ನುವಂಥ ಪ್ರತಿಯೊಂದು ಅಂಶವನ್ನೂ ಅವರು ಗಮನಿಸಿದ್ದರು ಎಂಬುದು ತಮಗೆ ಗೊತ್ತಿದೆ.

ಅಷ್ಟು ವ್ಯವಸ್ಥಿತ ರೂಪದಿಂದ ಅದನ್ನು ಜಾರಿಗೆ ತರುವುದಕ್ಕೆ ಅವರು ಪ್ರಯತ್ನ ಮಾಡಿದ್ದರು. ಆದರೆ ದುರ್ದೈವದಿಂದ ಅದು ಪೂರ್ಣ ಜಾರಿಗೆ ಬರಲಿಲ್ಲ. ನಾವು ಪದೇ ಪದೇ ಹೇಳುತ್ತಿದ್ದೇವೆ? ಒಂದು ಫೈನಾನ್ಸ್ ಕಮಿಷನ್‌ನ್ನು ಮಾಡಬೇಕು, ಅದು ಪ್ರತಿಯೊಂದನ್ನೂ ರಿವ್ಯೂ ಮಾಡುವಂತೆ ಇರಬೇಕು, ಎಂಬುದರ ಜೊತೆಗೆ ಪ್ರತಿಯೊಂದು ಮಂಡಲಕ್ಕೂ ಹೋಗಿ ನೋಡಿಕೊಂಡು ಬರಬೇಕೆಂಬ ಆಸೆ ಅವರಿಗಿತ್ತು. ಆದರೆ ದುರ್ದೈವದಿಂದ ದೇವರು ಅವರಿಗೆ ಆಯುಷ್ಯವನ್ನು ಕೊಡಲಿಲ್ಲ. ಅವರು ವಿಕೇಂದ್ರೀಕರಣ ವ್ಯವಸ್ಥೆಯನ್ನು ಬಿಟ್ಟುಹೋಗಿರುವುದು ತಮಗೆ ಗೊತ್ತಿದೆ. ಇವತ್ತು ಉದಾಹರಣೆಗೆ ಹೇಳುವುದಾದರೆ, ಯಾವುದೇ ಒಂದು ಸಂಸ್ಥೆ ಬೆಳೆಯಬೇಕಾದರೆ ಒಂದೆರಡು ವರ್ಷಗಳಲ್ಲಿ ಬೆಳೆಯುವುದಿಲ್ಲ. ಈ ಸಂಸ್ಥೆ ಹುಟ್ಟಿ ನೂರಾರು ವರ್ಷವಾಗಿತ್ತು. ಸ್ವಾತಂತ್ರ್ಯಪೂರ್ವದಿಂದ ಇದು ಇತ್ತು. ಇವತ್ತು ನಮ್ಮ ಈ ವೇದಿಕೆಯಲ್ಲಿ ಭಾಷಣ ಮಾಡಬೇಕಾದರೆ, ತಾವು ಆ ಅಧ್ಯಕ್ಷ ಪೀಠದಲ್ಲಿ ಕೂತುಕೊಳ್ಳಬೇಕಾದರೆ ವ್ಯವಸ್ಥಿತವಾಗಿ ಬರಬೇಕಾದರೆ ಇಷ್ಟು ವರ್ಷಗಳು ಬೇಕಾಯಿತು. ತಮಗೆ ಗೊತ್ತಿದೆ, ಯಾವ ರೀತಿ ಈ ಲೆಜಿಸ್ಲೇಚರ್ ಕೆಲಸ ಮಾಡುತ್ತಿವೆ, ಮಂಡಲ್ ಪಂಚಾಯಿತಿಗಳು ಕೆಲಸ ಮಾಡುತ್ತಿದ್ದುವು ಎಂಬುದು. ಸುಮಾರು 20-25 ಸಾವಿರ ಸಣ್ಣ ಸಣ್ಣ ಹ್ಯಾಮ್ಲೆಟ್ಸ್‌ಗಳಲ್ಲಿ ಬೀದಿ ದೀಪಗಳನ್ನು ಹಾಕುವುದಕ್ಕೆ ಸಾಧ್ಯ ಆಗಿರಲಿಲ್ಲ. ಕುಡಿಯುವ ನೀರನ್ನು ಕೊಡುವುದಕ್ಕೆ ಸಾಧ್ಯವಾಗಿರಲಿಲ್ಲ, ರಸ್ತೆಗಳನ್ನು ಮಾಡಿ ಕೊಡುವುದಕ್ಕೆ ಸಾಧ್ಯವಾಗಿರಲಿಲ್ಲ. ಅಂಥ ಕೆಲಸವನ್ನು ಕಳೆದ 2-3 ವರ್ಷಗಳ ಅವಧಿಯಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಮಾಡುವುದಕ್ಕೆ ಸಾಧ್ಯವಾಯಿತು.

ಈ ಒಂದು ಯಂತ್ರವನ್ನು ಇನ್ನೂ ಹೆಚ್ಚು ಬಲಪಡಿಸಲು ಅದನ್ನು ತಿರುಚಿ ರಾಜಕೀಯ ಕಾರಣಕ್ಕೆ ಬಳಸುತ್ತಿದ್ದಾರೆ. ಇದನ್ನು ಸರಿಪಡಿಸಬೇಕೆಂಬ ಉದ್ದೇಶದಿಂದ ಇದಕ್ಕೆ ಬೆಂಬಲ ಬೇಕು. ಅಷ್ಟೇ ಅಲ್ಲ, ಇದಕ್ಕೆ ಪೂರಕವಾಗಿ ಏನು ಆಯೋಗ ರಚನೆ ಮಾಡಿದ್ದಾರೆ ಅದರ ನೇತೃತ್ವವನ್ನು ಕೃಷ್ಣಸ್ವಾಮಿಯವರು ವಹಿಸಿದ್ದಾರೆ. ಅವರನ್ನು ಗ್ಯಾಟ್ ಬಗ್ಗೆ ಭಾಷಣ ಮಾಡುವುದಕ್ಕೆ ಕರೆದಿದ್ದೆವು. ಈ ಸಂಸ್ಥೆಗಳು ಗ್ರಾಮೀಣ ಮಟ್ಟದಲ್ಲಿ ಕೆಲಸ ಮಾಡಬೇಕಾಗಿರುತ್ತದೆ. ಅವರು ರಿಸರ್ವ್ ಬ್ಯಾಂಕಿನಲ್ಲಿ ಒಬ್ಬ ಅಧಿಕಾರಿಗಳು ಇರಬಹುದು, ಮತ್ತೊಂದು ಆಗಿರಬಹುದು, ಆದರೆ ಎಷ್ಟರಮಟ್ಟಿಗೆ ಈ ಸಂಸ್ಥೆಗಳಲ್ಲಿ ಪ್ರಾಯೋಗಿಕವಾಗಿ ಕೆಲಸ ಮಾಡುವ ಬಗ್ಗೆ ಯಾವ ಮಟ್ಟಿಗೆ ಕೊಡಬಹುದು? ಅವರಿಂದ ಎಷ್ಟರಮಟ್ಟಿಗೆ ಈ ಸಮಿತಿ ಆಗಬಹುದೆಂಬುದನ್ನು ನೋಡಬೇಕಾದುದು ಅವಶ್ಯಕವಿದೆ. ಅದಕ್ಕೆ ಅಗತ್ಯವಾಗಿ ಏನೇನು ಬದಲಾವಣೆಗಳು ಬೇಕು ಅದು ಇವರಿಂದ ಆಗಲಿ ಎಂದು ನಾನು ಹಾರೈಸುತ್ತೇನೆ. ಇನ್ನು ನಾನು ಮುಖ್ಯವಾಗಿ ಕೃಷಿ ಇಲಾಖೆ ಬಗ್ಗೆ ಪ್ರಸ್ತಾಪ ಮಾಡಬಯಸುತ್ತೇನೆ. ಇದನ್ನು ಯಾರು ತಪ್ಪಾಗಿ ಭಾವಿಸಬಾರದು. ಇದು ಒಂದು ರೀತಿಯಿಂದ ಬಿಳಿ ಆನೆ ಇದ್ದ ಹಾಗೆ, ಇದರಿಂದ ರೈತರಿಗೆ ಏನೂ ಪ್ರಯೋಜನವಿಲ್ಲ. ಯಾರಿಗೂ ಪ್ರಯೋಜನ ಇಲ್ಲವೆಂಬುದು ಅದು ವಾಸ್ತವಿಕ ಸತ್ಯ. ಬರೀ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರದಿಂದ ಬರುವಂತಹ ಸಬ್ಸಿಡಿ ಎಷ್ಟರಮಟ್ಟಿಗೆ ರೈತರಿಗೆ ಮುಟ್ಟುತ್ತದೋ ಗೊತ್ತಿಲ್ಲ. ಅದನ್ನು ಕೊಡತಕ್ಕ ವ್ಯವಸ್ಥೆಯಲ್ಲಿ ಅಶಾಸ್ತ್ರೀಯ ವ್ಯವಸ್ಥೆ ಇದೆ ಎಂದರೆ ತಪ್ಪಾಗುವುದಿಲ್ಲ.

ಯಾವುದೋ ಒಂದು ಕಾರ್ಯಕ್ರಮ ಬಂತು ಎಂದು ತಾಲ್ಲೂಕಿಗೆ ಒಬ್ಬ ಸೀನಿಯರ್ ಗೆಜೆಟ್ಟೆಡ್ ಆಫೀಸರ್, ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್, ಅವರ ಕೈಕೆಳಗೆ ಅಗ್ರಿಕಲ್ಚರಲ್ ಆಫೀಸರ್ಸ್, ಅಸಿಸ್ಟೆಂಟ್ಸ್ ಅಗ್ರಿಕಲ್ಚರಲ್ ಆಫೀಸರ್ಸ್ ಗ್ರಾಮಸೇವಕರು ಎಲ್ಲಾ ಸೇರಿ ಜಾಸ್ತಿ ಸಿಬ್ಬಂದಿಯನ್ನು ಒದಗಿಸುತ್ತಿದ್ದೀರಿ. ಆದರೆ ಪ್ರಯೋಜನ ಮಾತ್ರ ಬಹಳ ಶೂನ್ಯವೆಂದರೆ ತಪ್ಪಾಗುವುದಿಲ್ಲ. ಬಹುಶಃ ಅವರಿಗೆ ಮಾರ್ಗದರ್ಶನ ಇರಲಿಕ್ಕಿಲ್ಲ. ಮಾಡಬೇಕಾದ ಕಾರ್ಯಕ್ರಮದ ಬಗ್ಗೆ ಸ್ಪಷ್ಟವಾದ ಕಲ್ಪನೆ ಇರಲಿಕ್ಕಿಲ್ಲ. ಅಥವಾ ಬೇಕಾದ ಹಣಕಾಸಿನ ಬೆಂಬಲ ಇಲ್ಲವೆಂದು ನಾನು ತಿಳಿದುಕೊಳ್ಳುವುದಿಲ್ಲ. ಏಕೆಂದರೆ ಬಜೆಟ್‌ನಲ್ಲಿ ಬರುವಂತಹ ಅನುದಾನಗಳನ್ನು ಸೆಂಟ್ರಲ್ ಸ್ಪಾನ್ಸರ್ ಸ್ಕೀಂನಿಂದ ಬರತಕ್ಕ ಐದಾರು ಕೋಟಿ ರೂಪಾಯಿಗಳ ಹಣವನ್ನು ಈ ಇಲಾಖೆಗೆ ಖರ್ಚು ಮಾಡಲಾಗುತ್ತದೆ. ಇದರ ಪರಿಣಾಮ ಏನು? ರೈತರಿಗೆ ಏನಾದರೂ ಬೇಕಾದರೆ ಅವರೇ ಪಡೆದುಕೊಂಡು ಬರಬೇಕೇ ಹೊರತು ಇವರಿಂದ ಒಂದು ಕಾಸೀನ ಪ್ರಯೋಜನ ಕೂಡ ಆಗುವುದಿಲ್ಲ. ಈ ಇಲಾಖೆಯನ್ನು ವಾಸ್ತವಿಕವಾಗಿ, ಶಾಸ್ತ್ರೀಯವಾಗಿ ಪುನರ್ ಸಂಘಟನೆ ಮಾಡುವುದು ಅಗತ್ಯ ಎಂದು ಹೇಳಬಯಸುತ್ತೇನೆ. ಇದರ ವಿಸ್ತರಣೆಯಿಂದ ರೈತರಿಗೆ ಏನು ಲಾಭವಾಗುತ್ತದೆ? ಆದ್ದರಿಂದ ಆ ಕೆಲಸ ಆಗಬೇಕಾದರೆ ಇದರ ಪುನರ್‌ಸಂಘಟನೆ ಆಗಬೇಕು. ಇದು ಹೊಸ ರೀತಿಯಲ್ಲಿ ಬರುವಂತೆ ಆಗಬೇಕೆಂದು ಹೇಳುತ್ತೇನೆ. ಒಂದು ರೀತಿಯಲ್ಲಿ ಪ್ರಾಮಾಣಿಕರು, ಹಿಡಿದ ಕೆಲಸ ಮಾಡುವುದು ಬೈರೇಗೌಡರು, ಅವರು ಇದರ ನೇತೃತ್ವವನ್ನು ವಹಿಸಿದ್ದಾರೆ.

ಅವರು ಮಾಡಲಿ, ಮಾಡಲಿಕ್ಕೆ ಸಮಯ ಇಲ್ಲ. ಪ್ರಾಯೋಗಿಕವಾಗಿ ಏನಾಗಿದೆ ಎಂದು ನಮಗೂ ಗೊತ್ತಿಲ್ಲ. ಅನೇಕ ಭಾಗಗಳಲ್ಲಿ ಅಲ್ಪಸಲ್ಪ ಕೆಲಸ ನಡೆಯುತ್ತಿದ್ದರೂ ಸಹ ಅದು ಬೈರೇಗೌಡರ ಹೆದರಿಕೆಯಿಂದ ನಿಂತುಹೋಗಿದೆ. ಎಲ್ಲಿ ಏನಾಗುತ್ತದೋ, ಎಲ್ಲಿ ಮನೆಗೆ ಹೋಗುತ್ತೇವೆ ಎಂದು ಇಡೀ ಇಲಾಖೆಯೇ ಆ ರೀತಿ ಆಗಿದೆ. ಅವರು ಮಾಡುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಬಹಳ ವ್ಯವಸ್ಥಿತವಾಗಿ ಹೊಸ ವಾತಾವರಣ ನಿರ್ಮಾಣ ಮಾಡಿ ಅವರ ನೇತೃತ್ವದಲ್ಲಿ ಈ ಕೆಲಸ ಮುಂದುವರಿಯಲಿ ಎಂದು ನಾನು ಆಶಿಸುತ್ತೇನೆ. ಇನ್ನು ಕೃಷಿ ವಿಶ್ವವಿದ್ಯಾನಿಲಯದ ಬಗ್ಗೆ ಕೆಲವು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಕೃಷಿ ವಿಶ್ವವಿದ್ಯಾನಿಲಯ 8-9 ವರ್ಷಗಳ ಹಿಂದೆ ಎಂದಾಗಿ ಧಾರವಾಡದಲ್ಲಿ ಒಂದು, ಬೆಂಗಳೂರಿನಲ್ಲಿ ಒಂದು ನಿರ್ಮಾಣ ಆಯಿತು. ಕೃಷಿ ವಿಶ್ವವಿದ್ಯಾನಿಲಯ ಎಷ್ಟು ಪ್ರಾಮುಖ್ಯ? ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದಕ್ಕೂ, ನಾವು ಹೈಬ್ರೀಡ್ ಬಳಸುತ್ತೇವೆ, ನಾವು ಪರಾವಲಂಬಿಗಳಾಗಿದ್ದೇವೆ, ನಾವು ತಯಾರಿಸಿದ ಬೀಜಗಳನ್ನು ಹಾಕುವುದಕ್ಕೆ ನಾವು ತಯಾರಿಲ್ಲ. ನಾವು ತಯಾರಿಸಿದ ಗೊಬ್ಬರವನ್ನು ಉಪಯೋಗಿಸಿ ಬೆಳೆ ಬೆಳೆಯುವುದಕ್ಕೆ ನಾವು ತಯಾರಿಲ್ಲ. ಪುರಾತನ ಕಾಲದಿಂದ ಬಂದಂತಹ ಆಯಿಲ್, ಬೇವಿನ ಎಣ್ಣೆ ಹೊಡೆದು ಹುಳುಗಳನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಇದೆಲ್ಲಾ ನೋಡಿದರೆ ಇವತ್ತು ಬಹಳ ಪೈಪೋಟಿ ಇದೆ.

ನಾವು ಬದಲಾವಣೆ ಮಾಡದಿದ್ದರೆ ನಾವು ಇನ್‌ವೆಸ್ಟ್‌ಮೆಂಟ್ ಮಾಡದಿದ್ದರೆ ನಾವು ಬಂಡವಾಳ ಹೂಡದಿದ್ದರೆ ನಾವು ಬದುಕುವುದಕ್ಕೆ ಸಾಧ್ಯವಿಲ್ಲ. ಬರೀ ಯಾವುದೋ ಓಬಿರಾಯನ ಕಾಲದ ಸಂಶೋಧನೆಯಿಂದ ಹೊಸ ತಳಿಯಿಂದ ನಾವು ಬಹಳಷ್ಟು ಸಾಧನೆ ಮಾಡುತ್ತೇವೆ, ಯಶಸ್ಸು ಕಾಣುತ್ತೇವೆ ನಾವು ಇದರಲ್ಲಿ ಲಾಭ ಮಾಡಿಕೊಳ್ಳುತ್ತೇವೆ ಎಂದರೆ ಸಾಧ್ಯವಿಲ್ಲ. ಇದಕ್ಕೆ ಬೇಕಾದುದು ನವೀನ ರೀತಿಯ ಸಂಶೋಧನೆ. ಕಾಲಕಾಲಕ್ಕೆ ತಕ್ಕಂತೆ ಎಲ್ಲಾ ರೀತಿಯ ಹೊಸ ಹೊಸ ತಳಿಗಳನ್ನು ಮಾಡದಿದ್ದರೆ ಉಳಿಗಾಲ ಇಲ್ಲವೆಂದು ಸೂಕ್ಷ್ಮವಾಗಿ ಹೇಳಬಯಸುತ್ತೇನೆ. ಮಲ್ಟಿ ನ್ಯಾಷನಲ್ಸ್ ಮೇಲೆ ಬಹು ರಾಷ್ಟ್ರೀಯ ಕಂಪನಿಗಳ ಮೇಲೆ ನಾವು ಅಪೇಕ್ಷೆ ಮಾಡುವುದು ತಪ್ಪಲ್ಲವೆಂದು ಹೇಳುತ್ತೇನೆ. ಅವರು ನೂರಾರು ಕೋಟಿ ರೂಪಾಯಿಗಳ ಬಂಡವಾಳ ಹಾಕಿ

ಸಂಶೋಧನೆ ಮಾಡುವುದು ಒಳ್ಳೆಯ ತಳಿಗಳು ಬರಲಿ ಎಂದು. ನಾವು ವಿಶ್ವವಿದ್ಯಾನಿಲಯಗಳಲ್ಲಿ ಏನು ಮಾಡುತ್ತಿದ್ದೇವೆ ಎಂದರೆ ಬಹಳಷ್ಟು ಕಡಿಮೆ ರೀತಿಯಲ್ಲಿ ಅನುದಾನ ಕೊಡುತ್ತಿದ್ದೇವೆ. ಅಲ್ಲಿ ಯಾವುದೇ ಸಂಶೋಧನಾ ಕಾರ್ಯಕ್ರಮಗಳು ನಡೆಯುತ್ತಿಲ್ಲ, ಇನ್ನೂ ಓಬಿರಾಯನ ಕಾಲದಲ್ಲಿ ಇವೆ. ಏನೋ ಕೆಲಸ ಮಾಡಬೇಕು ಆ ರೀತಿ ನಡೆಸಿಕೊಂಡು ಬರುತ್ತಿದ್ದಾರೆ. ಉದಾಹರಣೆಗೆ ಹೇಳುತ್ತೇನೆ, ಇವತ್ತು ಕರ್ನಾಟಕ ಕೃಷಿ ವಿಶ್ವವಿದ್ಯಾನಿಲಯದಲ್ಲಿ 300 ಅಧ್ಯಾಪಕರುಗಳ ಹುದ್ದೆಗಳು ಖಾಲಿ ಇವೆ. ಇವನ್ನು ತುಂಬಬೇಕಾದರೆ ರಾಜ್ಯಸರ್ಕಾರ ಪಾಲು ಕೊಡುವುದಿಲ್ಲ.

ಇಂಡಿಯನ್ ಕೌನ್ಸಿಲ್ ಫಾರ್ ಅಗ್ರಿಕಲ್ಚರ್‌ಗೆ ನೂರಾರು ಕೋಟಿ ರೂಪಾಯಿಗಳನ್ನು ಸಂಶೋಧನೆಗಾಗಿ ಕೊಡುತ್ತಾರೆ. ಅದಕ್ಕೆ ಬೇಕಾದ ಸಿಬ್ಬಂದಿಯನ್ನು ಒದಗಿಸುತ್ತಾರೆ. ಅದರ ಲಾಭ ಪಡೆದುಕೊಂಡು ಸಿಬ್ಬಂದಿ ನೇಮಿಸಬೇಕಾದರೆ ಹಣಕಾಸಿನ ಬೆಂಬಲ ಕೊಡುತ್ತಾರೆ. 25-50 ಕೆಲವು ವೇಳೆ 100ಕ್ಕೆ 100 ಕೊಡುತ್ತಾರೆ. ಆದರೆ ಅವರಿಗೆ ಅದನ್ನು ಪಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಇದನ್ನು ಮಾಡದಿದ್ದರೆ ಸಂಶೋಧನೆಯನ್ನು ಮುಂದುವರಿಸಲು ಹೋದರೆ ನಮ್ಮ ಭಾಗದಲ್ಲಿರುವ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕ ಹತ್ತಿಗೆ ಹೆಚ್ಚು ಒತ್ತು ಕೊಟ್ಟು ಬೆಳೆಯುವಂತಹ ಪ್ರದೇಶ. ಬಹಳ ಹೆಚ್ಚು ಪ್ರಮಾಣದಲ್ಲಿ ಹತ್ತಿ ಬೆಳೆಯುತ್ತಾರೆ. ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಎರಡು ಡಿವಿಜನ್‌ಗಳಿವೆ. ಹೈದರಾಬಾದ್ ಕರ್ನಾಟಕ, ಗುಲ್ಬರ್ಗಾ, ಬೆಳಗಾಂ ಡಿವಿಜನ್. ಮಲೆನಾಡಿನಲ್ಲಿ ಶಿವಮೊಗ್ಗ ಮತ್ತು ಅನೇಕ ಕಡೆ ಹತ್ತಿ ಬೆಳೆಯನ್ನು ವಾಣಿಜ್ಯ ಬೆಳೆಯಾಗಿ ಬೆಳೆಯುತ್ತಾರೆ. ತಮಗೆ ಗೊತ್ತಿರಬಹುದು, ಹತ್ತಿ ಬಹಳ ದುಃಖದ ಬೆಳೆಯಾಗಿ ಪರಿವರ್ತನೆ ಆಗುತ್ತಿದೆ. ನಾವು ಬೆಳೆ ಹಾಕುತ್ತೇವೆ, ಆದರೆ ಯಾವ ರೀತಿ ಫಲ ಇರಬೇಕು ಇಳುವರಿ ಕೊಡತಕ್ಕದ್ದು ಇರಬೇಕು ಅದು ಇರುವುದಿಲ್ಲ. ಹೋದ ವರ್ಷ ಮತ್ತು ಈ ವರ್ಷ ಬೀಜಕ್ಕಾಗಿ ದೊಡ್ಡ ಹೋರಾಟ ಆದದ್ದು ನೋಡಿದ್ದೇವೆ. ಸರಿಯಾಗಿ ಬೀಜ ಮಾಡತಕ್ಕ ವ್ಯವಸ್ಥೆ ಇಲ್ಲ.

ಇದರಿಂದಾಗಿ ನಾವು ಪಡೆಯುವಂತಹ ಹತ್ತಿ ಬೀಜವನ್ನು ತೆಗೆದುಕೊಂಡು ಹೋಗಿ ಹಾಕಿದರೆ ನಾಲ್ಕಾರು ಸಾವಿರ ರೂಪಾಯಿ ಖರ್ಚು ಮಾಡಿ ಕೊನೆಗೆ ಒಂದು ಕ್ವಿಂಟಾಲ್ ಅಲ್ಲ ಕೆ.ಜಿ. ಕೂಡ ಬೆಳೆದುಕೊಂಡು ಬರಲಾರದೆ ಅನೇಕ ಜನ ರೈತರು ಸಾಲದ ಭಾರ ಹೊರಲಾರದೆ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗ ಇದೆ. ಇದನ್ನು ತಾವು ಗಮನಿಸಿದ್ದೀರೆಂದು ನಾನು ಭಾವಿಸಿದ್ದೇನೆ. ಹತ್ತಿ ಬೆಳೆ ಎಷ್ಟು ಹಿಂದೆ ಇದೆ ಎಂದರೆ 1972-73ರಲ್ಲಿ ಬಿಡುಗಡೆ ಮಾಡಿದ ವರಲಕ್ಷ್ಮಿ ಹತ್ತಿಯನ್ನು ಬಿಟ್ಟು ಬೇರೆ ಬೆಳೆ ಇವತ್ತಿನವರೆಗೂ ಬೆಳೆದಿಲ್ಲ. ಹತ್ತಿ ಬೆಳೆಯನ್ನು ಅಪ್‌ಗ್ರೇಡ್ ಮಾಡತಕ್ಕ ಕೆಲಸ ಅಲ್ಲೇ ನಿಂತು ಹೋಗಿದೆ. ಹೀಗಾಗಿ ರೈತರು ಬಹಳ ತೊಂದರೆಗೆ ಈಡಾಗುತ್ತಿದ್ದಾರೆ. ಇದರಿಂದ ಏನು ಆಗುತ್ತದೆ ಎಂದರೆ ಆ ತಳಿಗಳಿಂದ ಲಾಭ ಬರುವುದಿಲ್ಲ, ಇಳುವರಿ ಬರುವುದಿಲ್ಲ. ಹೊರ ರಾಜ್ಯಗಳಿಂದ ಗೊತ್ತಿಲ್ಲದ ಹಾಗೆ ಬೀಜಗಳನ್ನು ತಂದು, ಕಾಟನ್ ಕಂಟ್ರೋಲ್ ಆಕ್ಟ್‌ನಲ್ಲಿ ಕಂಟ್ರೋಲ್ ಮಾಡಿದರೂ ಕೂಡ ಇಲ್ಲೀಗಲ್ ಆಗಿ ತಂದು ಬೆಳೆಯುವಂತಹ ಪ್ರಯತ್ನ ಮಾಡುತ್ತಿದ್ದರು. ಇದರಿಂದಾಗಿ ಇಳುವರಿ ಹೋಗುತ್ತದೆ. ತಾವು ಕೂಡ ಹತ್ತಿ ಬೆಳೆದಿದ್ದೀರಿ. ಇವತ್ತು ಆ ಹಳೆ ಹತ್ತಿ ಬರುತ್ತಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. "ಚಿಲ್ಲಿ"ಯಾಗಿರಬಹುದು, "ಕಬ್ಬು" ಆಗಿರಬಹುದು "ರಾಗಿ" ಆಗಿರಬಹುದು, "ರೇಷ್ಮೆ" ಆಗಿರಬಹುದು ಇಂಥ ಎಲ್ಲ ಬೆಳೆಗಳ ಮೇಲೆ ಸಂಶೋಧನೆ ಆಗತಕ್ಕದ್ದು ಅಗತ್ಯ. ಇದಕ್ಕೆ ಸರ್ಕಾರದ ಬೆಂಬಲ ಬೇಕು. ಸರ್ಕಾರ ಇದಕ್ಕೆ ಬೆಂಬಲ ಕೊಡತಕ್ಕದ್ದು ಅಗತ್ಯ ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಮೂಲಕ ಹೇಳಬಯಸುತ್ತೇನೆ. ನೀರಾವರಿ ಬಗ್ಗೆ ತಾವು ಪ್ರತ್ಯೇಕವಾಗಿ ಚರ್ಚೆಯನ್ನು ಇಟ್ಟಿದ್ದೀರಿ. ನಾನು ಸಹ ಆ ವಿಶೇಷವಾದ ಚರ್ಚೆಯಲ್ಲಿ ಭಾಗವಹಿಸಲಿಕ್ಕೆ ಬಯಸುತ್ತೇನೆ. ಆದರೆ ಕೆಲವು ವಿಷಯಗಳ ಬಗ್ಗೆ ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಅಧ್ಯಕ್ಷರೆ, ನೀರಾವರಿ ಪ್ರದೇಶಗಳು ಏನಿವೆ, ಒಂದು ರೀತಿಯಿಂದ ವಿಚಿತ್ರ ಪರಿಸ್ಥಿತಿಯಲ್ಲಿ ಅವು ನಡೆಯುತ್ತಿವೆ. ಅಲ್ಲಿ ರೈತರಿಗೆ ನೀರನ್ನು ಕೊಡುತ್ತಿದ್ದಾರೆ. ಅವರುಗಳಿಗೆ ನಿರ್ವಹಣಾ ವೆಚ್ಚಕ್ಕಾಗಿ ದುಡ್ಡು ಏನು ಕೊಡಬೇಕೋ ಅದನ್ನು ಕೊಡುವುದಿಲ್ಲ. ವರ್ಷದ ಕೊನೆಯಲ್ಲಿ ನಿರ್ವಹಣಾ ವೆಚ್ಚದ ಹಣವನ್ನು ರಿಲೀಸ್ ಮಾಡುತ್ತಾರೆ. ದಿನಗೂಲಿ ಮೇಲೆ ನೀರು ಬಿಡುವುದಕ್ಕೆ ಏನಿದ್ದರು ಅವರೆಲ್ಲಾ ರೆಗ್ಯುಲರೈಸ್ ಆಗಿದ್ದಾರೆ. ಅಲ್ಲಿ ಕೆಲಸ ಮಾಡುವಂಥ, ಕೂಲಿ ಮಾಡುವಂಥ, ಗೇಟ್ ತೆಗೆಯುವಂಥ ಸೂಪರ್‌ವೈಸ್ ಮಾಡುವಂಥ ಜನ ಬೇಕು. ಅವರನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇಲ್ಲ. ಆದರೂ ನಿರ್ವಹಣೆ ಮಾಡಬೇಕು. ಅದಕ್ಕಾಗಿ ಅವರದೇ ಆದಂಥ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ಇವರು ಕೊಡುವ ಹಣ ವರ್ಷದ ಕೊನೆಗೆ ಬರುತ್ತದೆ. ಅಲ್ಲಿಯವರೆಗೆ ಇವರು ಮಾಡುತ್ತಾ ಹೋಗಬೇಕು. ಇವರು ಮಾಡುತ್ತಾ ಹೋಗುವಂಥ ವ್ಯವಸ್ಥೆಯಲ್ಲಿ ನಿರ್ವಹಣಾ ವೆಚ್ಚ ಏನು ಬರುತ್ತದೆ ಅದಕ್ಕೆ ಒಂದು ರೀತಿಯಾಗಿ ಪ್ಯಾರಲಲ್ಲಾಗಿ ಕಾಯಿದೆಗೆ ವಿರೋಧವಾದಂಥ ಒಂದು ವ್ಯವಸ್ಥೆ ನಿರ್ಮಾಣವಾಗುವಂಥ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಆ ಜನರಿಗೆ ಹಣ ಕೊಡಬೇಕು, ಅದನ್ನು ನಡೆಸಿಕೊಂಡು ಹೋಗುವುದಕ್ಕೆ. ಅದಕ್ಕಾಗಿ ಬೇರೆ ಬೇರೆ ಎಸ್ಟಿಮೇಟುಗಳನ್ನು ಮಾಡಿ ಬೇರೆ ಬೇರೆ ರೀತಿಯಿಂದ ಹಣ ಖರ್ಚು ಹಾಕಿ ಅವರಿಗೆ ಕೊಡುತ್ತಾರೆ.

ನೀರಾವರಿ ಇಲಾಖೆಯಲ್ಲಿ ಈ ರೀತಿಯಾದ ಸಂದರ್ಭದಲ್ಲಿ 100ಕ್ಕೆ 20ರಷ್ಟು ಹಣ ಕೂಡ ಸದುಪಯೋಗವಾಗುವುದಿಲ್ಲ ಎನ್ನುವಂಥ ಒಂದು ಆಪಾದನೆಯನ್ನೂ ಸಹ ನಾನು ಕೇಳಿದ್ದೇನೆ. ಅದನ್ನು ಸರಿ ಮಾಡುವಂಥ ಹೊಸ ವ್ಯವಸ್ಥೆಯನ್ನು ರೂಢಿಸದೇ ಹೋದರೆ ಕಷ್ಟವಾಗುತ್ತದೆ. ಏನಾದರೂ ಒತ್ತಡಗಳನ್ನು ನಾವು ಮಾಡಿದರೆ ಅಲ್ಲಿ ನೀರು ಬರುವುದಿಲ್ಲ. ಮಾಡುವುದಕ್ಕೆ ಬಿಟ್ಟರೆ ಅವ್ಯವಸ್ಥೆಯಾಗುತ್ತದೆ. ಇದಕ್ಕೆ ಏನಾದರೂ ಪರ್ಯಾಯ ವ್ಯವಸ್ಥೆಯನ್ನು ಮಾಡಬೇಕು. ಎಷ್ಟು ಅನಾಹುತ ಈ ವ್ಯವಸ್ಥೆಯಲ್ಲಿದೆ ಎಂದರೆ ಒಂದು ರೀತಿಯಿಂದ ಕಾನೂನಿಗೆ ವಿರುದ್ಧವಾದ ಕೆಲಸಗಳು ಹಿರಿಯ ಅಧಿಕಾರಿಗಳ ಮಟ್ಟಿಗೆ ನಡೆಯುತ್ತಿದೆ ಎಂದು ಹೇಳುತ್ತಾರೆ. ಅದು ಎಷ್ಟರಮಟ್ಟಿಗೆ ನಿಜವೋ ಗೊತ್ತಿಲ್ಲ. ಹಿರಿಯ ಅಧಿಕಾರಿಗಳ ಹತ್ತಿರ 100 ರೂಪಾಯಿಗಳ ಎಸ್ಟಿಮೇಟ್ ಹೋದರೆ ಅದರಲ್ಲಿ 10 ಪರ್ಸೆಂಟ್‌ಕಮಿಷನನ್ನು ಕೊಡದೇ ಹೋದರೆ ಆ ಎಸ್ಟಿಮೇಟ್ ಸ್ಯಾಂಕ್ಷನ್ ಆಗುವುದಿಲ್ಲ ಎಂದು ಹೇಳುತ್ತಾರೆ. ಹೊಸ ಸರ್ಕಾರ ಈ ವಿಷಯದಲ್ಲಿ ಬಿಗಿ ನಿಲುವನ್ನು ತೆಗೆದುಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ. ಕೊನೆಯದಾಗಿ, ಹಿಂದಿನ ರಾಜ್ಯಪಾಲರ ಭಾಷಣದಲ್ಲೂ ಸಹಿತ ನಾನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಚಿಮ್ಮನಕಟ್ಟಿಯವರ ಪ್ರಶ್ನೆಗೆ ಉತ್ತರ ಕೊಡುವಾಗ "ನದಿಗಳಿಂದ ಪ್ರವಾಹ ಬಂದಾಗ ಆಗಬಹುದು ಅಥವಾ ಡ್ಯಾಮ್‌ನಿಂದ ನೀರು ಬಿಡುವಾಗ ಆಗಬಹುದು. ಪದೇ ಪದೇ ಸಬ್‌ಮರ್ಜ್ ಆಗುವಂಥ ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಸುಮಾರು 40 ಕೋಟಿ ರೂಪಾಯಿ ಹಣ ಬೇಕಾಗುತ್ತದೆ" ಎಂದು ಹೇಳಿದರು.

ನಾನು ಹಿಂದೆ ಕೇಳಿದಾಗ ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಆಗ ಭೂಕಂಪ ಆಗಿತ್ತು. ಆಗ ಬಹಳಷ್ಟು ಮನೆಗಳೆಲ್ಲಾ ಹಾಳಾದವು. ಆಗ ನಾವು ಜಾಗತಿಕ ಬ್ಯಾಂಕಿಗೆ ಕಳುಹಿಸುತ್ತೇವೆ ಎಂದು ಹೇಳಿದ್ದರು. ನಿಜಕ್ಕೂ ಬಹಳ ತೊಂದರೆಯಲ್ಲಿ ಆ ಜನ ಜೀವನ ಮಾಡುತ್ತಿದ್ದಾರೆ. ನನ್ನ ಮತ ಕ್ಷೇತ್ರದಲ್ಲಿ ಸುಮಾರು 20-30 ಹಳ್ಳಿಗಳಲ್ಲಿ ಇನ್ನೂ ಅವರು ಸುಧಾರಿಸಿಕೊಳ್ಳುವುದಕ್ಕೆ ನಾಲ್ಕಾರು ವರ್ಷಗಳೇ ಬೇಕು ಅಂಥ ಪರಿಸ್ಥಿತಿಯಲ್ಲಿದ್ದಾರೆ. ಮನೆ ಕಳೆದುಕೊಂಡಿದ್ದಾರೆ, ಬೆಳೆ ಕಳೆದುಕೊಂಡಿದ್ದಾರೆ. ಮತ್ತೆ ಮಳೆ ಬಂತು ಎಂದು ಹೇಳಿದರೆ ಯಾವಾಗಲೂ ಅವರು ಭಯದಿಂದ

ಜೀವನ ಮಾಡುವಂಥ ಪರಿಸ್ಥಿತಿ ಇವತ್ತಿದೆ. ಅವರು ಹೊಸ ಜಾಗವನ್ನು ಪಡೆದುಕೊಂಡು ಹೋಗಲಿಕ್ಕೆ ಅವರಿಗೆ ಸಾಧ್ಯ ಇಲ್ಲ. ಕಾನೂನು ಚೌಕಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಅಥವಾ ಸರ್ಕಾರಕ್ಕೆ ಕೇಳಿದರೆ ಅದಕ್ಕೆ ಅಷ್ಟು ಕೋಟಿ ಬೇಕು, ಇಷ್ಟು ಕೋಟಿ ಬೇಕು ಎಂದು ಹೇಳುತ್ತಾರೆ. ಅತ್ಯಂತ ಧಾರುಣವಾದ ಪರಿಸ್ಥಿತಿಯಲ್ಲಿ ಅವರಿದ್ದಾರೆ. ಅದಕ್ಕಾಗಿ 40 ಕೋಟಿ ಆಗಬಹುದು, 20 ಕೋಟಿ ಆಗಬಹುದು, ಒಟ್ಟಾರೆ ಸಮಸ್ಯೆ ನೋಡಿದಾಗ ಅದೇನೂ ಬಹಳ ದೊಡ್ಡ ಹಣ ಅಲ್ಲ. ಪ್ರಕೃತಿ ವಿಕೋಪಕ್ಕೆ ಒಳಗಾಗುವಂಥ ಸಮಸ್ಯೆಗಳಿಗೆ ಕೇಂದ್ರ ಸರ್ಕಾರದಲ್ಲಿರಬಹುದು, ವಿದೇಶಿ ನೆರವಿನಿಂದ ಇರಬಹುದು ಹಣ ಪಡೆದು ಸ್ಥಳಾಂತರ ಮಾಡುವಂಥ, ಶಾಶ್ವತವಾಗಿ ಖಾಯಂ ಆಗಿ ಪರಿಹಾರ ದೊರಕಿಸಿಕೊಡುವಂಥ ಕೆಲಸ ಮಾಡಬೇಕೆಂದು ಹೇಳಿ ಇವತ್ತು ಏನು ನನಗೆ ಮಾತನಾಡುವುದಕ್ಕೆ ತಾವು ಏನು ಅವಕಾಶವನ್ನು ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

+ ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ರಾಜ್ಯ ವಿಧಾನಮಂಡಲದಲ್ಲಿ ಮಾಡಿದ ಭಾಷಣವನ್ನು ವಿರೋಧಿಸುತ್ತಾ ಕೆಲವೊಂದು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರಪ್ರಥಮವಾಗಿ ಅವರ ಭಾಷಣವನ್ನು ತೆಗೆದುನೋಡಿದಾಗ ನಮ್ಮ ಜಿಲ್ಲೆಯ ಹುಬ್ಬಳ್ಳಿ ಈದ್ಗಾ ಮೈದಾನದ ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದು ಹೇಳಿ ಪ್ರಶಂಸೆಯನ್ನು ಜನತಾ ದಳ ಸರ್ಕಾರ ಪಡೆಯುವುದಕ್ಕೆ ಪ್ರಯತ್ನ ಮಾಡಿದೆ. ನಾವೂ ಕೂಡ ಈ ಧ್ವಜವಂದನೆ ಮಾಡಿದ್ದನ್ನು ಅಭಿನಂದಿಸುತ್ತೇವೆ. ಆದರೆ ಅದರ ಜೊತೆಗೆ ಇವತ್ತು ಆ ಧ್ವಜರೋಹಣ ಮಾಡಲಿಕ್ಕೆ ಅಲ್ಲಿರತಕ್ಕ ಅಂಜುಮಾನ್ ಸಂಸ್ಥೆಯವರಾಗಲೀ ಅಥವಾ ನಮ್ಮ ಜಿಲ್ಲೆಯ ನಮ್ಮ ಪಕ್ಷದ ವಿರೋಧಪಕ್ಷದ ನಾಯಕರಾದ ಶ್ರೀಮಾನ್ ಹೆಚ್.ಕೆ. ಪಾಟೀಲರು ಕೂಡ ಇದರಲ್ಲಿ ತುಂಬಾ ಸಹಕಾರವನ್ನು ಮಾಡಿದ್ದಾರೆಅನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಟ್ಟಾರೆ ಶಾಂತಿ ನಮ್ಮೆಲ್ಲರಿಗೂ ಬೇಕಾಗಿದೆ. ಈ ದಿಸೆಯಲ್ಲಿ ಇವತ್ತು ಪ್ರಯತ್ನವನ್ನು ಮಾಡಿದ್ದು ಒಳ್ಳೆಯದು ಎನ್ನತಕ್ಕ ಮಾತನ್ನು ಈ ಸಂದರ್ಭಧದಲ್ಲಿ ಹೇಳುತ್ತಾ ಈಗಾಗಲೇ ರಾಜ್ಯದಲ್ಲಿ ಶಾಂತಿ ಮತ್ತು ಕಾನೂನಿನ ವ್ಯವಸ್ಥೆ ಸಾಕಷ್ಟು ಹದಗೆಟ್ಟಿದೆ ಎಂಬ ಮಾತನ್ನು ಅನೇಕರು ಇವತ್ತು ಹೇಳುತ್ತಿದ್ದಾರೆ. ಈ ಒಂದು ವಿಚಾರದಲ್ಲಿ ಇವತ್ತು ಹುಬ್ಬಳ್ಳಿ ಮತ್ತು ಧಾರವಾಡ ಉತ್ತರ ಕರ್ನಾಟಕದ ಕೇಂದ್ರ ಸ್ಥಳಗಳು. ಇವತ್ತು ಅಲ್ಲಿ ಧಾರವಾಡ ಜಿಲ್ಲೆಯಲ್ಲಿ ಅನೇಕ ಪ್ರದೇಶಗಳನ್ನು ಸೂಕ್ಷ್ಮ ಸ್ಥಳಗಳನ್ನಾಗಿ ಗುರುತು ಮಾಡಿದ್ದಾರೆ. ಅದರಲ್ಲಿ ಹುಬ್ಬಳ್ಳಿ ಧಾರವಾಡ ಇದೆ, ಶಿಗ್ಗಾವಿ ನನ್ನ ಮತಕ್ಷೇತ್ರ ಇದೆ,ಜೊತೆಗೆ ಹಾನಗಲ್ ಮತ್ತು ಇನ್ನಿತರ ಕೆಲವು ಪ್ರದೇಶಗಳಲ್ಲಿ ಅಲ್ಪಸಂಖ್ಯಾಂತರು ಮತ್ತು ಮುಸಲ್ಮಾನ್ ಬಾಂಧವರು ಇರತಕ್ಕ ಪ್ರದೇಶಗಳನ್ನು ಕೂಡ ಸೂಕ್ಷ್ಮ ಪ್ರದೇಶಗಳನ್ನಾಗಿ ಮಾಡಿದ್ದಾರೆ.

ಅಲ್ಲಿ ಏನಾದರೂ ಗಲಾಟೆ ಆದಂಥ ಸಂದರ್ಭಗಳಲ್ಲಿ ಹುಬ್ಬಳ್ಳಿ ಧಾರವಾಡದದಲ್ಲಿರತಕ್ಕ ಪೋಲೀಸ್ ಸಿಬ್ಬಂದಿ ಹೆಚ್ಚು ಸಿಗದೇ ಇದ್ದಾಗ ಬೆಳಗಾಂ ಕಾರವಾರ ಮತ್ತು ಇನ್ನಿತರ ಅನೇಕ ಪ್ರದೇಶಗಳಿಂದ ಈ ಒಂದು ಫೋರ್ಸ್‌ನ್ನು ತರತಕ್ಕ ವ್ಯವಸ್ಥೆ ಇದೆ. ಈ ಒಂದು ವಿಚಾರದಲ್ಲಿ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಏನೆಂದರೆ ನಮ್ಮ ಧಾರವಾಡ ಜಿಲ್ಲೆಯಲ್ಲಿ ಇವತ್ತು ಕೆ.ಎಸ್.ಆರ್.ಪಿ. ಪರ್ಮನೆಂಟ್ ಬೆಟಾಲಿಯನ್ ಸಿ.ಆರ್.ಪಿ.ಯಂಥ ಫೋರ್ಸ್‌ಗಳು ಅಲ್ಲಿ ಕೂಡಲೇ ಸ್ಥಾಪನೆಯಾಗಬೇಕು ಎನ್ನತಕ್ಕದ್ದನ್ನು ಕೂಡ ನಾನು ಹೇಳಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಾನು ಮೊನ್ನೆ ಒಂದು ಪ್ರಶ್ನೆಯನ್ನು ಹಾಕಿದ್ದೆ. ಅದಕ್ಕೆ ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ನಮ್ಮ ಶಿಗ್ಗಾವಿ ಮತಕ್ಷೇತ್ರಕ್ಕೆ ರಾಷ್ಟ್ರೀಯ ಹೆದ್ದಾರಿಗೆ ಹೊಂದಿದಂತೆ 100 ಎಕರೆ ಜಮೀನನ್ನು ನಾನು ಈಗಾಗಲೇ ಪೋಲೀಸ್ ಇಲಾಖೆಗೆ ರೆವಿನ್ಯೂ ಇಲಾಖೆಯಿಂದ ಕೊಡಿಸಿಕೊಟ್ಟಿದ್ದೇನೆ.

ಅಲ್ಲಿ ಒಂದು ಕೆ.ಎಸ್.ಆರ್.ಪಿ. ಬೆಟಾಲಿಯನ್ ಮಂಜೂರಾಗಿದೆ. ಅಲ್ಲಿ 1200 ಜನರು ಆ ಒಂದು ಕೆ.ಎಸ್.ಆರ್.ಪಿ. ಬೆಟಾಲಿಯನ್‌ನಲ್ಲಿ ಕೆಲಸ ಮಾಡತಕ್ಕವರಿದ್ದಾರೆ. ಒಬ್ಬ ಎಸ್.ಪಿ. ಇದ್ದಾರೆ, ನಾಲ್ಕು ಡಿ.ಎಸ್.ಪಿ. ಐವತ್ತು ಇನ್‌ಸ್ಪೆಕ್ಟರ್ ಹಾಗೂ ಇನ್ನಿತರ ಅನೇಕ ಪೋಲೀಸ್ ಸಿಬ್ಬಂದಿ ಇದ್ದಾರೆ.ಅಲ್ಲಿಗೆ ಒಬ್ಬ ಎಸ್.ಪಿ.ಯನ್ನು ವರ್ಗಾವಣೆಮಾಡಿದರೂ ಕೂಡ ಬೆಟಾಲಿಯನ್ನು ಅಲ್ಲಿ ಅವರು ಪ್ರಾರಂಭ ಮಾಡಲಿಕ್ಕೆ ಇಚ್ಛಿಸುತ್ತಾ ಇಲ್ಲ. ಅವರು ಮತ್ತೆ ಬೆಂಗಳೂರು ಮತ್ತು ತುಮಕೂರು ಕಡೆಗೆ ಬರಬೇಕು ಎನ್ನತಕ್ಕ ಒಂದು ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ ಎಂದು ನನಗೆ ತಿಳಿದುಬಂದಿದೆ. ಆ ಕಾರಣ ಅದಕ್ಕೆ ಅನುಮತಿಯನ್ನು ಕೊಡದೇ ಯಾವ ಒಂದು ಉದ್ದೇಶಕ್ಕಾಗಿ ಸರ್ಕಾರದವರು ಆ ಒಂದು ಪ್ರದೇಶವನ್ನು ಗುರುತು ಮಾಡಿ ಅಲ್ಲಿ ಜಮೀನನ್ನು ತೆಗೆದುಕೊಂಡು ಇವತ್ತು ಮಂಜೂರಾತಿಯನ್ನು ಕೂಡ ನೀಡಿದ್ದಾರೆ, ಆ ಕಾರಣ ಆ ಬೆಟಾಲಿಯನ್ನನ್ನು ಕೂಡಲೇ ಅಲ್ಲಿ ಪ್ರಾರಂಭ ಮಾಡುತ್ತೇವೆ ಎನ್ನತಕ್ಕ ಮಾತನ್ನು ಕೂಡ ಸರ್ಕಾರದವರು ಕೊಟ್ಟಿದ್ದಾರೆ. ಅದಕ್ಕೆ ಸರ್ಕರದವರು ಯಾವುದೇ ಒತ್ತಡಕ್ಕೆ ಅಧಿಕಾರಿಗಳಿಗೆ ಮಣಿಯದೆ ಆ ಒಂದು ಬೆಟಾಲಿಯನ್ನನ್ನು ಶಿಗ್ಗಾಂವ್‌ನಲ್ಲಿ ಪ್ರಾರಂಭ ಮಾಡಬೇಕು ಎಂಬ ಒಂದು ವಿನಂತಿಯನ್ನು ಈ ಸಂದರ್ಭದಲ್ಲಿ ನಾನು ಮಾಡಲಿಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನು ಅಧಿಕಾರ ವಿಕೇಂದ್ರಿಕರಣದ ಬಗ್ಗೆ ಹೇಳುವುದಾದರೆ, ಅನೇಕರು ಇವತ್ತು ಅಧಿಕಾರ ವಿಕೇಂದ್ರಿಕರಣ ಮಾಡತಕ್ಕ ಬಿರುದು ಜನತಾ ದಳ ಸರ್ಕಾರಕ್ಕೆ ಸಿಗುತ್ತದೆ ಅನ್ನತಕ್ಕ ಮಾತನ್ನು ಕೂಡ ಅನೇಕ ಸಂದರ್ಭದಲ್ಲಿ ಅನೇಕ ಸದಸ್ಯರು ಮಾತನಾಡಿದ್ದಾರೆ. ಜೊತೆಗೆ ರಾಜ್ಯಪಾಲರ ಭಾಷಣದಲ್ಲೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಆದರೆ ಈ ವಿಚಾರದಲ್ಲಿ ಈ ಒಂದು ಶ್ರೇಯಸ್ಸು ಕಾಂಗ್ರೆಸ್ ಪಕ್ಷಕ್ಕೆ ಸೇರಿದ್ದು ಎನ್ನತಕ್ಕ ಮಾತನ್ನು ನಾವು ಹೇಳಬೇಕಾಗಿದೆ. ಕಳೆದ ವರ್ಷ ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ನಮ್ಮ ಕಾಂಗ್ರೆಸ್ ಪಕ್ಷದವರು ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಮೀಸಲಾತಿ ಆಧಾರದ ಮೇಲೆ ಪ್ರಪ್ರಥಮವಾಗಿ ಚುನಾವಣೆಗಳನ್ನು ಮಾಡಿ ಪಂಚಾಯಿತಿಗಳನ್ನು ರಚನೆ ಮಾಡಿದ್ದಾರೆ. ಅಷ್ಟೇ ಅಲ್ಲದೇ, ಇವತ್ತು ಕೇಂದ್ರಸರ್ಕಾರದಲ್ಲೂ ಕೂಡ ಸಂವಿಧಾನಕ್ಕೆ ತಿದ್ದುಪಡಿಯನ್ನು ಮಾಡಿ ಇವತ್ತು ಹಿಂದುಳಿದವರಿಗೆ ಮತ್ತು ಎಲ್ಲ ಜನಾಂಗಕ್ಕೂ ಒಂದು ಮೀಸಲಾತಿಯ ಅವಕಾಶ ಸಿಗುವಂತೆ ಮಾಡಿ ಈವತ್ತು ಈ ಒಂದು ಅಧಿಕಾರ ವಿಕೇಂದ್ರಿಕರಣದ ಕಾನೂನನ್ನು ಕಾಂಗ್ರೆಸ್ ಪಕ್ಷದವರು ತಂದಿದ್ದಾರೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನು ಇವತ್ತಿನ ದಿವಸ ನಮ್ಮ ರಾಜ್ಯಪಾಲರ ಭಾಷಣವನ್ನು ನಾವು ನಿರೀಕ್ಷಿಸಿದಾಗ ಗ್ರಾಮಾಂತರ ಪ್ರದೇಶದ ಪರವಾಗಿ ನಾವಿದ್ದೇವೆ ಎನ್ನತಕ್ಕ ಮಾತಿಗೆ ಒತ್ತುಕೊಟ್ಟು ಹೇಳುತ್ತಿದ್ದೇನೆ.

6.10 ಪಿ.ಎಂ

ಆದರೆ ಇವತ್ತು ನಾವು ಇಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕಂತಹವರು 100ಕ್ಕೆ 90 ರಷ್ಟು ಇದ್ದೇವೆ ನಾವು ಗ್ರಾಮಾಂತರ ಪ್ರದೇಶಗಳಿಗೆ ಏನು ವಿಶೇಷವಾಗಿ ಕಾರ್ಯಕ್ರಮಗಳನ್ನು ಹಮ್ಮಿಕ್ಕೊಳ್ಳುತ್ತೇವೆಂದು ಹೇಳುವಂತಹ ಚಿಂತನೆ ಬಹಳ ಮುಖ್ಯವಾದುದು ಎನ್ನುವ ಮಾತನ್ನು ಹೇಳಬೇಕಾಗಿದೆ. ಗ್ರಾಮಗಳಿಗೆ ಹೋದಾಗ ಅಲ್ಲಿಯ ಜನತೆ, ನಮ್ಮ ಮಾತದಾರರು, ನಮ್ಮಿಂದ ಏನು ನಿರೀಕ್ಷಣೆ ಮಾಡತಕ್ಕಂತಹದ್ದು ಅಂದರೆ, ನಮ್ಮಗಳಿಗೆ ರಸ್ತೆಗಳು ಬೇಕು. ಗದಾರ ಸರಿಪಡಿಸಿಕೊಡಬೇಕು, ಬಸ್ಸಿನ ವ್ಯವಸ್ಥೆ ಮಾಡಿಕೊಡಬೇಕು, ಬೆಳಕನ್ನು ಕೊಡಬೇಕು.ಶಿಕ್ಷಕರ ಕೊರತೆ ಹಾಗೆ ಹಲವಾರು ಪ್ರಾಮುಖ್ಯವಾದ ಸಮಸ್ಯೆಗಳ ಬಗ್ಗೆ ಕೇಳುತ್ತಾರೆ. ಅವರು ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ ಕೇಳುವುದಿಲ್ಲ. ಅದ್ದರಿಂದ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ, ಸರ್ಕಾರದವರು ಇದರ ಬಗ್ಗೆ ಸಮಗ್ರವಾಗಿ ಚಿಂತಿಸಿ ಕಾರ್ಯಕ್ರಮ ಹಾಕಿಕೊಳ್ಳಬೇಕು. ಇವತ್ತು ಜಿ...

ಪಂಚಾಯ್ತಿ ಆಡಳಿತ ಜಿಲ್ಲಾ ಮಟ್ಟದಲ್ಲಿ ವಿಕೇಂದ್ರಿಕರಣವಾಗಿದೆ. ಈ ಒಂದು ಪರಿಸ್ಥಿತಿಯಲ್ಲಿ ಜಿಲ್ಲಾ ಪಂಚಾಯ್ತಿಯಲ್ಲಿ ಚೀಫ್ ಪ್ಲಾನಿಂಗ್ ಆಫೀಸರ್ ಎಂಬ ಅಧಿಕಾರ ಇರುವುದರಿಂದ ಇವತ್ತು ಪ್ರತಿಯೊಂದು ಗ್ರಾಮದಲ್ಲಿ ಹಾಗೇ ಇಡೀ ರಾಜ್ಯದಾದ್ಯಂತ ಆಯಾ ಗ್ರಾಮಗಳಲ್ಲಿ, ಮೂಲಭೂತವಾಗಿ ನಾಗರೀಕರ ಸೌಲಭ್ಯಗಳನ್ನು ಒದಿಗಿಸಿಕೊಡುವುದರ ಸಲುವಾಗಿ ಅಲ್ಲಿ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿ, ಮತ್ತು ಆ ಜನರಿಗೆ ಬೇಕಾದ ಯೋಜನೆಗಳಿಗೆ ಹಣವನ್ನು ಒದಗಿಸಿಕೊಟ್ಟು ನಾವು ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದ್ದೇಆದರೆ, ನಾವು ಹಾಗೂ ಸರ್ಕಾರದವರು ತಮ್ಮ ಕರ್ತವ್ಯವನ್ನು ನಿಭಾಯಿಸಿದ ಹಾಗೆ ಆಗುತ್ತದೆ. ಎನ್ನತಕ್ಕಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.ಇನ್ನು ಬಹಳ ದುಃಖದಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಏನೆಂದರೆ, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂತಹ ಬಹಳಷ್ಟು ಜನ ನಮ್ಮಕಡೆಯಂತೂ ಉತ್ತರ ಕರ್ನಾಟಕದಲ್ಲಿ ನನ್ನ ಮತ ಕ್ಷೇತ್ರದಲ್ಲಿ, ನನ್ನ ಜಿಲ್ಲೆಯಲ್ಲಿ, ಬಹಳಷ್ಟು ದುಡಿಯುವ ಕೈಗಳಿಗೆ ಕೆಲಸ ಇಲ್ಲದೆ ಬೇರೆ ರಾಜ್ಯಗಳಿಗೆ ಹೋಗುತ್ತಿದ್ದಾರೆ. ಅನೇಕರು 100ಕ್ಕೆ 50ರಷ್ಟು ಜನ ವಲಸೆ ಹೋಗತಕ್ಕಂತಹದಲ್ಲಿ ಗೋವಾಗಕ್ಕೆ ಹೋಗುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕಾಫಿ ಪ್ಲಾಂಟರ್ಸ್ ಹತ್ತಿರ ಹೋಗುತ್ತಾರೆ. ಈ ರೀತಿ ಇನ್ನೂ ಅನೇಕ ಅನೇಕ ಪ್ರದೇಶಗಳಿಗೆ ಹೇಗುತ್ತಾರೆ. ಈ ಒಂದು ವಿಚಾರದಲ್ಲಿ ಇವತ್ತು ಆ ಜನರಿಗೆ ಕೆಲಸಗಳನ್ನು ಕೊಡಿಸತಕ್ಕ ಪ್ರಾಮಾಣಿಕ ಕೆಲಸವನ್ನು ಕೊಡುವಂತಹ ಪ್ರಯತ್ನ ಮಾಡಬೇಕು. ಸರ್ಕಾರಕ್ಕೆ ನಿಜವಾಗಿಯೂ ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ಕಾಳಜಿ ಇದ್ದರೆ ಅವರಿಗೆ ಕೆಲಸವನ್ನು ಕೊಡತಕ್ಕಂತಹ ಕೆಲಸವನ್ನು ನಾವು ಮಾಡಿದ್ದೇ ಆದರೆ ನಮ್ಮ ಕರ್ತವ್ಯವನ್ನು ಮಾಡಿದ ಹಾಗೆ ಆಗುತ್ತದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಒಂದು ದಿಸೆಯಲ್ಲಿ ಅದರ ಬಗ್ಗೆಯೂ ಸರ್ವೆ ಮಾಡಿಸಿ ಇವತ್ತು ಯಾವ ಊರಿನಿಂದ ಎಷ್ಟು ಜನರು ವಲಸೆ ಹೋಗಿದ್ದಾರೆ ಎನ್ನತಕ್ಕ ಅಂಕಿ ಸಂಖ್ಯೆಗಳನ್ನು ತರಿಸಬೇಕು. ಅವರಿಗೆ ಈಗಾಗಲೇ ಕೆಲವು ಯೋಜನೆಗಳು ಇವೆ. ಉದ್ಯೋಗ ಭರವಸೆಯಂತಹ ಯೋಜನೆಗಳಿವೆ. ಒಂದು ಮತ ಕ್ಷೇತ್ರಕ್ಕೆ ಸ್ವಲ್ಪ ಸ್ವಲ್ಪ ಹಣವನ್ನು ಕೊಟ್ಟಿರುತ್ತಾರೆ. ಅದರಲ್ಲಿ ಎಲ್ಲರಿಗೂ ಕೆಲಸಗಳನ್ನು ಕೊಡುವುದಕ್ಕಾಗುವುದಿಲ್ಲ. ಜನರಿಗೆ ತಿಳಿಸಿ ಹೇಳತಕ್ಕ ಕೆಲಸವನ್ನು ಮಾಡಿ, ಅವರಿಗೆ ಕೆಲಸವನ್ನು ನಾವು ಮಾಡಿಕೊಡುತ್ತೇವೆ ಎನ್ನುವ ಪ್ರಯತ್ನವನ್ನು ಮಾಡುವುದಾದರೆ, ಗ್ರಾಮಾಂತರ ಪ್ರದೇಶದ ಜನರ ಬಗ್ಗೆ ಚಿಂತನೆ ಮಾಡಿದ ಹಾಗೆ ಆಗುತ್ತದೆ.

ಇನ್ನು ನಿರುದ್ಯೋಗದ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಅನೇಕ ಯುವಕರು, ಯುವಕ ಮಂಡಲದವರು, ವಾಚನ ಸಂಘದವರು, ಯುವಕರಿಗೆ ಉದ್ಯೋಗವನ್ನು ಕೊಡುವಂತಹ ವಿಚಾರದಲ್ಲಿ ಸರ್ಕಾರ ಬದಲಾವಣೆಯಾದಾಗ ಬಹಳಷ್ಟು ತೃಪ್ತಿ ಯಾಗಿರುತ್ತದೆ.ಏಕೆಂದರೆ ನಮ್ಮ ಎಲ್ಲ ಯುವಕರಿಗೆ ವಿದ್ಯಾವಂತರಿಗೆ ಪದವೀಧರರಿಗೆ, ಕೆಲಸಗಳು, ನೌಕರಿಗಳು ಸಿಕ್ಕಾವು ಎನ್ನುವಂತಹ ವಿಚಾರವನ್ನು ಅವರು ಮಾಡುತ್ತಿದ್ದಾರೆ. ಇದರ ಬಗ್ಗೆ ಹೇಳಿದ ಹಾಗೆ, ನಿವೃತ್ತಿ ವಯಸ್ಸನ್ನು,58ರಿಂದ 55ಕ್ಕೆ ಇಳಿಸಿ, ಹೊಸದಾಗಿ ಬರತಕ್ಕ ಯುವಕರಿಗೆ ಉದ್ಯೋಗದ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಕೈಗಾರಿಕೆ ಇಲಾಖೆಯ ಬಗ್ಗೆ ಹೇಳುವುದಾದರೆ, "ವಿಶ್ವ" ಅಂತ ಯೋಜನೆಯಲ್ಲಿ ಸ್ವಯಂ ಉದ್ಯೋಗವನ್ನು ತೆಗೆಯತಕ್ಕಂಥ ಕೆಲಸಗಳನ್ನೂ ಕೂಡ ನಮ್ಮ ಯುವಕರಿಗೆ ಕೊಟ್ಟಿದ್ದೇ ಆದರೆ ನಿರುದ್ಯೋಗ ಸಮಸ್ಯೆಯ ಬಗ್ಗೆ ಹೆಚ್ಚು ಚಿಂತನೆ ಮಾಡಿದ ಹಾಗೆ ಆಗುತ್ತದೆ. ಅವರಿಗೆ ಒಂದು ಪರಿಹಾರವನ್ನು ಮಾಡಿದ ಹಾಗೆ ಆಗುತ್ತದೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ನಮ್ಮ ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠದ ಬಗ್ಗೆ ಒಂದು ವರದಿ ಬಂದಿದೆ. ಇವತ್ತು ಅದರಲ್ಲಿ ಏನು ಹೇಳಿದ್ದಾರೆಂದರೆ, ಸದ್ಯಕ್ಕೆ ಹೈಕೋರ್ಟ್ ಪೀಠವನ್ನು ಸ್ಥಾಪನೆ ಮಾಡುವುದಕ್ಕೆ ವಿರಾಮ ಹಾಕಿದ್ದೇವೆ ಅಂತ ಬಂದಿದೆ. ರಾಜಕೀಯ ಬಲ ಇಲ್ಲ ಜೊತೆಗೆ ಹೈಕೋರ್ಟಿನವರು ಸ್ಪಷ್ಟವಾದ ಅನುಮೋದನೆಯನ್ನು ಕೊಡುತ್ತಿಲ್ಲ ಎನ್ನುವ ಮಾತನ್ನು ಅದರಲ್ಲಿ ಬರೆದಿದ್ದಾರೆ. ಈ ಬಗ್ಗೆ ಮೊನ್ನೆ ಮೇಲ್ಮನೆಯಲ್ಲಿ ಚರ್ಚೆಯಾಗಿರುವುದು ಪತ್ರಿಕೆಗಳಲ್ಲಿ ಬಂದಿದೆ.ಕಾನೂನು ಮಂತ್ರಿಗಳು ಹೇಳಿದ ಪ್ರಕಾರ, ಹೈಕೋರ್ಟ್ ಪೀಠವನ್ನು ಸದ್ಯಕ್ಕೆ ಪ್ರಾರಂಭಮಾಡುತ್ತೇನೆ ಎನ್ನತಕ್ಕ ವಿಚಾರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಇದರಿಂದ ಅನೇಕ ಜನ ನಮ್ಮ ಭಾಗದ ಜನರು, ಸಾರ್ವಜನಿಕರು, ನ್ಯಾಯವಾದಿಗಳು, ಕಕ್ಷಿದಾರರು ನನಗೆ ನಿನ್ನೆ 2-3 ಸಾರಿ ಇದರ ಬಗ್ಗೆ ಹೇಳಿದ್ದಾರೆ. ಈ ಒಂದು ವಿಚಾರದಲ್ಲಿ ಸರ್ಕಾರದವರು ನಮಗೆ ಇವತ್ತು ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಆಗುತ್ತದೆಂದರೆ,ನಮ್ಮ ಮುಖ್ಯ ಮಂತ್ರಿಗಳು, ಆ ಬಗ್ಗೆ ಯಾವುದೇ ಮಲತಾಯಿ ಧೋರಣೆಯನ್ನು ಮಾಡದೆ, ನಿರ್ಧಿಷ್ಟವಾದ ನಿಲುವನ್ನು ಸರ್ಕಾರದ ಮೂಲಕ ತಿಳಿಸಬೇಕು. ಹೈಕೋರ್ಟಿನವರು, ಈ ವಿಚಾರದಲ್ಲಿ ಜಸ್‌ವಂತ್‌ಸಿಂಗ್ ಆಯೋಗವನ್ನು ಮಾಡಿದಾಗ, ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠವನ್ನು ಮಾಡುವುದಕ್ಕೆ ಅಡ್ಡಿ ಇಲ್ಲ ಎನ್ನತಕ್ಕ ಅಭಿಪ್ರಾಯವನ್ನು ಮಂಡನೆ ಮಾಡಿದ್ದಾರೆ. ಮತ್ತು ಮಹಾರಾಷ್ಟ್ರ ರಾಜ್ಯದಲ್ಲಿ ಅಲ್ಲಿ ಔರಂಗಬಾದ್‌ನಲ್ಲಿ ಇದೇ ರೀತಿಯಾಗಿ ಮಾಡಲು ಹೈಕೋರ್ಟ್ ಒಪ್ಪದೆ ಇದ್ದಾಗ, ಶ್ರೀಮಾನ್ ಎ.ಆರ್.ಅಂಟುಲೆಯವರು, ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವರ ಪ್ರಯಂತ್ನದಿಂದಾಗಿ ಔರಂಗಬಾದ್‌ನಲ್ಲಿ ಹೈಕೋರ್ಟ್ ಪೀಠವನ್ನು ಅಲ್ಲಿ ಮಾಡಿದ್ದಾರೆ. ಆ ಆಧಾರದ ಮೇಲೆ ಕೂಡ, ಈಗಾಗಲೇ ನಮ್ಮ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಇದೇ ಸದನದಲ್ಲಿ ನಾವು ಠರಾವನ್ನು ಪಾಸು ಮಾಡಿ ಕಳುಹಿಸಿದ್ದೇವೆ. ಅದರ ಪ್ರಕಾರ ಉತ್ತರ ಕರ್ನಾಟಕ ಜನರ ಅಪೇಕ್ಷೆಯಂತೆ, ಹುಬ್ಬಳ್ಳಿ-ಧಾರವಾಡದಲ್ಲಿ ಹೈಕೋರ್ಟ್ ಪೀಠವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದವರಲ್ಲಿ ಒತ್ತಾಯ ಮಾಡುತ್ತಿದ್ದೇನೆ.

ಇನ್ನು ನ್ಯಾಯಾಂಗ ಇಲಾಖೆಯ ಬಗ್ಗೆ ಹೇಳುವುದಾದರೆ, ಧಾರವಾಡ ಜಿಲ್ಲೆಯಲ್ಲಿ 10 ತಾಲ್ಲೂಕುಗಳಿವೆ. ಅಕ್ಸಿಡೆಂಟ್ ಕೇಸುಗಳು, ರಾಷ್ಟ್ರೀಯ ಹೆದ್ದಾರಿಯಲ್ಲಿರತಕ್ಕ ಧಾರವಾಡ ಜಿಲ್ಲೆಯಲ್ಲಿ ಸಾಕಷ್ಟು ಕೇಸುಗಳು ಪೆಂಡಿಂಗ್ ಇವೆ. ಇದಕ್ಕೆ ಕಾರಣ ಜ್ಯೂರಿಸ್‌ಡಿಕ್ಷನ್‌ನ ತೊಂದರೆ ಇರುವುದರಿಂದ, ಅಪಘಾತವಾದಂತಹ ಸಂದರ್ಭದಲ್ಲಿ ಎಲ್ಲರೂ ಡಿಸ್ಟ್ರಿಕ್ಟ್ ಕೋರ್ಟಿಗೆ ಹೋಗುತ್ತಿದ್ದಾರೆ. ಇದನ್ನು ಬದಲಾವಣೆ ಮಾಡಿ, ಆಯಾ ಪ್ರದೇಶದಲ್ಲಿರತಕ್ಕ ಸಿವಿಲ್ ಜಡ್ಜ್ ಕೋರ್ಟಿಗೆ ಮೋಟಾರ್ ವೆಹಿಕಲ್ ಆಕ್ಸಿಡೆಂಟ್ ಕೇಸುಗಳನ್ನು ತೀರ್ಮಾನ ಮಾಡುವುದಕ್ಕೆ ಜ್ಯೂರಿರಸ್‌ಡಿಕ್ಷನ್ ವ್ಯಾಪ್ತಿಯನ್ನು ಒಳಪಡಿಸಬೇಕು ಎನ್ನತಕ್ಕಂತಹ ವಿನಂತಿಯನ್ನು ಕೂಡ ನಾನು ಮಾಡಿಕೊಳ್ಳಲಿಕ್ಕೆ ಇಷ್ಟಪಡುತ್ತೇನೆ.

ಇನ್ನು ಕಂದಾಯ ಇಲಾಖೆಯ ಬಗ್ಗೆ ಹೇಳುವುದಾದರೆ, ಗ್ರಾಮ ಲೆಕ್ಕಿಗರ ಸಂಖ್ಯೆ ಬಹಳಷ್ಟು ಕಡಿಮೆ ಇದೆ. ಸರ್ವೇಯರ್ಸ್ ಸಂಖ್ಯೆ ಬಹಳಷ್ಟು ಕಡಿಮೆ ಇದೆ. ಅವರುಗಳ ನೇಮಕಾತಿಯನ್ನು ಮಾಡಿಕೊಂಡು ಜನತೆಗೆ ಅನುಕೂಲವಾಗುವ ದಿಸೆಯಲ್ಲಿ ಕಂದಾಯ ಇಲಾಖೆಯವರ ಇದರ ಬಗ್ಗೆ ಗಮನ ಹರಿಸಬೇಕು. ಮತ್ತು ಜಿಲ್ಲೆಯಲ್ಲಿ ಭೌಗೋಳಿಕವಾಗಿ ಎಲ್ಲ ಸವಲತ್ತುಗಳನ್ನು ಪಡೆದಂಥ ಒಂದು ಕೇಂದ್ರ ಸ್ಥಳವಾಗಿದೆ. ಈಗ ಹುಂಡೇಕಾರ್ ಸಮಿತಿಯವರೂ ಕೂಡ ಶಿಫಾರಸ್ಸು ಮಾಡಿದ್ದಾರೆ. ಜಿಲ್ಲಾ ಪುನರ್ ವಿಂಗಡಣೆ ಮಾಡತಕ್ಕ ಸಂದರ್ಭದಲ್ಲಿ ಹಾವೇರಿಯನ್ನು ಜಿಲ್ಲೆಯನ್ನಾಗಿ ಪರಿವರ್ತಿಸಬೇಕೆಂಬ ವಿನಂತಿಯನ್ನು ಇವತ್ತು ನಾನು ಮಾಡಿಕೊಳ್ಳುತ್ತಿದ್ದೇನೆ. ಜೊತೆಗೆ

ಇವತ್ತು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳು ಈ ಕಡೆ ಗಮನ ಹರಿಸಬೇಕು.

ಅಧ್ಯಕ್ಷರು : ಅವರು ಕೇಳಿಸಿಕೊಳ್ಳುತ್ತಾರೆ. ಮಂತ್ರಿಗಳಲ್ಲೆಲ್ಲಾ ಇದೊಂದು ಹವ್ಯಾಸ.

ಶ್ರೀ ಮಂಜುನಾಥ್ ಸಿ. ಕನ್ನಾರ್ : ಕಂದಾಯ ಮಂತ್ರಿಗಳು ಈ ಕಡೆ ಗಮನ ಹರಿಸಬೇಕು. ಹಾವೇರಿ ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಜಿಲ್ಲಾ ಪುನರ್ ವಿಂಗಡಣೆ ಮಾಡತಕ್ಕ ಸಂದರ್ಭದಲ್ಲಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಗ್ರಾಮ ಲೆಕ್ಕಿಗರ ಹುದ್ದೆ ತಮ್ಮ ಇಲಾಖೆಯಲ್ಲಿ ಬಹಳಷ್ಟು ಕಡಿಮೆ ಇದ್ದು ಕೆಲಸ ಸ್ಥಗಿತವಾಗಿದೆ, ಅದನ್ನು ಕೂಡಲೇ ಭರ್ತಿ ಮಾಡತಕ್ಕ ಕೆಲಸ ಮಾಡಬೇಕು.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : 137 ಸರ್ವೇಯರ್ಸ್ ಕಡಿಮೆ ಇದ್ದಾರೆ. ಅವರನ್ನು ರಿಕ್ರೂಟ್‌ಮೆಂಟ್ ಮಾಡಬೇಕೆಂದಿದ್ದೇವೆ. ಈ ಒಂದು 50 ಪರ್ಸೆಂಟ್ ಮೀಸಲಾತಿ ಏನು ಇದೆ, ಅದು ತಯಾರಾಗಿರಲಿಲ್ಲ. ಈಗ ಅದು ಆಗಿದೆ. ಆ ಕೆಲಸವನ್ನೂ ಮಾಡುತ್ತಿದ್ದೇವೆ ಮತ್ತೆ ಹಾವೇರಿಯನ್ನು ಜಿಲ್ಲೆಯನ್ನಾಗಿ ಮಾಡಿ ಎಂಬುದಾಗಿ ಮಾನ್ಯ ಸದಸ್ಯರು ಕೇಳಿದ್ದಾರೆ. ಜಿಲ್ಲೆಯಾಗಬೇಕೆಂಬ ಒತ್ತಾಯ ಇದೆ. ರೀತಿ ರಾಜ್ಯದಲ್ಲಿ ಬೇರೆ ಬೇರೆ ಕಡೆಯೂ ಇದೆ. ಆದರೆ ಈ ವರ್ಷ ನಾವು ಮಾಡಲಾರೆವು. ಮುಂದಿನ ವರ್ಷದಲ್ಲಿ ಅವುಗಳನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಂಜುನಾಥ್ ಸಿ. ಕನ್ನೂರು : ಇನ್ನು 77ಪಟ್ಟಣಗಳಿಗೆ ಕುಡಿಯುವ ನೀರು ಒದಗಿಸುವ ಜವಾಬ್ದಾರಿಯನ್ನು ಹೊತ್ತಿದ್ದಾರೆ. ವಸ್ತುಸ್ಥಿತಿ ಇವರು 77ಪಟ್ಟಣಗಳಿಗೆ ಕುಡಿಯುವ ನೀರನ್ನು ಒದಗಿಸುವ ಪರಿಸ್ಥಿತಿಯಲ್ಲಿದ್ದಾರೆಯೇ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಶಿಗ್ಗಾವಿ ಸವಣೂರು ಮತ್ತು ಸಂಕಾಪುರ ಸಂಯುಕ್ತ ಕುಡಿಯುವ ನೀರಿನ ಯೋಜನೆ ಮಾಡಿ ವರದಾ ನದಿಯಿಂದ ನೀರನ್ನು ತರುವ ಕೆಲಸ ಈಗಾಗಲೇ ಪ್ರಾರಂಭವಾಗಿದೆ. ಅಲ್ಲಿ ನಾಗನೂರು ಕೆರೆಯನ್ನು ಅಳ ಮಾಡುವಲ್ಲಿ ಸುಮಾರು 5ಕೋಟಿ ರೂಪಾಯಿ ಖರ್ಚುಮಾಡಿ ಈಗಾಗಲೇ ನೀರು ಸಂಗ್ರಹದ ಕೆಲಸ ಮಾಡಿದ್ದಾರೆ. ಅಲ್ಲಿ ರೈತರು ಜಮೀನು ಕಳೆದುಕೊಂಡು ಒಂದು ವರ್ಷವಾಯಿತು. ಅವರಿಗೆ ಪರಿಹಾರದ ಹಣವನ್ನು ಇನ್ನು ಕೊಟ್ಟಿಲ್ಲ ರೈತರಿಗೆ ಪರಿಹಾರದ ಹಣವನ್ನು ವ್ಯವಸ್ಥೆಯನ್ನು ಕೂಡಲೇ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಶಿಗ್ಗಾಂವ್‌ನ ಸವಣೂರು ಕ್ಷೇತ್ರ ರಾಜ್ಯದಲ್ಲಿಯೇ ಅತಿ ಕಡಿಮೆ ವೋಲ್ಟೇಜ್ ಇರತಕ್ಕ ಕ್ಷೇತ್ರ ಎನ್ನತಕ್ಕದ್ದನ್ನು ನಾವು ತಿಳಿದುಕೊಂಡಿದ್ದೇವೆ. ಅಧಿಕಾರಿಗಳು ಕೂಡ ಇದನ್ನು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಅಲ್ಲಿ 33ಕೆವಿ ವಿದ್ಯುತ್ ಬೇಕಾಗುತ್ತದೆ. ಅಲ್ಲಿ 150ಕೆವಿ ಸ್ಟೇಷನ್‌ಮಾಡಬೇಕಾಗಿದೆ. ಅಲ್ಲಿನ ಪರಿಸ್ಥಿತಿ ಹೇಗಿದೆ ಅಂದರೆ ಕುಡಿಯುವ ನೀರು ಒದಗಿಸಲಿಕ್ಕೆ ಮೋಟಾರು ಓಡಲಿಕ್ಕೆ ಬೇಕಾದ ವೋಲ್ಟೇಜ್ ಇಲ್ಲ, ವಿದ್ಯಾರ್ಥಿಗಳಿಗೂ ಓದಲಿಕ್ಕೆ ವಿದ್ಯುತ್‌ಇಲ್ಲ. ಜನರಿಗೆ ಸಾಯಃಕಾಲ ಹಿಟ್ಟಿನ ಗಿರಣಿಗೆ ಹೋಗಿ ಹಿಟ್ಟು ಮಾಡಿಸಿಕೊಂಡು ಬರಲಿಕ್ಕೆ ವಿದ್ಯುತ್ ವೋಲ್ಟೇಜಿನ ತೊಂದರೆಯಾಗಿದೆ. ವಿದ್ಯುತ್ ವೋಲ್ಟೇಜ್ ಇಂಪ್ರೂವ್ ಮಾಡುವ ಕೆಲಸವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಇನ್ನು ಸಾರಿಗೆ ಇಲಾಖೆಯಲ್ಲಿ ನಮಗೆ ಬಹಳಷ್ಟು ತೊಂದರೆಯಾಗಿದೆ. ಬಹಳಷ್ಟು ಜನ ಬಸ್‌ಗಳ ಟಾಪ್‌ಗಳ ಮೇಲೆ ಆಡ್ಡಾಡುತ್ತಾರೆ.ಅದರ ಜೊತೆಗೆ ಷೆಡ್ಯುಲ್

ಬಸ್‌ಗಳು ಇದ್ದರೂ ಕೂಡ ನಮ್ಮ ಜಿಲ್ಲೆಯಲ್ಲಿ ಬಹಳಷ್ಟು ಕಡಿಮೆ ಪ್ರಮಾಣದಲ್ಲಿ ಬಸ್‌ಗಳು ಓಡಾಡುವುದರಿಂದ ತೊಂದರೆ ಯಾಗಿದೆ. ಆ ಕಾರಣಕ್ಕೆ ಇವತ್ತು ಯಾವ ಗ್ರಾಮಗಳಿಗೂ ಬಸ್‌ಗಳು ಇಲ್ಲ. ಆದ್ದರಿಂದ ಹೆಚ್ಚು ಬಸ್‌ಗಳನ್ನು ಓಡಿಸುವ ಪ್ರಯತ್ನ ಮಾಡಬೇಕು. ಷೆಡ್ಯೂಲ್ ಬಸ್‌ಗಳನ್ನು ನಗರಪ್ರದೇಶಗಳಲ್ಲಿ ಕಡಿಮೆ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಮಾಡಿ. ಹೊಸ ಬಸ್‌ಗಳನ್ನು ಖರೀದಿ ಮಾಡಿ ಸಾರಿಗೆ ವ್ಯವಸ್ಥೆಯನ್ನು ಉತ್ತಮ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕೃಷಿ ಇಲಾಖೆಯ ಬಗ್ಗೆ ಹೇಳುವುದಾದರೆ, ಈವೊಂದು ಇಲಾಖೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಇವತ್ತು ಉದಾಹರಣೆ ನಮ್ಮ ಜಿಲ್ಲೆಯಲ್ಲಿ ಹತ್ತಿ ಮತ್ತು ಕಬ್ಬನ್ನು ಹೆಚ್ಚು ಬೆಳೆಯುತಕ್ಕ ರೈತರು ಇದ್ದಾರೆ. ಆ ಕಾರಣಕ್ಕೆ ಕಬ್ಬು ಬೆಳೆಗಾರರಿಗೆ ಸರಿಯಾದ ರೀತಿಯಲ್ಲಿ ಹಣ ಸಿಗುತ್ತಿಲ್ಲ. ಮಾನ್ಯ ನಾಗೇಗೌಡರು ಕರ್ನಾಟಕ ರಾಜ್ಯದಲ್ಲಿ ಕೇವಲ 18 ಸಕ್ಕರೆ ಕಾರ್ಖಾನೆಗಳಿವೆ. ಅಂತ ಹೇಳುತ್ತಿದ್ದರು. ಮಾಹಾರಾಷ್ಟ್ರದಲ್ಲಿ ಸುಮಾರು 109 ಸಕ್ಕರೆ ಕಾರ್ಖಾನೆಗಳಿವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮೊನ್ನೆ ನಾನೇ ಒಂದು ಪ್ರಶ್ನೆಯನ್ನು ಹಾಕಿದಾಗ ಮಹಾರಾಷ್ಟ್ರ ಮತ್ತು ಕೊಲ್ಲಾಪುರಗಳಿಗೆ ಕಬ್ಬನ್ನು ಕಳುಹಿಸಲಿಕ್ಕೆ ಕಡಿಯಲಿಕ್ಕೆ ಪರವಾಗಿ ಕೊಟ್ಟಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಬೆಳೆದಂತಹ ಕಬ್ಬು ಬೆಳೆಗಾರರಿಗೆ ಯೋಗ್ಯವಾದ ಧಾರಣೆಯನ್ನು ಸಿಗುವಂತೆ ಮಾಡಬೇಕು. ಹೆಚ್ಚಿನ ಸಕ್ಕರೆ ಕಾರ್ಖಾನೆಗಳು ನಮ್ಮಲ್ಲಿ ಹಾಕಲಿಕ್ಕೆ ಅನುಮತಿಯನ್ನು ಕೊಡಬೇಕು. ಇವತ್ತು ನಮ್ಮ ರೈತರು ಬೆಳೆದಂತಹ ಬೆಳೆಗಳಿಗೆ ಯೋಗ್ಯವಾದ ಬೆಲೆ ಸಿಗುವಂತಾಗಬೇಕೆನ್ನುವುದು ಒಂದು ವಾದ. ಪ್ರತಿ ಗ್ರಾಮಗಳಲ್ಲಿ ರೈತರು ಸಾಲ ಮನ್ನಾ ಮಾಡಿ ಬಡ್ಡಿ ಮನ್ನಾ ಮಾಡಿ ಎಂದು ಅವರು ನಿರೀಕ್ಷೆ ಮಾಡುವುದಿಲ್ಲ ಇವತ್ತು ನಮಗೆ ಸರಿಯಾದ ಬೆಲೆಯನ್ನು ಕೊಡಿ ನಾವೇ ಸರ್ಕಾರಕ್ಕೆ ಕೊಡುತ್ತೇವೆಂದು ಅನೇಕ ಸಂದರ್ಭಗಳಲ್ಲಿ ಹೇಳಿದ್ದಾರೆ. ಈ ಬಗ್ಗೆ ಸಮಗ್ರವಾದ ಚಿಂತನೆ ಮತ್ತು ರೂಪುರೇಷೆಗಳನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಇನ್ನು ಶಿಕ್ಷಣದ ಬಗ್ಗೆ ಕೂಡ ಇವತ್ತು ಗುಣಮಟ್ಟ ಅತಿ ಕಡಿಮೆಯಿದೆ. ಆ ಕಾರಣ ಇವತ್ತು ಗ್ರಾಮಾಂತರ ಪ್ರದೇಶಗಳಿಗೆ ಶಿಕ್ಷಕರನ್ನು ಕೆಲಸವನ್ನು ಮಾಡುತ್ತಿಲ್ಲ. ಇವತ್ತು ಹೆಚ್ಚು ಶಿಕ್ಷಕರನ್ನು ಒದಗಿಸಬೇಕು. ಶಾಲಾ ಕಟ್ಟಡಗಳನ್ನು ಕಟ್ಟಿಸಬೇಕು, ಗುರುಭವನಗಳನ್ನು ಕಟ್ಟಿಸಬೇಕು. ಎಲ್ಲಿ ಶಾಲೆಗಳು ಇವೆ, ಅಲ್ಲಿ ಪ್ರತಿಯೊಂದು ಶಾಲೆಗೆ ಕನಿಷ್ಟಪಕ್ಷ ಒಂದಾದರೂ ಕೂಡ ಕುಡಿಯುವ ನೀರಿನ ಯೋಜನೆಯನ್ನು ಮಾಡಬೇಕು. ಇದನ್ನು ಮಾಡದೆ ಇವತ್ತು ಬಹಳ ತಪ್ಪನ್ನು ಎಸಗುತ್ತಿದ್ದೇನೆ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಇವತ್ತಿನ ಶಿಕ್ಷಣ ಮಟ್ಟವನ್ನು ಸುಧಾರಿಸತಕ್ಕದ್ದು ಸಾಕಷ್ಟು ಇದೆ.

ಇನ್ನು ನೀರಾವರಿಯ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಈ ವಿಷಯದ ಬಗ್ಗೆ ಮಾತನಾಡಲು ಮಾನ್ಯ ಸಭಾಧ್ಯಕ್ಷರು ಅನುಮತಿಯನ್ನು ಕೊಟ್ಟಿರತಕ್ಕದ್ದು ಬಹಳ ಸಂತೋಷ. ಆ ಕಾರಣ ಈ ಇಲಾಖೆಯ ಬಗ್ಗೆ ಹೆಚ್ಚು ಮಾತನಾಡದೆ ನಮ್ಮ ಧಾರವಾಡ ಜಿಲ್ಲೆಯ ದಕ್ಷಿಣ ಭಾಗಕ್ಕೆ ತುಂಗಾ ಮೇದೆ ಯೋಜನೆಯನ್ನು ಜಾರಿಗೆ ತರಬೇಕು ಎನ್ನುವ ಒತ್ತಾಯ ಬಹಳ ದಿವಸಗಳಿಂದ ಇದೆ.

ಈ ಯೋಜನೆಗೆ ಮಂಜೂರಾತಿಯನ್ನು ಒದಗಿಸಿ ಇದಕ್ಕೆ ಸಾಕಷ್ಟು ಹಣವನ್ನು ಸರ್ಕಾದಿಂದ ಒದಗಿಸಿ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನನಗೆ ಮಾತನಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಮಾನ್ಯಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಜಗದೀಶ್‌ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜರೋಹಣ ಸಮಸ್ಯೆಯನ್ನು ಬಿಡಿಸಿದ ಬಗ್ಗೆ ಹೇಳಿ ಅವೊಂದು ತತ್ವದ ಮೇಲೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಒಳ್ಳೆಯ ರೀತಿಯಲ್ಲಿ ನಡೆಸುತ್ತಿದ್ದೇವೆಂದು ಹೇಳಿದ್ದಾರೆ. ಇವತ್ತು ಈದ್ಗಾಮೈದಾನದಲ್ಲಿ ರಾಷ್ಟ್ರಧ್ವಜರೋಹಣ ಗೌರವಯುತವಾಗಿ ಆಗಬೇಕೆಂದು ಭಾರತೀಯ ಜನತಾ ಪಕ್ಷದವರು ಮೂರ ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿದ್ದೇವೆ. ಜನವರಿ 26ನೇ ತಾರೀಖು ಗೌರವಯುತವಾಗಿ ಅಲ್ಲಿ ರಾಷ್ಟ್ರಧ್ವಜಾರೋಹಣ ಆಗದಿದ್ದರೆ ಮುಂಬರುವ ದಿವಸಗಳಲ್ಲಿ ಸಮಸ್ಯೆ ಸರ್ಕಾರಕ್ಕೆ ತಲೆನೋವಾಗುತ್ತಿತ್ತು. ಆದ್ದರಿಂದ ಈ ಸಮಸ್ಯೆಯನ್ನು ಬಿಡಿಸಲಾಯಿತು. ಜನತೆಯ ಒತ್ತಡ ಸಹ ಇತ್ತು. ಅಲ್ಲಿಂದ ಇಬ್ಬರು ಭಾರತೀಯ ಜನತಾ ಪಕ್ಷದ ಸದಸ್ಯರು ಆರಿಸಿ ಬಂದಿದ್ದೇವೆ. ರಾಷ್ಟ್ರಧ್ವಜವನ್ನು ಹಾರಿಸುವಂತಹ ಸಂದರ್ಭದಲ್ಲಿ ರಾಷ್ಟ್ರಧ್ವಜವನ್ನು ಗೌರವಯುತವಾಗಿ ಅಲ್ಲಿ ಹಾರಿಸಬೇಕೆಂದು ತೀರ್ಮಾನ ಕೊಟ್ಟಿದ್ದರು. ಆ ಒತ್ತಡದಲ್ಲಿ ಸರ್ಕಾರ ಸಮಸ್ಯೆಯನ್ನು ಬಿಡಿಸಬೇಕಾಯಿತು. ರಾಷ್ಟ್ರರಧ್ವಜವನ್ನು ಹಾರಿಸಿದ್ದೇವೆಂದು ದೊಡ್ಡಜಂಬ ಕೊಚ್ಚಿಕೊಳ್ಳುವ ಪ್ರಸಂಗವೇನಿಲ್ಲ. ಭಾರತೀಯ ಜನತಾ ಪಕ್ಷದ ಶಾಸಕರು ಸಹಕಾರ ಕೊಡದಿದ್ದರೆ, ಭಾರತೀಯ ಜನತಾ ಪಕ್ಷದ ನಾಯಕರು ಸಹಕಾರ ಕೊಡದಿದ್ದರೆ ಏನಾಗುತ್ತಿತ್ತು. ಎನ್ನವುದನ್ನು ತಿಳಿದುಕೊಳ್ಳಬೇಕಾಗುತ್ತದೆ. ರಾಷ್ಟ್ರಧ್ವಜರೋಹಣ ಮಾಡುವಂತಹ ಸಂದರ್ಭದಲ್ಲಿ ನಮ್ಮನ್ನು ಸೌಜನ್ಯಕ್ಕಾದರೂ ಕರೆಸಬೇಕಾಗಿತ್ತು. ಜನತೆ ನಮ್ಮನ್ನು ಅಲ್ಲಿ ಕೇಳಿದರು,ನೀವು ಏಕೆ ಹೋಗಲಿಲ್ಲವೆಂದು? ಆಗ ನಾವು ಹೇಳಿದ್ದೇವೆ, ಸಮಸ್ಯೆಯನ್ನು ಬಗೆಹರಿಸಬೇಕಾಗಿದೆ ಅದು ಶಾಂತಿಯುತವಾಗಿ ಬಗೆಹರಿಸಬೇಕಾಗಿದೆ ನಮ್ಮ ಉದ್ದೇಶವೇನು ರಾಷ್ಟ್ರಧ್ವಜಾರೋಹಣ ಗೌರವಯುತವಾಗಿ ಆಗಬೇಕು ಅದಕ್ಕೆ ತಾಳ್ಮೆವಹಿಸಕೊಂಡು, ಅದಕ್ಕೆ ಸಹಕಾರ ಕೊಟ್ಟಿದ್ದೇವೆ. ಗೌರವಯುತವಾಗಿ ರಾಷ್ಟ್ರಧ್ವಜಾರೋಹಣದ ಸಮಸ್ಯೆ ಬಗೆಹರಿಸುವುದಕ್ಕೆ ಎಲ್ಲರ ಒಂದು ಸಹಕಾರ ಇದೆಯೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಬಗ್ಗೆ ಮಾತನಾಡುತ್ತಾ ಒಂದೆರೆಡು ಘಟನೆಗಳ ಬಗ್ಗೆ ಹೇಳಬಯಸುತ್ತಿದ್ದೇನೆ. ದರೋಡೆ ಪ್ರಕರಣ ಧಾರವಾಡದ ಹತ್ತಿರ ಗೋವ-ಬೆಂಗಳೂರು ಹೆದ್ದಾರಿಯಲ್ಲಿ ಧಾರವಾಡದ 13ಕಿಲೋಮೀಟರ್ ದೂರದ ಹೊನ್ನಾಪುರದ ಬಳಿ ಡಕಾಯಿತರ ಗುಂಪು ಮೂರು ಬಸ್ಸುಗಳನ್ನು ಟ್ಯಾಂಕರ್ ಮತ್ತು ಲಾರಿಯನ್ನು ತಡೆದು ಚಾಲಕರು ಮತ್ತು ಪ್ರಯಾಣಿಕರ ಮೇಲೆ ದಾಳಿ ಮಾಡಿ 2ಲಕ್ಷ ಮೌಲ್ಯದ ಚಿನ್ನ ಮತ್ತು ಹಣದೊಂದಿಗೆ ಪರಾರಿಯಾದರು. 36ಜನ ಗಾಯಗೊಂಡರು. ನಮ್ಮ ಕ್ಷೇತ್ರದ ವ್ಯಕ್ತಿಯಾದ ಮಹಾರುದ್ರಪ್ಪ ಶಿವಪ್ಪ ಅಂಗಡಿ ಅವರು ಮೃತಪಟ್ಟರು. ಆತ ಅಂಗಡಿ ವ್ಯಾಪಾರಸ್ಥ ಆತ ದರೋಡೆಯಲ್ಲಿ ಮೃತಪಟ್ಟ. ಇಬ್ಬರು ಸಣ್ಣ ಮಕ್ಕಳು ಕಿರಿಯ ವಯಸ್ಸಿನ ಹೆಂಡತಿ ವಿಧವೆ ಅವರಿಗೆ ಏನು ಪರಿಹಾರ? ಇವತ್ತಿನವರೆಗೆ ಸರ್ಕಾರ ಏನೂ ಪರಿಹಾರವನ್ನು ಅವರ ಮನೆತನದವರಿಗೆ ಕೊಟ್ಟಿಲ್ಲ. ಬೀದರ್‌ನ ಹುಮ್ನಬಾದ್‌ನ ಹತ್ತಿರ ಒಂದು ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ 15ಮಂದಿ ಡಕಾಯಿತರ ತಂಡ 10ವಾಹನಗಳ ಮೇಲೆ ಒಂದಾದರ ಮೇಲೆ ಒಂದರಂತೆ ದಾಳಿ ಮಾಡಿ 4 ಜನರನ್ನು ಗಾಯಗೊಳಿಸಿ ಸುಮಾರು 15ಲಕ್ಷ ರೂಪಾಯಿಗಳನ್ನು ದರೋಡೆ ಮಾಡಿದರು. ಈ ರೀತಿ ದರೋಡೆಗಳು ನಡೆಯುತ್ತಿವೆ.

ಇದು ಕೇವಲ ಫೆಬ್ರವರಿ ತಿಂಗಳಿನಲ್ಲಿ ಆಗಿದ್ದು. ಮುಖ್ಯವಾಗಿ ಧಾರವಾಡದ ಹತ್ತಿರ ಆದಂಥ ದರೋಡೆ ಅದು ನಿನ್ನೆ ಮೊನ್ನೆಯಲ್ಲ ಫೆಬ್ರವರಿಯಲ್ಲಿ ಆಗಿದ್ದು, ಹಿಂದೆ 1992ರ ನವೆಂಬರ್ ತಿಂಗಳಿನಲ್ಲಿ ಆಗಿತ್ತು. 1994ನೇ ಇಸವಿ ಜೂನ್‌ನಲ್ಲಿ ಇದೇ ಹೆದ್ದಾರಿಯಲ್ಲಿ ಇದೇ ಸ್ಥಳದಲ್ಲಿ ದರೋಡೆಯಾಗಿತ್ತು. ಆದರೂ ಏಕೆ ಮುಂಜಾಗ್ರತೆ ಕ್ರಮವನ್ನು ಕೈಗೊಳ್ಳಲಿಲ್ಲ? ಗೃಹ ಇಲಾಖೆಯವರ ಹತ್ತಿರ ಮಾಹಿತಿ ಇರಲಿಲ್ಲವೆ?

ಪೆಟ್ರೋಲಿಂಗ್ ಮಾಡುತ್ತೇವೆಂದು ಹೇಳಿದರು. ಪೋಲೀಸರಿಂದ ಗಸ್ತು ಮಾಡಿಸುತ್ತೇವೆಂದು ಹೇಳಿದರು. ಏಕೆ ಆ ಸಂದರ್ಭದಲ್ಲಿ ಅಲ್ಲಿ ಇರಲಿಲ್ಲ?ಇದಕ್ಕೆ ಗೃಹಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಇಂತಹ ಇನ್ನೂ ಹಲವಾರು ಪ್ರಕರಣಗಳು ಇವೆ. ಡಾ|| ಜೀವರಾಜ ಆಳ್ವರವರು ಹಲವಾರು ಘಟನೆಗಳ ಬಗ್ಗೆ ಹೇಳಿದ್ದಾರೆ.ನಾನು ಅದನ್ನೇ ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ.

ಆದರೆ ಹುಬ್ಬಳ್ಳಿಯಲ್ಲಿ ಮೊನ್ನೆ ಮಾರ್ಚ್ 21ನೇ ತಾರೀಕು ಏನು ಆಯಿತು? ಹತ್ತು ದಿವಸಗಳ ಹಿಂದೆ ಗಲಾಟೆಯಾಗಿತ್ತು. ಮೊನ್ನೆ ಅಕಸ್ಮಾತ್ ಗಲಾಟೆ ಪ್ರಾರಂಭವಾಯಿತು. ಕಮರಿಪೇಟೆ ಒಂದು ಸೆನ್ಸಿಟಿವ್ ಏರಿಯಾ ಎಂದು ಎಲ್ಲರಿಗೂ ಗೊತ್ತಿದೆ. ಪೋಲೀಸ್ ಡಿಪಾರ್ಟ್‌ಮೆಂಟ್‌ನವರಿಗೆ, ಗೃಹಇಲಾಖೆಯವರಿಗೆ, ಸಾರ್ವಜನಿಕರಿಗೆ ಎಲ್ಲರಿಗೂ ಗೊತ್ತಿದೆ. ಎಲ್ಲರಿಗೂ ಗೊತ್ತಿರತಕ್ಕಂಥ ಕಮರಿಪೇಟೆ ಅಥವಾ ಮುಲ್ಲಾ ಓಣಿಯಲ್ಲಿ ಹೋದವರ್ಷ ಹೋಳಿಹುಣ್ಣಿಮೆ ಸಂದರ್ಭದಲ್ಲಿ ನನ್ನ ಜೊತೆಯಲ್ಲಿ ಮಿತ್ರರಾದ ಅಶೋಕ ಕಾಟ್ವೆಯವರು ಇದ್ದರು. ಸಾವಿರಾರು ಜನ ಪೋಲೀಸರನ್ನು ಬಂದೋಬಸ್ತಿಗಾಗಿ ನೇಮಿಸಲಾಗಿತ್ತು. ಈ ಸಲ ಕೇವಲ ಹತ್ತು ಮಂದಿ ಕಾನ್‌ಸ್ಟೇಬಲ್‌ಗಳು ಇದ್ದರು. ಒಂದು ಜೀಪ್ ಮಾತ್ರ ಇತ್ತು. ಒಬ್ಬ ಇನ್‌ಸ್ಪೆಕ್ಟರ್ ಮಾತ್ರ ಇದ್ದರು. ಇಂತಹ ಒಂದು ಸೆನ್ಸಿಟೀವ್ ಏರಿಯಾದಲ್ಲಿ ಪೋಲೀಸಿನವರಿಗೆ ಸರಿಯಾಗಿ ಬಂದೋಬಸ್ತ್ ಮಾಡುವುದಕ್ಕೆ ಆಗಲಿಲ್ಲ. ಇದು ಎಲ್ಲರಿಗೂ ಗೊತ್ತಿದೆ. ಇದು ಒಂದು ಸೆನ್ಸಿಟೀವ್ ಏರಿಯಾ ಇದ್ದು, ಇಲ್ಲಿ ಗಲಾಟೆಯಾಗುವ ವಾಸನೆ ಮೊದಲೇ ಗೊತ್ತಿತ್ತು. ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಇದು ಸರ್ಕಾರಕ್ಕೆ ಪೋಲೀಸ್ ಡಿಪಾರ್ಟ್‌ಮೆಂಟ್‌ನವರಿಗೆ ಗೊತ್ತಿದ್ದರೂ ಕೂಡ, ಈ ಒಂದು ವಿಷಯದಲ್ಲಿ ಪೋಲೀಸ್‌ಕಮೀಷನರ್ ಅವರು ದಿನಾಂಕ 16-3-95ರಂದು ಒಂದು ನೋಟೀಸನ್ನು ಕೊಟ್ಟರು. ಹುಬ್ಬಳ್ಳಿ ನಗರದಲ್ಲಿ ಮಧ್ಯದ ಅಂಗಡಿಗಳನ್ನು ಐದು ದಿವಸಗಳ ಕಾಲ ಮುಚ್ಚಬೇಕು ಎಂದು ಹೇಳಿ ಒಂದು ನೋಟೀಸ್‌ನಲ್ಲಿ ಪೋಲೀಸ್ ಕಮೀಷನರ್ ಅವರು ಸ್ಪಷ್ಟವಾಗಿ ಬರೆದಿದ್ದಾರೆ.

ಹುಬ್ಬಳ್ಳಿ-ಧಾರವಾಡ ನಗರಗಳು ಮೊದಲಿನಿಂದಲೂ ಮತೀಯ ಮತ್ತು ರಾಜಕೀಯ ದೃಷ್ಟಿಯಿಂದ ಅತಿ ಸೂಕ್ಷ್ಮವಾದ ಪ್ರದೇಶವಾಗಿದ್ದು, ಇಲ್ಲಿ ವಿವಾದಾತ್ಮಕವಾಗಿರುವ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿದ್ದರಿಂದ ಮತೀಯ ಭಾವನೆ ಉದ್ಭವಿಸಬಹುದಾಗಿದೆ. ಈ ಹಬ್ಬದ ಆಚರಣೆಯ ಸಮಯದಲ್ಲಿ ಹಿಂದೆ ನಡೆದ ವಿದ್ಯಾಮಾನಗಳನ್ನು ಅವಲೋಕಿಸಿ ಮುಂಜಾಗರೂಕತೆಯ ಸಲುವಾಗಿ ಈ ನಗರಗಳಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡುವ ಸಲುವಾಗಿ ಮದ್ಯದ ಮಾರಾಟ ಮತ್ತು ಸೇವನೆಯನ್ನು ನಿಷೇಧಿಸಿ ಆಜ್ಞೆಯನ್ನು ಹರಡಿಸುವುದು ಅತಿಅವಶ್ಯಕವಾಗಿದೆ...

ಇದನ್ನು ನಾನು ಮಾನ್ಯ ಗೃಹಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ಅವರು ಈ ಪ್ರಕಾರವಾಗಿ ನೋಟೀಸ್ ಕಳಿಸಿ ಮಧ್ಯದ ಅಂಗಡಿಗಳನ್ನು ಬಂದ್ ಮಾಡಿದರು. ಇಲ್ಲಿ ಮತೀಯ ಗಲಭೆ ಆಗುವ ಸಂಭವವಿದೆ ಎಂದು ಅವರು ಹೇಳಿದ್ದಾರೆ. ಆದರೂ ಕೂಡ ಸರಿಯಾದ ಬಂದೋಬಸ್ತನ್ನು ಮಾಡಿಲಿಲ್ಲ. ಪೋಲೀಸ್ ಕಮೀಷನರ್‌ಅವರು ಘಟನೆ ನಡೆದ ಒಂದೆರಡು ದಿವಸಗಳ ನಂತರ ಬಂದರು. ತಮಗೆ ಗೊತ್ತಿದೆ, ಪೋಲೀಸ್ ಡಿಪಾರ್ಟ್‌ಮೆಂಟ್‌ನ ನಿರ್ಲಕ್ಷ್ಯದಿಂದ ಇದು ಆಗಿದೆ. ಇವತ್ತಿನವರೆಗೂ ಯಾರು ಪೋಲೀಸ್ ಅಧಿಕಾರಿಗಳ ನಿರ್ಲಕ್ಷ್ಯದಿಂದ ಇದು ಆಗಿದೆ, ಆ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವ ಗಟ್ಸ್ ಸರ್ಕಾರಕ್ಕೆ ಇಲ್ಲ. ಇದರ ಹಿನ್ನಲೆ ಏನು? ನಾವು ಧರಣಿ ಕೂತಿದ್ದೆವು. ನಾಲ್ಕು ದಿವಸಗಳವರೆಗೆ ಅವ್ಯಾಹತವಾಗಿ ಇದು ನಡೆಯಿತು. ಚೂರಿ ಇರಿತ, ರೊಂಬಿ, ಎಲ್ಲ ನಡೆದಿದೆ. ನೇಮಿಚಂದ್ರ ಎನ್ನತಕ್ಕಂಥ ಎಲೆಕ್ಟ್ರಿಕ್ ವ್ಯಾಪಾರಸ್ತನ ಅಂಗಡಿ ಸಂಪೂರ್ಣವಾಗಿ ಭಸ್ಮವಾಯಿತು. ಮಾನ್ಯ ಗೃಹಮಂತ್ರಿಗಳು

21ನೇತಾರಿಕು ರಾತ್ರಿ ಇಲ್ಲಿಂದ ಹೋದರು. ಮೂರನೇ ದಿವಸ ನಾವು ಹೋದೆವು. ಅವತ್ತು ಸಾಯಂಕಾಲ ನಾವು ಗೃಹಮಂತ್ರಿಗಳನ್ನು ಭೇಟಿಯಾಗಿದ್ದೆವು. ಅಂದು ಸಾಯಂಕಾಲದವರೆಗೂ ಕರ್ಫ್ಯೂ ವಿಧಿಸಲಿಲ್ಲ. ಯಾವುದಾದರೂ ಸಣ್ಣ ಘಟನೆಯಾದರೆ ತಕ್ಷಣ ಹುಬ್ಬಳ್ಳಿ ನಗರದಲ್ಲಿ ಕರ್ಫ್ಯೂ ಹಾಕುತ್ತಾರೆ. ಆದರೆ ಮಾರನೆಯ ದಿವಸ ಆರುಗಂಟೆಯಾದರೂ ಕರ್ಫ್ಯೂ ವಿಧಿಸಲಿಲ್ಲ, ಚೂರಿ ಇರಿತವಾಗಿದೆ, ದೊಂಬಿ ನಡೆದಿದೆ. ಆದರೂ ಕೂಡ ಕರ್ಫ್ಯೂವನ್ನು ಏಕೆ ವಿಧಿಸಲಿಲ್ಲವೆಂದು ಕೇಳಿದಾಗ ಆರು ಗಂಟೆಗೆ ಕರ್ಫ್ಯೂವನ್ನು ವಿಧಿಸಿದರು. ಅಲ್ಲಿ ಗೃಹಮಂತ್ರಿಗಳು ಇದ್ದರು, ಡಿ.ಜಿ.ಪಿ.ಯವರು ಇದ್ದರು, ಆದರೂ ಕೂಡ ಗಲಭೆ ನಡೆಯುತ್ತಿತ್ತು. ಇದು ಸತತವಾಗಿ ಮೂರು ದಿವಸ ನಡೆಯಿತು. ಇದಕ್ಕೆ ಮುಖ್ಯ ಕಾರಣವೇನೆಂದರೆ ಪೋಲೀಸ್ ವ್ಯವಸ್ಥೆ ಸಂಪೂರ್ಣವಾಗಿ ಹಾಳಾಗಿದ್ದುದು ಆಗಿದೆ.

ಅಧ್ಯಕ್ಷರು : ಅಲ್ಲಿ ಅಕ್ರಮವಾರಗಿರುವ ಮಧ್ಯ ಕೂಡ ಸಿಕ್ಕಿದೆ ಎಂದು ನಾನು ಕೇಳಿದೆ. ಇಲ್ಲಿಸಿಟ್ ಲಿಕ್ಕರ್ ಕೂಡ ಸಿಕ್ಕದೆಯೆಂದು ಕಾಣುತ್ತದೆ. ಪೋಲೀಸರು ಬಹಳಷ್ಟು ಹಿಡಿದರು ಎಂದು ನಾನು ಪತ್ರಿಕೆಯಲ್ಲಿ ಓದಿದೆ.

ಶ್ರೀ ಜಗದೀಶ ಶೆಟ್ಟರ್ : ಈಗ ಈ ಒಂದು ಘಟನೆಯನ್ನು ಮಧ್ಯ ವ್ಯಾಪಾರಸ್ತರ ಮೇಲೆ ಚೇಂಜ್ ಮಾಡುತ್ತಿದ್ದಾರೆ. ನಿಜವಾದ ಸತ್ಯಸಂಗತಿ ಏನಿದೆ ಅದನ್ನು ಮರೆಮಾಚಿ ಇದಕ್ಕೆ ಬೇರೆ ರೂಪವನ್ನು ಈಗ ಕೊಡುತ್ತಿದ್ದಾರೆ. ಏಕೆಂದರೆ....

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶೆಟ್ಟರ್ ಅವರು ಏನು ಹೇಳಿದ್ದಾರೆ ಅದು ಸರಿಯಲ್ಲ. ನಾನು ಹೆಲಿಕಾಪ್ಟರ್‌ನಲ್ಲಿ ಘಟನೆ ನಡೆದ ದಿವಸ ನಾಲ್ಕು ಗಂಟೆಯೊಳಗೆ ಡಿ.ಜಿ.ಪಿ. ಅವರ ಜೊತೆಯಲ್ಲಿ ಹೋಗಿದ್ದೇನೆ. ಬಹುಶಃ ಈ ರೀತಿ ಕೋಮು ಗಲಭೆ ನಡೆದ ನಾಲ್ಕು ಗಂಟೆ ಒಳಗಡೆ ಶಾಂತಿಯನ್ನು ಅಲ್ಲಿ ತರುವುದಕ್ಕೆ ಮತ್ತು ಅಲ್ಲಿನ ಪರಿಸ್ಥಿತಿಯನ್ನು ನಿಯಂತ್ರಣ ಮಾಡುವುದಕ್ಕೆ, ಪೋಲೀಸರು ಬಂದೋಬಸ್ತು ಮಾಡುವುದಕ್ಕೆ ಗೃಹಮತ್ರಿಗಳು ಅಥವಾ ಇಲಾಖೆಯ ಮುಖ್ಯಸ್ಥರು ನಾಲ್ಕು ಗಂಟೆಯೊಳಗಡೆ ಹೋಗಿರತಕ್ಕಂಥಾದ್ದು ಇದೇ ಮೊದಲನೇ ಸಾರಿ ಇದು ಒಂದು. ಎರಡನೆಯದಾಗಿ ಇವರು ಏನು ಹೇಳುತ್ತಿದ್ದಾರೆಂದರೆ ಇವರು ಬಂದು ಹೇಳಿದ ಮೇಲೆ ಕರ್ಫ್ಯೂವನ್ನು ಅಲ್ಲಿ ವಿಧಿಸಲಾಯಿತು ಎಂದು. ಅದು ಹಾಗಲ್ಲ. ಕರ್ಫ್ಯೂವನ್ನು ಯಾವಾಗ ಹಾಕಬೇಕು, ಯಾವ ಏರಿಯಾದಲ್ಲಿ ಹಾಕಬೇಕು, ಎಲ್ಲಿ ಹಾಕಬೇಕು ಎಂದು ಹೇಳತಕ್ಕಂಥಾದ್ದು ಪೋಲೀಸ್ ಅಧಿಕಾರಿಗಳು ನಿರ್ಧಾರ ಮಾಡತಕ್ಕಂಥ ವಿಚಾರ. ಇದು ಎರಡನೇಯದು. ಮೂರನೆಯದಾಗಿ, ನಾನು ತಮಗೆ, ಸದನಕ್ಕೆ ಮತ್ತು ರಾಜ್ಯದ ಜನತೆಗೆ ಹೇಳಬೇಕಾಗುತ್ತದೆ. ಈ ಮಧ್ಯಸಾರ ವ್ಯವಹಾರ ಏನು ನಡೆಯುತ್ತಿತ್ತು, ಇವರನ್ನು ಹಿಡಿದ ತಕ್ಷಣ, ಅನೇಕರಿಂದ ಮಾರಕಾಸ್ತ್ರಗಳನ್ನು ಹಿಡಿದ ತಕ್ಷಣ, ಕೆಲವು ಗೂಂಡಾ ವ್ಯಕ್ತಿಗಳನ್ನು ಹಿಡಿದ ತಕ್ಷಣ ಪರಿಸ್ಥಿತಿ ಹತೋಟಿಗೆ ಬರಬೇಕಾದರೆ ಇದಕ್ಕೆ ಕಾರಣ ಏನು? ಈಗ ನಡೆದಿದ್ದುದು ನಡೆದುಹೋಗಿದೆ. ಇಂತಹ ಪರಿಸ್ಥಿತಿ ಇನ್ನು ಬೇರೆ ಕಡೆ ಆಗಬಾರದು. ಹುಬ್ಬಳ್ಳಿಯಲ್ಲೂ ಆಗಬಾರದು. ಇದರ ಬಗ್ಗೆ ಮಾನ್ಯ ಸದಸ್ಯರು ನನಗೆ, ನಮ್ಮ ಸರ್ಕಾರಕ್ಕೆ ಸಲಹೆಗಳನ್ನು ಕೊಟ್ಟರೆ ಬಹಳ ಉತ್ತಮವಾಗುತ್ತದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಇವತ್ತು ನಾವು ಕಾನೂನನ್ನು ಕಾಪಾಡುವ ದೃಷ್ಟಿಯಿಂದಲೇ ನಾವು ಎಲ್ಲವನ್ನೂ ಬಹಿರಂಗ ಗೊಳಿಸುವುದಕ್ಕೆ ಹೋಗಿಲ್ಲ. ಇವತ್ತು ಅಲ್ಲಿ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ಕಳ್ಳಮಧ್ಯ ಮಾರಾಟವಾಗುತ್ತಿದ್ದುದನ್ನು ಹಿಡಿದಮೇಲೆ ಇದು ನಿಯಂತ್ರಣಕ್ಕೆ ಬಂತು ಎಂದರೆ ಇದರ ಅರ್ಥ ಏನು? ಈ ತರಹ ಸಲಹೆಗಳನ್ನು ದಯವಿಟ್ಟು ಕೊಡಿ. ಅದನ್ನು ಸರ್ಕಾರ ಸ್ವೀಕಾರ ಮಾಡುತ್ತದೆ. ಅದನ್ನು ಅಳವಡಿಸಿಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಮಾತನಾಡಿದ್ದನ್ನು ಮಾನ್ಯ ಗೃಹಮಂತ್ರಿಗಳು ಪ್ರಾರಂಭದಲ್ಲಿ ಕೇಳಿಸಿಕೊಳ್ಳಲಿಲ್ಲ. ಅದಕ್ಕೋಸ್ಕರ ಮಧ್ಯೆ ನಾನು ನಿಂತುಕೊಂಡಿದ್ದೇನೆ. ಕಳೆದವರ್ಷವೂ ಈರೀತಿ ಗಲಭೆಯಾಗಿತ್ತು. ಕಳೆದವರ್ಷವೂ ಈ ರೀತಿ ಗಲಭೆ ಆಗಬಹುದೆಂಬ ಅಂಶವನ್ನು ಸರ್ಕಾರ ಪೋಲೀಸ್ ಇಲಾಖೆ ಗಮನಿಸಿ ಒಂದು ಸಾವಿರಕ್ಕೂ ಹೆಚ್ಚು ಪೋಲೀಸ್‌ಸಿಬ್ಬಂದಿಯನ್ನು ಇದೇ ಓಣಿಯಲ್ಲಿ ನೇಮಕಮಾಡಿದ್ದರು. ಆಗ ಜಗದೀಶ ಶೆಟ್ಟರ್ ಅಶೋಕ್ ಕಾಟ್ವೆಯವರು ಇದ್ದಂಥ ಸಂದರ್ಭದಲ್ಲಿ ಸಂಪೂರ್ಣವಾಗಿ ಪರಿಸ್ಥಿತಿ ಹತೋಟಿ ಬಂತು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಈ ಸಲ ಆ ರೀತಿ ಆಗಬಹುದು ಎಂದು ಪೋಲೀಸ್ ಇಲಾಖೆಯವರು ಪಾಂಪ್ಲೆಟ್ಸ್‌ನ್ನು ಹೊರಡಿಸಿದ್ದಾರೆ. ಆದರೂ ಅಲ್ಲಿದ್ದವರು ಬರೇ ಹತ್ತು ಜನ ಪೋಲೀಸರು. ಇದರಿಂದ ಈ ಘಟನೆಬಗ್ಗೆ ಸರ್ಕಾರ ಎಷ್ಟೊಂದು ನಿರ್ಲಕ್ಷ್ಯತನ ತೋರಿಸಿದೆ ಎಂಬುದು ತಿಳಿಯುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ : ತಮಗೆ ಬಂದಿರತಕ್ಕಂಥಾದ್ದು ತಪ್ಪುಮಾಹಿತಿ.. ಆ ಜಾಗದಲ್ಲಿ ಇದ್ದವರು ಹತ್ತು ಮಂದಿ ಪೋಲೀಸಿನವರು. ಆದರೆ ಹುಬ್ಬಳ್ಳಿಯಲ್ಲಿ ಆವತ್ತು ಒಂದು ಸಾವಿರ ಪೋಲೀಸ್ ಸಿಬ್ಬಂದಿ ಇತ್ತು. ಬಂದೋಬಸ್ತು ಮಾಡುವುದಕ್ಕೆ ಇದರಲ್ಲಿ ಏನಾದರೂ ತಪ್ಪಾಗಿದೆಯೇ ಎಂದು ತಿಳಿದುಕೊಳ್ಳುವುದಕ್ಕೆ ಇವತ್ತು ಹೈಕೋರ್ಟ್ ನ್ಯಾಯಾಧೀಶರ ಮುಖಂಡತ್ವದಲ್ಲಿ ನ್ಯಾಯಾಂಗ ತನಿಖೆಗೆ ಆದೇಶ ಮಾಡಿದ್ದೇವೆ. 21ನೇ ತಾರೀಕಿಗೆ ಈ ಘಟನೆ ನಡೆದಿದೆ. 15ದಿವಸದೊಳಗಡೆ ಹೈಕೋರ್ಟ್‌ಗೆ ಬರೆದು ನ್ಯಾಯಾಧೀಶರ ಪಟ್ಟಿಯನ್ನು ತರಿಸಿಕೊಂಡು ನ್ಯಾಯಾಧೀಶರ ನೇಮಕಾತಿ ಮಾಡಬೇಕೆಂದು ಈ ಹಂತವನ್ನು ನಾವು ತಲುಪ್ಪಿದ್ದೇವೆ. ತಮಗೆ ಗೊತ್ತಿದೆ, ಆಗಸ್ಟ್‌ನಲ್ಲಿ ನಡೆದದ್ದು ಹಿಂದೆ ನಡೆದಂಥ ಗಲಭೆ ಬಗ್ಗೆ ನಮ್ಮ ಸರ್ಕಾರ ಬರುವವರೆಗೆ ನ್ಯಾಯಾಧೀಶರಿಂದ ತನಿಖೆ ನಡೆದಿರಲಿಲ್ಲ. ನಾನು ಹೇಳುವುದು, ತಾವು ಸರ್ಕಾರಕ್ಕೆ ಸಲಹೆಗಳನ್ನು ಕೊಡಿ. ಟೀಕೆಯನ್ನೂ ಮಾಡಿ. ಅದು ನಿಮ್ಮ ಹಕ್ಕು ಆದದರೆ ಸರ್ಕಾರ ಇಲಾಖೆ ಮಾಡಿರತಕ್ಕಂಥ ಪೋಲೀಸ್ ಆಡಳಿತ ಯಂತ್ರ ಮಾಡತಕ್ಕಂಥ ಒಳ್ಳೆಯ ಕೆಲಸವನ್ನೂ ಕೂಡ ನೀವು ಹೇಳಿಮೆಚ್ಚಬೇಕಾಗುತ್ತದೆ. ಅದನ್ನು ನಾನು ಅಪೇಕ್ಷೆ ಮಾಡುವುದು.

ಶ್ರೀ ಕೆ.ಎಸ್. ಈಶ್ವರಪ್ಪ : ಸನ್ಮಾನ್ಯ ಗೃಹಮಂತ್ರಿಗಳು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡಿ, ಅವರು ತೆಗೆದುಕೊಂಡಿರುವ ತೀರ್ಮಾನದ ಬಗ್ಗೆ ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನಾನು ಹೇಳುವುದೇನೆಂದರೆ ಇಲ್ಲಿ ಮೇಲ್ನೋಟಕ್ಕೆ ಯಾರೋ ಒಬ್ಬ ಸಂಬಂಧಪಟ್ಟ ಪೋಲೀಸ್ ಅಧಿಕಾರಿ ಏನು ಅನ್ಯಾಯ ಮಾಡಿದ್ದಾರೆ, ಅವರ ಬಗ್ಗೆ ತನಿಖೆ ಮಾಡಿ ತಕ್ಷಣ ಅವರನ್ನು ಸಸ್ಪೆನ್‌ಶನ್‌ನಲ್ಲಿ ಇಡಿ.ಆತ ಮಾಡಿದ್ದು ತಪ್ಪು ಇದೆ. ಇದನ್ನು ಇಡೀ ಹುಬ್ಬಳ್ಳಿ-ಧಾರವಾಡದ ಜನರು ಹೇಳುತ್ತಿದ್ದಾರೆ.

6.40 ಪಿ.ಎಂ

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗಿ ಸಂಬಂಧಪಟ್ಟ ಅಧಿಕಾರಿಗಳಿಂದ ವರದಿ ಬಂದಮೇಲೆ ಕ್ರಮ ತೆಗೆದುಕೊಳ್ಳುವುದು ಒಂದು ವಿಷಯ. ಆದರೆ, ತತಕ್ಷಣದಲ್ಲಿ, ಅಲ್ಲಿ ಆಗತಕ್ಕ ಅನಾಹುತಗಳ ಬಗ್ಗೆ ಯೋಜನೆ ಮಾಡಬೇಕಾಗುತ್ತದೆ. ಏಕೆಂದರೆ ಇವತ್ತು ಅಧಿಕಾರಿಗಳು ಸದನದಲ್ಲಿ ಬಂದು ಮಾತನಾಡುವುದಕ್ಕಾಗುವುದಿಲ್ಲ. ಮುಖ್ಯವಾಗಿ ಸರ್ಕಾರದಿಂದ ಹೊರಡುವ ಎಲ್ಲಾ ಆಜ್ಞೆಗಳೂ ಸಹಿತ ವಿಧಾನ ಸೌಧದ ಮುಂದುಗಡೆ ಇರತಕ್ಕ ಕೆಂಪು ಕಟ್ಟಡದಲ್ಲಿ ಪಾಸ್ ಆಗಬೇಕು. ಇದು ಅತ್ಯಂತ ಸೂಕ್ಷ್ಮವಾಗಿರತಕ್ಕ ವಿಚಾರ. ಇದರ ಹಿನ್ನಲೆಯಲ್ಲಿ ಸರ್ಕಾರಕ್ಕೆ ಈಗಾಗಲೇ ಯಾರು ತಪ್ಪು ಮಾಡಿದ್ದಾರೆಂಬ ಬಗ್ಗೆ,

ಕೆಲವು ವಿಚಾರಗಳು ಬಂದಿವೆ. ಇದು ನ್ಯಾಯಾಂಗ ತನಿಖೆಗೆ ಒಳಪಡುವುದಿಲ್ಲ. ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್.ಎಲ್. ಜಾಲಪ್ಪ : ಇಡೀ ರಾಜ್ಯದಲ್ಲಿ, ಎಲ್ಲಾ ಜಿಲ್ಲೆಗಳಲ್ಲೂ ವರ್ಷಕ್ಕೆ 10 ಪರ್ಸೆಂಟ್‌ನಿಂದ 15 ಪರ್ಸೆಂಟ್ ವರೆಗೆ ಎಕ್ಸೈಸ್ ಜಾಸ್ತಿಯಾಗುತ್ತದೆ. ಆದರೆ, ಹುಬ್ಬಳ್ಳಿಯಲ್ಲಿ ಮಾತ್ರ ಆಗುವುದಿಲ್ಲ, ಇದೇ ಕಾರಣ. ಬೇಕಾದರೆ ಅಂಕಿ ಅಂಶ ತರಿಸಿ ನೋಡಬಹುದು.

ಶ್ರೀ ವಾಟಾಳ್ ನಾಗರಾಜ್ : ಮನೆಗಳ ಮೇಲೆ ಧಾಳಿ ಮಾಡಿದ ಮೇಲೆ ಲಕ್ಷಾಂತರ ರೂಪಾಯಿಗಳ ಮದ್ಯ ಸಿಕ್ಕಿದೆಯೆಂದು ಮಾನ್ಯ ಗೃಹಮಂತ್ರಿಗಳು ಹೇಳಿದ್ದಾರೆ. ಅವರು ಯಾರ್‍ಯಾರು, ಈ ಮದ್ಯಕ್ಕೂ ಮತ್ತು ಗಲಭೆಗೂ ಏನು ಸಂಬಂಧ. ಆ ಮದ್ಯದ ಮನೆಗಳು ಯಾವುವು ಎಂಬುದನ್ನೂ ಸ್ಪಷ್ಟಪಡಿಸಬೇಕು. ಇದೊಂದು ತೀರ್ಮಾನವಾಗಿ ಬಿಡಲಿ. ಮಾನ್ಯ ಗೃಹಸಚಿವರು ದಯಮಾಡಿ ಹೇಳಲಿ. ಈ ಸಂದರ್ಭದಲ್ಲಿ ಎಷ್ಟು ಮನೆಗಳ ಮೇಲೆ ಧಾಳಿ ಮಾಡಿದ್ದಾರೆ, ಅವರು ಯಾರು ಯಾರು ಎಂಬ ವಿವರಗಳನ್ನು ಹೇಳಲಿ.

ಶ್ರೀ ಅಶೋಕ್ ಎಸ್. ಕಾಟ್ವೆ : 1984 ರಿಂದ 1992ರ ವರೆಗೆ ಹುಬ್ಬಳ್ಳಿ ಮತ್ತು ಕಮರಿಪೇಟೆಯಲ್ಲಿ ಯಾವುದೇ ಘಟನೆ ಆಗಿಲ್ಲ. ಸುಮಾರು 10 ವರ್ಷಗಳಿಂದ ಕಮರಿಪೇಟೆಯಲ್ಲೂ ಕೂಡ ಒಂದು ಘಟನೆ ಆಗಿಲ್ಲ. ಮದ್ಯ ಮಾರಾಟಗಾರರಿಗೂ ಮತ್ತು ಇದಕ್ಕೂ ಏನು ಸಂಬಂಧ ಅವರು ತಿರುಚಿ ಹೇಳುತ್ತಿದ್ದಾರೆ. ಕಮರಿಪೇಟೆಯಲ್ಲಿ ನಾನು 40 ವರ್ಷಗಳಿಂದ ಇದ್ದೇನೆ. ಅದು ಸೂಕ್ಷ್ಮವಾದ ಪ್ರದೇಶ. ಇಲ್ಲಿ ಡಿ.ಸಿ. ಹಾಗೂ ಎಸ್.ಪಿ. ಗ್ರೇಡ್‌ನವರಿದ್ದಾಗ ಕೂಡ, ಕಾಮನ ಗಲಾಟೆಯಾಗುತ್ತಿರಲಿಲ್ಲ. ಆದರೆ, ಈಗ ಮೆರವಣಿಗೆ ಹೋಗುವಾಗ ಒಬ್ಬ ಪಿ.ಎಸ್.ಐ ಮತ್ತು 10 ಜನ ಪೋಲೀಸರು ಕೂಡ ಇರಲಿಲ್ಲ. ಇಲ್ಲಿ ಗಲಾಟೆ ನಡೆಯುತ್ತಿದ್ದ ಸಂದರ್ಭದಲ್ಲಿ ಧಾರವಾಡದಲ್ಲಿ ಪೋಲೀಸ್ ಕಮೀಷನರ್ ಅವರು ನವೀನ್ ಹೋಟೆಲಿನಲ್ಲಿ ಎರಡೆರಡು ರೂಮ್ ತೆಗೆದುಕೊಂಡು ಮಜಾ ಮಾಡಿಕೊಂಡು ಕುಳಿತಿದ್ದರು. ಕಮರಿಪೇಟೆ ಒಂದೇ ಅಲ್ಲ, ಮುಲ್ಲಾ ಓಣಿಯೂ ಸೇರಿದಂತೆ, ಹುಬ್ಬಳ್ಳಿಯಲ್ಲಿ ಸುಮಾರು 40-45 ಜನ ಇರಿತಕ್ಕೆ ಒಳಗಾಗಿದ್ದಾರೆ. ಒಂದೂವರೆಯಿಂದ ಎರಡೂವರೆ ತಾಸಿನಲ್ಲಿ, ಕರ್ನಾಟಕ ಮೆಡಿಕಲ್ ಕಾಲೇಜಿನಲ್ಲಿ ಒಂದೇ ಕೋಮಿಗೆ ಸೇರಿದ ಜನರು ಬಂದು ಬೀಳುತ್ತಿದ್ದರು. ಮುಲ್ಲಾ ಓಣಿ ಒಂದು ಭಾಗ. ಮತ್ತೆ ಹೊಸ ಹುಬ್ಬಳ್ಳಿ ಮತ್ತು ಹಳೆಯ ಹುಬ್ಬಳ್ಳಿಗೆ ಹೋಗತಕ್ಕ ಒಂದು ಮಾರ್ಗ ಇದೆ. ಆ ಮಾರ್ಗದ ಮಧ್ಯದಲ್ಲಿ ಹೋಗುವಂಥ ಜನರ ಮೇಲೆ, ಮುಲ್ಲಾಓಣಿಯಲ್ಲಿ ಬಿಹಾರದಿಂದ 8-10 ಜನ ಬಂದು ಉಳಿದಿದ್ದರು.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಪರದೇಶಿ ಎಂದು ಹೇಳುತ್ತಿದ್ದಾರೆ. ಅದನ್ನು ತಾವು ಕಡತದಿಂದ ತೆಗೆದುಹಾಕಬೇಕು. ಇದಕ್ಕೆ ನನ್ನಸ್ಟ್ರಾಂಗ್ ಅಬ್ಜಕ್ಷನ್ ಇದೆ. ಅವರು ಈ ರೀತಿ ಹೇಳಲು ಹೇಗೆ ಬರುತ್ತದೆ?

ಶ್ರೀ ಕೆ.ಎಸ್. ಈಶ್ವರಪ್ಪ : ಅವರ ಭಾವನೆಯನ್ನು, ಅವರು ತಿಳಿಸುತ್ತಿದ್ದರೆ. ಇದಕ್ಕೆ ಬಣ್ಣ ಕಟ್ಟುವುದು ಬೇಡ. ಮದ್ಯಕ್ಕೂ, ಗಲಭೆಗೂ ಯಾವುದೇ ಸಂಬಂಧ ಇಲ್ಲ, ನಿರಪರಾಧಿಗಳಿಗೆ ಅನ್ಯಾಯಯಾಗಿದೆ. ಎಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ನಾನು ರೆಕಾರ್ಡ್ ತರಿಸಿ ನೋಡುತ್ತೇನೆ.

ಶ್ರೀ ಅಶೋಕ್ ಎಸ್. ಕಾಟ್ವೆ : ಬಿಹಾರದಿಂದ 8-10 ಜನ ಬಂದಿದ್ದರು, ಮತ್ತು ಬಾಂಗ್ಲಾ ದೇಶದಿಂದಲೂ ಬಂದಿದ್ದರು.

ಅಧ್ಯಕ್ಷರು : ಇದು ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಶಾಂತಿಯನ್ನು ಕಾಪಾಡುವುದು ಸರ್ಕಾರದ ಕರ್ತವ್ಯ ಅಷ್ಟೇ ಅಲ್ಲ, ಈ ಸದನದ ಪ್ರತಿಯೊಬ್ಬ ಸದಸ್ಯರ ಕರ್ತವ್ಯವೂ ಆಗುತ್ತದೆ. ನಾನು ಈ ಸದನದಲ್ಲಿ 15 ವರ್ಷಗಳಿಂದ ಇದ್ದೇನೆ. ತಾವು ನನಗಿಂತ ಹಿರಿಯರು. ಯಾವತ್ತೂ ಸಹಿತ ಈ ರೀತಿಯಾದ ವಿಚಾರಗಳಿಗೆ ಅವಕಾಶವಾಗಿಲ್ಲ. ನಾನು ಏಕೆ ಹೇಳುತ್ತಿದ್ದೇನೆಂದರೆ, ಅವರಿಗೂ ಕೆಲವು ಭಾವನೆಗಳು ಇವೆ, ನನಗೂ ಕೆಲವು ಭಾವನೆಗಳು ಇವೆ. ಆದರೆ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ಮೊದಲು ಶಾಂತಿಯನ್ನು ಕಾಪಾಡಬೇಕು. ಅವರು ಮಾಹಿತಿಯನ್ನು ಬೇಕಾದರೆ ಕೊಡಲಿ. ಆದರೆ, ಎಲ್ಲ ಬಂದರು, ಹೇಗೆ ಬಂದರು, ಅದಕ್ಕೂ, ಇದಕ್ಕೂ ಏನು ಸಂಬಂಧ ಇದನ್ನೆಲ್ಲಾ ಹೇಳಿದಾಗ, ಮತ್ತೆ ಪರಿಸ್ಥಿತಿ ಉಲ್ಬಣವಾಗಬೇಕೆಂಬ ಉದ್ದೇಶವಿದೆಯೇ? ಅವರು ಎಂದು ಹೇಳಿದರೆ ಏನರ್ಥ? ಅವರೂ ಈ ದೇಶದ ಪ್ರಜೆಗಳಲ್ಲವೇ? ಇಲ್ಲಿಗೆ ಬರುವುದಕ್ಕೆ ಹಕ್ಕಿಲ್ಲವೇ? ತಮ್ಮಲ್ಲಿ ದಯಮಾಡಿ ವಿನಂತಿ ಮಾಡಿಕೊಳ್ಳುತ್ತೇನೆ. "ಪರದೇಶಿ" ಎನ್ನುವ ಪದವನ್ನು ಕಡತದಿಂದ ತೆಗೆದುಹಾಕಬೇಕು.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ, ದಯಮಾಡಿ ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಡೀ ರಾಜ್ಯದಲ್ಲಿ, ಹಿಂದೂ ಮುಸ್ಲಿಂ ಗಲಭೆಗಳಾಗಿ, ಲಕ್ಷಾಂತರ ರೂಪಾಯಿಗಳ ನಷ್ಟವಾಗಿದೆ. ಏನೂ ಆಗಿಲ್ಲ, ಏನೂ ಆಗಿಲ್ಲ ಎಂದು ಹೇಳಿದರೆ....

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಮಾತನಾಡುವಾಗ, ಶ್ರೀಮತಿ ಪ್ರಮೀಳಾರವರು ಮಧ್ಯೆ ಮಾತನಾಡಿದಾಗ ನಾನನು ಹೇಳಿದ್ದೇನೆ. ನಿಮ್ಮ ಸಿದ್ಧಾಂತಗಳ ಪ್ರತಿಪಾದನೆಗೆ ಹೊರ ಜಗತ್ತು ವಿಶಾಲವಾಗಿದೆ. ಜನರ ವಿಚಾರ ಮಂಡನೆಗೆ, ಜನಹಿತಕ್ಕೆ ಸಂಬಂಧಿಸಿದಂತೆ ಮಾತನಾಡುವುದಕ್ಕೆ ಮಾತ್ರ ಇಲ್ಲಿ ಸೀಮಿತವಾಗಿರಬೇಕು. ಈ ಲಕ್ಷ್ಮಣ ರೇಖೆಕಯನ್ನು ಯಾರೂ ದಾಟುವುದಕ್ಕೆ ಬಿಡುವುದಿಲ್ಲ. ನಾವು ಹೊಸ ಸಂಪ್ರದಾಯ ಹಾಕುವುದು ಬೇಡ. ನಾವು ಜನಪ್ರತಿನಿಧಿಗಳು ಎನ್ನುವುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಪಕ್ಷದ ಕೆಲಸವನ್ನು ಸದನದಿಂದ ಹೊರಗೆ ಮಾಡಬೇಕು, ಸಾರ್ವಜನಿಕರ ಕೆಲಸವನ್ನು ಮಾತ್ರ ಇಲ್ಲಿ ಮಾಡಬೇಕು. ಈ ಲಕ್ಷ್ಮಣರೇಖೆಯನ್ನು ದಾಟುವುದಕ್ಕೆ ಯಾರಿಗೂ ಅವಕಾಶವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಶಾಂತಿ ಸುವ್ಯವಸ್ಥೆಯನ್ನು ಕಾಪಾಡಬೇಕೆಂದು ಸನ್ಮಾನ್ಯ ಗೃಹಮಂತ್ರಿಗಳು ಹೇಳಿದರು. ಆದರೆ 4 ದಿವಸಗಳ ಕಾಲ ಏನಾಯಿತು, ಜನರು ಯಾವ ರೀತಿ ಪರಿಸ್ಥಿತಿಯನ್ನು ಎದುರಿಸಿದ್ದಾರೆ, ಅದನ್ನು ಸದನದ ಮುಂದೆ ತರುವುದು ಅವಶ್ಯಕ ಏಕೆಂದರೆ 4 ದಿವಸ ಅಲ್ಲಿ ಪೋಲೀಸ್ ವ್ಯವಸ್ಥೆ ಸಂಪೂರ್ಣ ನಾಶವಾಗಿತ್ತು. ಜನತೆಗೆ ಒಂದು ಭಾವನೆ ಬಂದಿತ್ತು. ನಮ್ಮ ಸರ್ಕಾರದಿಂದಲೇ ಆಗತ್ತಿದೆಯೋ ಏನೋ ಎಂಬ ಆತಂಕ ಮೂಡಿತ್ತು. ನಾವು ಎರಡನೇ ದಿವಸವೂ ಹೋದೆವು, ಮೂರನೇ ದಿವಸವೂ ಹೋದೆವು. ಎಲ್ಲೆಲ್ಲಿ ಗಲಭೆಗಳು ಆಗಿದ್ದವೋ ಎಲ್ಲಿ ಜನರಿಗೆ ತೊಂದರೆ ಆಗಿತ್ತೋ ಅಲ್ಲೆಲ್ಲಾ ಭೇಟಿ ಮಾಡಿದೆವು. ಇಲ್ಲದೇ ಹೋದರೆ, ಎಲ್ಲಿ ಜನರಿಗೆ ತೊಂದರೆ ಆಗಿತ್ತೋ ಅಲ್ಲೆಲ್ಲಾ ಭೇಟಿ ಮಾಡಿದೆವು. ಇಲ್ಲದೇ ಹೋದರೆ, ಜನಗಳು ನಮ್ಮನ್ನು ಕೇಳುತ್ತಿದ್ದರು. ನೀವು ಜನಪ್ರತಿನಿದಿಗಳು ಇದ್ದೀರಿ, ಇವತ್ತು ನಮಗೆ ಸಂರಕ್ಷಣೆ ಇಲ್ಲ, ನಮ್ಮಜೀವಕ್ಕೆ ರಕ್ಷಣೆ ಇಲ್ಲ ಎಂದು ಕೇಳಿ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರು. ನಾಲ್ಕನೇ ದಿವಸ ಹುಬ್ಬಳ್ಳಿ ಮಹಾನಗರದಲ್ಲಿ ಶಾಂತಿಯನ್ನು ಮರಳಿ ತರಬೇಕೆಂಬ ದೃಷ್ಟಿಯಿಂದ ಧರಣ ಕುಳಿತೆವು. ನಮಗೆ ಬೇರೆ ಯಾವುದೇ ಉದ್ದೇಶ ಇರಲಿಲ್ಲ

ಪೋಲೀಸ್ ದೌರ್ಜನ್ಯ ಎಷ್ಟತ್ತು ಎಂದರೆ, ಇಷ್ಟನ್ನೂ ಮುರಿದು, ನಿರಪರಾಧಿಗಳನ್ನು, ಕಟ್ಟೆಯ ಮೇಲೆ ಕುಳಿತ ವ್ಯಕ್ತಿಗಳನ್ನು ಎತ್ತಿಕೊಂಡು ಹೋಗಿ, ಜೈಲಿನಲ್ಲಿ ಹಾಕಿದರು. ರಸ್ತೆಯಲ್ಲಿ ಅಡ್ಡಾಡತಕ್ಕ ಜನರನ್ನು, 307ನೇ ಸೆಕ್ಷನ್ ಹಾಕಿ, ಮರ್ಡರ್ ಕೇಸ್, ಅಟೆಂಪ್ಟ್ ಟುಮರ್ಡರ್ ಎಂದು ಹೇಳಿ ಕೇಸುಗಳನ್ನು ಹಾಕಿದರು. ಈ ರೀತಿಯಾಗಿ ಇಂತಹ ಕೇಸ್‌ನಲ್ಲಿ ಅವರನ್ನು ಸಿಕ್ಕಿಸಿದ್ದಾರೆ.

ಇವತ್ತು ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. 20ನೇ ತಾರೀಖು ಘಟನೆ ನಡೆದಂತಹ ಸ್ಥಳವೇ ಬೇರೆ. ಇದು ಪತ್ರಿಕೆಯಲ್ಲಿ ಬಂದಿದೆ. ಅಲ್ಲಿ ಕೇವಲ 50-100 ಜನರು ಮಾತ್ರ ಇದ್ದರು. ಪೋಲೀಸಿನವರು ಆ ಜನಗಳಿಗೆ ಯಾವುದೇ ಮುನ್ನೇಚ್ಚರಿಕೆಯನ್ನು ಕೊಡದೇ ಗೋಲೀಬಾರ್ ಮಾಡಿದರು. ಆ ಗೋಲಿಬಾರ್‌ನಿಂದ ಸತೀಶ್‌ಕುಮಾರ್ ಎನ್ನತಕ್ಕಂಥ ಒಬ್ಬ ವ್ಯಕ್ತಿಯ ಎದೆಗೆ ಗುಂಡು ಹೊಡೆದಿದ್ದಾರೆ. ಕಾಲಿಗೆ ಗುಂಡು ತಾಗಿಲ್ಲ, ಎದೆಗೆ ಗುಂಡು ಹೊಡೆದಿದ್ದಾರೆ. ಅಲ್ಲಿ ಇವತ್ತು ಪೋಲೀಸರ ವ್ಯವಸ್ಥೆ ಯಾವ ರೀತಿ ಇತ್ತು ಅಂತ ನಾನು ಹೇಳುತ್ತಿದ್ದೇನೆ. ಆ ಸತ್ತ ವ್ಯಕ್ತಿಯ ಮೇಲೆ ಸೆಕ್ಷನ್ 202 ಮೇಲೆ ಕೇಸ್ ಹಾಕಿದ್ದರು. ಇವತ್ತು ಗಲಭೆಯಲ್ಲಿ ಯಾರಿಗೆ ತೊಂದರೆ ಆಗಿದೆ ಅವರ ಮೇಲೆಯೇ ಕೇಸ್ ಹಾಕಿದ್ದಾರೆ. ನಾನು ಆ ಸಂಬಂಧವಾದ ಎಫ್.ಐ.ಆರ್. ಕಾಪಿಯನ್ನು ಸಹ ತಂದಿದ್ದೇನೆ.ಇವತ್ತು ಸತ್ತ ವ್ಯಕ್ತಿಯ ಮೇಲೆ ಅಟೆಂಪ್‌ಟು ಮರ್ಡರ್ ಕೇಸ್ ಹಾಕಿದ್ದಾರೆ.ಇದನ್ನು ನಾನು ಮಾನ್ಯ ಅಧ್ಯಕ್ಷರೆ ಮುಖಾಂತರ ಮಾನ್ಯ ಗೃಹ ಮಂತ್ರಿಗಳಿಗೆ ಕಳುಹಿಸಿಕೊಡುತ್ತಿದ್ದೇನೆ. ಮತ್ತು ಗಲಭೆಯಲ್ಲಿ ಚೂರಿ ಇರಿತದಿಂದ ತೊಂದರೆಗೆ ಈಡಾಗಿದ್ದಾರೆ. ಮತ್ತು ಯಾರು ಕೈಯಲ್ಲಿ ತಲವಾರುಗಳನ್ನು ಹಿಡಿದುಕೊಂಡು ಅಡ್ಡಾಡುತ್ತಿದ್ದಂತಹ ವ್ಯಕ್ತಿಗಳ ಮೇಲೆ ಯಾರೂ ಕ್ರಮ ತೆಗೆದುಕೊಂಡಿಲ್ಲ. ಆದೇ ಯಾವ ವ್ಯಕ್ತಿಗಳಿಗೆ ಈ ಗಲಭೆಯಿಂದ ತೊಂದರೆಯಾಗಿದೆ, ಅಂತಹ ವ್ಯಕ್ತಿಗಳ ಮೇಲೆ ಸೆಕ್ಷನ್ 307 ರ ಪ್ರಕಾರ ಅಟೆಂಪ್ಟಟು ಮರ್ಡರ್ ಅಂತ ಕೇಸ್ ದಾಖಲುಮಾಡಿದ್ದಾರೆ. ಕೆ ಎಂ ಸಿ ಆಸ್ಪತ್ರೆಯಲ್ಲಿ ಗಾಯಗೊಂಡು ಬಿದ್ದಂತಹ ವ್ಯಕ್ತಿಗಳ ಮೇಲೆ 11 ಕೇಸ್‌ಗಳನ್ನು ಹಾಕಿದ್ದಾರೆ. ಈ ರೀತಿಯಾಗಿ ಪೋಲೀಸರ ದೌರ್ಜನ್ಯ ಅಲ್ಲಿ ನಡೆದಿದೆ. ಈ ರೀತಿಯಾಗಿ ಯಾವ ವ್ಯಕ್ತಿಗಳ ನಮಗೆ ಸಂರಕ್ಷಣೆ ಬೇಕು ಅಂತ ಕೇಳಿದರೋ ಆ ವ್ಯಕ್ತಿಗಳ ಮೇಲೆಯೇ ಪೋಲೀಸಿನವರು ದೌರ್ಜನ್ಯ ನಡೆಸಿದ್ದಾರೆ. ಆ 4 ದಿವಸಗಳು ಕಾನೂನು ಮತ್ತು ಸುವ್ಯವಸ್ಥೆ ಯಾವ ರೀತಿ ಇತ್ತು ಅಂತ ಇಂಡಿಯನ್ ಎಕ್ಸ್‌ಪ್ರೆಸ್ ಎನ್ನುವ ನ್ಯಾಷನಲ್ ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಅದರಲ್ಲಿ ಬಂದಿರುವ ನಾಲ್ಕು ಲೈನ್‌ಗಳನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.

"Police seemed almost invisible throughout 4 days of riots. They were not present in sensitive areas, worst still, they were not available to common man whose one Hotline is Control room from which either threr was no response or false information given".

ಈ ರೀತಿಯಾಗಿ ಆ ನಾಲ್ಕು ದಿವಸಗಳ ಕಾಲ ಅಲ್ಲಿ ಇದ್ದಂತಹ ವಸ್ತು ಸ್ಥಿತಿಯನ್ನು ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಮತ್ತೊಂದು ಸಂಗತಿ ಏನೇಂದರೆ ಈ ಗಲಭೆ ನಡೆದ 4 ದಿವಸಗಳು ನಾವು ಅಲ್ಲಿ ಇದ್ದೆವು. ನನ್ನ ಮಿತ್ರರಾದ ಅಶೋಕ ಕಾಟ್ವೆಯವರು ಸಹ ಇದ್ದರು. ಆ 4 ದಿವಸಗಳ ಕಾಲ ಈ ರಾಜ್ಯದಲ್ಲಿ ಸರ್ಕಾರ ಇದೆಯೋ ಅಥವಾ ಇಲ್ಲವೋ ಭೀತಿ ನಮಗೆ ಇತ್ತು. ಈ ಸರ್ಕಾರಕ್ಕೆ ಕಿವಿ ಇಲ್ಲ, ಮೂಗು ಇಲ್ಲ, ಕಣ್ಣು ಇಲ್ಲ, ಬಾಯಿ ಇಲ್ಲ, ಅಂತಹ ಒಂದು ಪರಿಸ್ಥಿತಿ ಆ 4 ದಿವಸಗಳು ಅಲ್ಲಿ ಇದ್ದೆವು. ಅಂತಹ ಒಂದು ಪರಿಸ್ಥಿತಿಯನ್ನು ನಾವು ಅನುಭವಿಸಿದ್ದೇವೆ ಆದಕ್ಕೆ ನಾನು ಈ ರೀತಿ ಹೇಳುತ್ತಿರುವುದು. ಏಕೆ ಅಂತ ನಾನು

ತಮಗೆ ಹೇಳುತ್ತೇನೆ. ಆ ಸಂದರ್ಭದಲ್ಲಿ ದುಷ್ಕರ್ಮಿಗಳು ರಾಜಾರೋಷವಾಗಿ ಕೈಯಲ್ಲಿ ಚೂರಿಗಳನ್ನು ತಲವಾರುಗಳನ್ನು ಹಿಡಿದುಕೊಂಡು ರಸ್ತೆಯಲ್ಲಿ ಅಡ್ಡಾಡುತ್ತಿದ್ದರು. ಅವರನ್ನು ನೋಡುವಂತಹ ದೃಷ್ಟಿ ಸರ್ಕಾರಕ್ಕೆ ಇರಲಿಲ್ಲ. ಅದಕ್ಕೆ ನಾನು ಈ ಸರ್ಕಾರಕ್ಕೆ ಕಣ್ಣು ಇಲ್ಲ ಅಂತ ಹೇಳಿದ್ದು. ಈ ಸರ್ಕಾರಕ್ಕೆ ಕಿವಿ ಇಲ್ಲ ಅಂತ ಏತಕ್ಕೆ ಹೇಳಿದೆ ಅಂದರೆ ನಾವು ಕಾಲ ಕಾಲಕ್ಕೆ ಎಲ್ಲಾ ಮಾಹಿತಿಗಳನ್ನು ಕೊಟ್ಟು ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ಉಳಿಸಿ ಕಕ್ಷಣೆ ಕೊಡಿ ಅಂತ ಹೇಳಿಕೊಡೆವು ಆದರೆ ಯೂರೂ ನಮ್ಮ ಮಾತಿಗೆ ಕಿವಿ ಕೊಡಲಿಲ್ಲ. ಅಲ್ಲಿ ಮೆರವಣಿಗೆ ಬರುವಾಗ ಏನಾದರೂ ಗಲಭೆಗಳು ಆಗಬಹುದು ಅದಕ್ಕೆ ನೀವು 3 ದಿವಸಗಳ ಮುಂಚೆ ಆರ್‌ಎ ಎಫ್ ಪಡೆಗಳನ್ನು ಕರೆಸಿ ಅಂತ ಹೇಳಿದರೂ ಕೂಡ ಸರ್ಕಾರ ನಮ್ಮ ಮಾತು ಕೇಳಲಿಲ್ಲ. ಮತ್ತು ಈ ಸರ್ಕಾರಕ್ಕೆ ಬಾಯಿ ಇಲ್ಲ ಅಂತ ಏತಕ್ಕೆ ಹೇಳಿದೆ ಅಂದರೆ ನಾವು ಇಲ್ಲಿ ಬಂದು ಸದನದಲ್ಲಿ ಏನಾದರೂ ಕೇಳಿದರೆ ಇಲ್ಲಾ ಇಲ್ಲಾ ನಾವು ಈ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶ ನೀಡಿದ್ದೇವೆ, ಅದ್ದರಿಂದ ನಾವು ಈ ಬಗ್ಗೆ ಏನನ್ನು ಹೇಳುವುದಿಲ್ಲ ಅಂತ ಹೇಳಿ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳುತ್ತಾರೆ. ಅದಕ್ಕೆ ಈ ಸರ್ಕಾರಕ್ಕೆ ಬಾಯಿ ಇಲ್ಲ ಅಂತ ಹೇಳಿದೆ. ಮತ್ತು ಮೂಗು ಇಲ್ಲ ಅಂತ ನಾನು ಏತಕ್ಕೆ ಹೇಳಿದೆ ಅಂದರೆ ಪೋಲೀಸ್ ಕಮೀಷನರ್‌ಗೆ ನಾವು ನೋಟೀಸ್ ಕೊಟ್ಟೆವು. ಆಗ ಅವರಿಗೆ ವಾಸನೆ ಗೊತ್ತಿತ್ತು. ಇಲ್ಲಿ ಗಲಭೆ ಆಗುತ್ತದೆ ಅಂತ. ಆದರೂ ಯಾವ ಮುಂಜಾಗ್ರತೆ ಕ್ರಮವನ್ನು ಕೂಡ ಕೈಗಳ್ಳಲಿಲ್ಲ. ಅದಕ್ಕೆ ಈ ಸರ್ಕಾರಕ್ಕೆ ಮೂಗು ಇಲ್ಲ ಅಂತ ನಾನು ಹೇಳಿದೆ. ಇಂತಹ ಒಂದು ವಾತಾವರಣ ಅಲ್ಲಿ ನಿರ್ಮಾಣ ಆಯಿತು ಇದನ್ನು ನಾನು ಸದನದ ಮುಂದೆ ತರುತ್ತಿದ್ದೇನೆ. ಈಗ ಸರ್ಕಾರದವರು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೀರಿ. ಆದರೆ ಈ ಹಿಂದೆ ಹುಬ್ಬಳ್ಳಿಯಲ್ಲಿ ಆಗಸ್ಟ್ 15ನೇ ತಾರೀಖು ಆದಂತಹ ಘಟನೆ ಬಗ್ಗೆ ನ್ಯಾಯಾಂಗ ತನಿಖೆ ಆಜ್ಞೆ ಮಾಡಿದರು. ಆದರೆ ಅದು ಇದುವರೆಗೂ ಏನೂ ಕೆಲಸ ಆಗಲಿಲ್ಲ. ಅಲ್ಲಿ ವರ್ಕಿಂಗ್ ಆಗಲಿಲ್ಲ ಅದೇ ರೀತಿ ಇದೂ ಆಗಬಾರದು. ಆ ಘಟನೆ ಏನು ನಡೆದದೆ ಆ ಬಗ್ಗೆ ನ್ಯಾಯ ಮೂರ್ತಿ ರಾಜಶೇಖರ ಮೂರ್ತಿಯವರನ್ನು ನೇಮಕ ಮಾಡಿದರು. ಆದರೆ ಅವರು ಏನೂ ಕೆಲಸ ಆರಂಭಿಸಲಿಲ್ಲ.

ಈಗ ಏನು ಘಟನೆ ನಡೆದಿದೆ ಇದರ ವಸ್ತು ಸ್ಥಿತಿ ಏನು ಎಂಬುದು ಹೊರ ಜಗತ್ತಿಗೆ ತಿಳಿಬೇಕು. ಹುಬ್ಬಳ್ಳಿಯಲ್ಲಿ ಮತ್ತೆ ಶಾಂತಿ ಮತ್ತು ಸುವ್ಯವಸ್ಥೆ ನೆಲೆಸಿ ಜನ ಜೀವನ ಒಳ್ಳೆಯ ರೀತಿಯಲ್ಲಿ ನಡೆಸುವಂತೆ ಆಗಬೇಕು. ತಾವು ಏನು ನ್ಯಾಯಾಂಗ ತನಿಖೆಗೆ ಆಜ್ಞೆ ಮಾಡಿದ್ದೀರಿ ಇದನ್ನು ಆದಷ್ಟು ಬೇಗ ಒಂದು ಟೈಮ್ ಲಿಮಿಟ್ ಹಾಕಿ ತನಿಖೆ ಮಾಡಬೇಕು. ಮಾನ್ಯ ಮಂತ್ರಿಗಳು ಈಗ ನಾವು ಹೈಕೋರ್ಟ್‌ನವರನ್ನು ಕೇಳಿದ್ದೇವೆ ಅಂತ ಹೇಳಿದರು ಹೈಕೋರ್ಟ್ ಜಡ್ಜಸಕ್ಕಿದರೆ ಪರವಾಗಿಲ್ಲ ಇಲ್ಲದಿದ್ದರೆ ರೀಟೈರ್ ಸೀನಿಯರ್ ಹೈಕೋರ್ಟ್ ಜಡ್ಜ್ ಯಾರಾದರೂ ಇದ್ದರೆ ಅವರನ್ನು ತೆಗೆದುಕೊಂಡು ಆದಷ್ಟು ಬೇಗ ತನಿಖೆ ಮಾಡಿ ನಿಜವಾದ ಪರಿಸ್ಥಿತಿ ಹೊರಗೆ ಬರಬೇಕಾಗಿದೆ. ಸತ್ಯ ಏನು ಎಂಬುದು ಜನರಿಗೆ ಗೊತ್ತಾಗಬೇಕಾಗಿದೆ. ಈ ಬಗ್ಗೆ ಸರ್ಕಾರ ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಹುಬ್ಬಳ್ಳಿಯಲ್ಲಿ ಆದಷ್ಟು ಬೇಗ ಪೋಲೀಸ್ ದೌರ್ಜನ್ಯ ನಿಲ್ಲಿಸಬೇಕಂದು ಕೇಳಿ ಕೊಳ್ಳುತ್ತೇನೆ ಮತ್ತು....

ಅಧ್ಯಕ್ಷರು : ಮಾನ್ಯ ಜಗದೀಶಶೆಟ್ಟರೇ ಮುಗಿಸಿ. ತಮಗೆ ಸಾಕಷ್ಟು ಸಮಯ ಕೊಟ್ಟಿದ್ದೇನೆ. ತಾವು ನನಗೆ ವಂದಿಸಿ ತಮ್ಮ ಭಾಷಣ ಮುಗಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, 5 ನಿಮಿಷದಲ್ಲಿ ಮುಗಿಸುತ್ತೇನೆ. ದಯವಿಟ್ಟು ಅವಕಾಶ ಕೊಡಿ. ಇವತ್ತು ಹುಬ್ಬಳ್ಳಿ ಮಹಾನಗರದಲ್ಲಿ ನೀರಿನ ಆಹಾಕಾರ

ಇದೆ. ಇವತ್ತು ಮಲಪ್ರಭಾ ನದಿಯಿಂದ ಇಲ್ಲವೆ ನಿರ ಸಾಗರದಿಂದ ನೀರನ್ನು ತರಬೇಕಾಗುತ್ತದೆ. ಆದರೆ ಅಲ್ಲಿ ವಿದ್ಯುತ್ಶಕ್ತಿ ಕೊರತೆ .ಮತ್ತುಜಲ ಮಂಡಳಿಯ ಹಾಗೂ ನಗರಸಭೆಯ ಅಧಿಕಾರಿಗಳು ನಡುವೆ ಸರಿಯಾಗಿ ಹೊಂದಾಣಿಕೆ ಇಲ್ಲದೆ ಇರುವಂಥ ಪ್ರಸಂಗದಲ್ಲಿ ಹುಬ್ಬಳ್ಳಿ ಮಹಾನಗರಕ್ಕೆ ನೀರು ಪೂರೈಕೆ ಆಗುತ್ತಿಲ್ಲ. ನೀರು ಕೊಡುವಂತಹ ಶಕ್ತಿ ಅಧಿಕಾರಿಗಳಲ್ಲಿ ಇಲ್ಲ. ಇದರ ಬಗ್ಗೆ ಸರ್ಕಾರ ತೀವ್ರವಾದ ಗಮನ ಹರಿಸಬೇಕು. ಏಕೆಂದರೆ ಮುಂದೆ ಭೀಕರವಾದ ಬೇಸಿಗೆ ಕಾಲ ಬರುತ್ತಿದೆ. ನಗರಸಭೆಯವರು ಇನ್ನು ಹೆಚ್ಚು ಕಷ್ಟವನ್ನು ಅನುಭವಿಸುವಂಥ ಪ್ರಸಂಗ ಬರುತ್ತದೆ. ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಸರ್ಕಾರ ವಿಶೇಷ ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಹುಬ್ಬಳ್ಳಿಯಲ್ಲಿರುವ ರಸ್ತೆಗಳ ಬಗ್ಗೆ ನಾನು ಪ್ರಸ್ತಾಪ ಮಾಡುವುದಾದರೆ ಕರ್ನಾಟಕ ರಾಜ್ಯದಲ್ಲಿ ಹುಬ್ಬಳ್ಳಿ ಮಹಾನಗರಪಾಲಿಕೆ ಎರಡನೆಯದು. ಈ ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರಪಾಲಿಕೆಯ ರಸ್ತೆಗಳ ಸ್ಥಿತಿ ಬಹಳ ಚಿಂತಾಜನಕವಾಗಿವೆ. ಮೈಸೂರು ಮಹಾನಗರಪಾಲಿಕೆಗೆ ಯಾವ ರೀತಿ ಒಂದು ಇತಿಹಾಸ ಇದೆಯೋ ಹಾಗೆಯೇ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಗೂ ಒಂದು ಇತಿಹಾಸ ಇದೆ.

ಸರ್ಕಾರದವರು ಮೈಸೂರು ಮಹಾನಗರಪಾಲಿಕೆಗೆ ಹೆಚ್ಚು ಹೆಚ್ಚು ಧನಸಹಾಯವನ್ನು ಕೆಟ್ಟು ಅಭಿವೃದ್ಧಿ ಮಾಡುತ್ತಿದೆ ಆದರೆ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಗೆ ಸರ್ಕಾದಿಂದನಿರ್ಲಕ್ಷ್ಯ ಆಗಿದೆ. ಕಳೆದ ಸಾಲಿನಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಹೆಚ್ಚು ಹೆಚ್ಚು ಮಳೆ ಬಂದು ರಸ್ತೆಗಳು ಹಾಳಾಗಿವೆ. ಅಲ್ಲಿ ತಮಗೆ ಗೊತ್ತಿದ್ದ ಹಾಗೆ ಅತಿವೃಷ್ಟಿಯಿಂದ ರಸ್ತೆಗಳು ಹಾಳಾಗಿವೆ. ಈ ಬಗ್ಗೆ ಹುಬ್ಬಳ್ಳಿ ಮಹಾನಗರಪಾಲಿಕೆಯವರು ಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದಾರೆ. ನಮಗೆ ಈ ರಸ್ತೆಗಳ ದುರಸ್ಥಿಗೆ ವಿಶೇಷ ಅನುಮಾನ ಅಂತ 2 ಕೋಟಿ ರೂಪಾಯಿಗಳು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಸರ್ಕಾರ ಇದುವರೆಗೂ ಕೊಟ್ಟಿಲ್ಲ. ಅದೇ ಬೆಂಗಳೂರು ಮತ್ತು ಮೈಸೂರು ಮಹಾನಗರಪಾಲಿಕೆಗಳಿಗೆ ಸರ್ಕಾರ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದೆ. ಅದೇ ಹುಬ್ಬಳ್ಳಿ ಮಹಾನಗರಪಾಲಿಕೆಗೆ ಕೊಡುತ್ತಿಲ್ಲ. ಕಳೆದ ಸಲ ಸರ್ಕಾರ 2 ಕೋಟಿ ರೂಪಾಯಿಗಳು ವಿಶೇಷ ಅನುದಾನ ಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರು ಆದರೆ ಆ ಹಣ ಇದುವರೆಗೂ ಕೊಡಲಿಲ್ಲ. ಆದ್ದರಿಂದ ಸರ್ಕಾರ ಈ ಸಲ ಆದರೂ ಹುಬ್ಬಳ್ಳಿ ಧಾರವಾಡ ಮಹಾನಗರಪಾಲಿಕೆಗೆ 2 ಕೋಟಿ ರೂಪಾಯಿಗಳ ವಿಶೇಷ ಅನುಧಾನ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಆಮೇಲೆ ಹುಬ್ಬಳ್ಳಿ ಧಾರವಾಡದಲ್ಲಿ ಹೈಕೋರ್ಟ್ ಬೆಂಚ್ ಆಗಬೇಕೆಂದು ಅನೇಕ ವರ್ಷಗಳಿಂದ ನಮ್ಮ ಒತ್ತಾಯ ಇದೆ. ಹಿಂದೆ ಮಹಾರಾಷ್ಟ್ರದಲ್ಲಿ ಹೈಕೋರ್ಟ್ ಬೆಂಚ್ ಅನ್ನು ನಾಗಪುರದಲ್ಲಿ ಮಾಡಿದರು.

ಅವರಿಗೆ ಆಗ ಒಂದು ವಿಲ್ ಪವರ್ ಇತ್ತು ಅದಕ್ಕೆ ಆ ಒಂದು ತೀರ್ಮಾನ ತೆಗೆದುಕೊಂಡರು. ಮಡಲೇಬೇಕು ಅಂತ ಸರ್ಕಾರ ಒಂದು ಪಾಲಿಸಿ ಮಾಡಿದರೆ ಸರ್ಕಾರದ ನಿಲುವು ಸ್ಪಷ್ಟವಾದರೆ ಸರ್ಕಾರ ಸ್ಪಷ್ಟವಾದ ಒಂದು ನಿರ್ಣಯವನ್ನು ತೆಗೆದುಕೊಂಡರೆ ಮಾಡಬಹುದು. ಇಲ್ಲಿದಿದ್ದರೆ ಇಲ್ಲ. ಅದಕ್ಕೆಕ ಸರ್ಕಾರ ಒಂದು ಸ್ಪಷ್ಟವಾದ ಉತ್ತರವನ್ನು ಹೇಳಬೇಕು. ಮಾಡುತ್ತೇವೆ ಅಥವಾ ಇಲ್ಲ ಅಂತ. ಈ ಬಗ್ಗೆ ಈ ಹಿಂದೆ ಕೂಡ ಅನೇಕ ಹೋರಾಟಗಳು ನಡೆದಿವೆ.ತಾವು ಹುಬ್ಬಳ್ಳಿ ಧಾರವಾಡಕ್ಕೆ ಹೈಕೋರ್ಟ್ ಬೆಂಜ ಮಾಡದಿದ್ದರೆ ಪುನಃ ನಾವು ಹೋರಾಟ ಮಾಡಬೇಕಾಗುತ್ತದೆ. ತಾವು ಜನರ ಮನಸ್ಸನ್ನು ಅರ್ಥ ಮಾಡಿಕೊಳ್ಳಿ. ಸರ್ಕಾರ ತಮ್ಮ ತೀರ್ಮಾನವನ್ನು ಹೇಳಿಲಿ ನಾವು ಹೈಕೋರ್ಟ್‌ಬೆಂಚ್ ಮಾಡುತ್ತೇವೆ ಅಂತ ಇಲ್ಲದಿದ್ದರೆ ಇಲ್ಲ ಅಂತ ಹೇಳಲಿ. ಅದು ಬಿಟ್ಟು ಹೈಕೋರ್ಟ್ ಒಪ್ಪಿಗೆ ಕೊಟ್ಟರೆ

ಮಾಡುತ್ತೇವೆ ಸೆಂಟ್ರಲ್ ಗಾರ್ನಮೆಂಟ್ ಒಪ್ಪಿಗೆ ಕೊಟ್ಟರೆ ಮಾಡುತ್ತೇವೆ ಎಂದು ಸಬೂಲು ಹೇಳುವುದು ಬೇಡ. ಈ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಹೈಕೋರ್ಟ್ ಬೆಂಚ್ ಹುಬ್ಬಳ್ಳಿ ಧಾರವಾಡದಲ್ಲಿ ಮಾಡಬೇಕೆನ್ನುವ ವಿಲ್ ಫವರ್ ಇದ್ದರೆ ಮಾಡಲೇಬೇಕು ಎನ್ನುವ ಅಚಲ ಮನಸ್ಸು ಇದ್ದರೆ ಮಾಡಬಹುದು ಇಲ್ಲದಿದ್ದರೆ ಇಲ್ಲ. ಇವತ್ತು ಜನತಾದಳದಲ್ಲಿ ಸಾಕಷ್ಟು ಜನ ಶಾಸಕರು ವಕೀಲರಾಗಿದ್ದಾರೆ. ಅವರೆಲ್ಲರ ಬೆಂಬಲ ಸಹ ಇದಕ್ಕೆ ಇದೆ. ಯಾರದೂ ವಿರೋಧ ಇಲ್ಲ.

ಇದಕ್ಕೆ ಬಾರ್ ಕೌನ್ಸಿಲ್ ಆಫ್ ಇಂಡಿಯಾದವರು ಒಪ್ಪಿಗೆಯನ್ನು ಸಹ ಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಿ ಇನ್ನು ಹುಬ್ಬಳ್ಳಿ ಧಾರವಾಡ ಏರ್‌ಪೋರ್ಟ್ ಬಗ್ಗೆ ಮಾತನಾಡುವುದಾದರೆ ಬೆಂಗಳೂರಿನಲ್ಲಿ ಇಂಟರನ್ಯಾಷನಲ್ ಏರ್‌ಪೋರ್ಟ್ ಮಾಡುತ್ತಿದ್ದಾರೆ. ನಮ್ಮ ಹುಬ್ಬಳ್ಳಿ ಧಾರವಾಡ ಏರ್‌ಪೋರ್ಟ್‌ಗೆ 10 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸುಭಾಷ್ ರುಕ್ಮಯ್ಯ ಗುತ್ತೇದಾರ್ (ಆದ್) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಹೈದರಾಬಾದ್ ಕರ್ನಾಟಕದ ಬಗ್ಗೆ ಏನೂ ಹೇಳಿಲ್ಲ. ನಾನು ಹೈದರಾಬಾದ್ ಕರ್ನಾಟಕದವನು ಅದು ಮಹಾರಾಷ್ಟ್ರದ ಬಾರ್ಡರ್ ನಲ್ಲಿ ಇರುವುದರಿಂದ ನನ್ನ ಭಾಷೆ ಸ್ವಲ್ಪ ವ್ಯತ್ಯಾಸವಿರುವುದರಿಂದ ತಾವು ಅದನ್ನು ಅರ್ಥ ಮಾಡಿ ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ವರ್ಷ ನಮ್ಮ ಕಡೆ ಮಳೆ ಬಹಳ ಕಡಿಮೆಯಾಗಿರುವುದರಿಂದ ಮಳೆ ಆಧಾರಿತ ಬೆಳೆಯಾಗದೆ ರೈತನಿಗೆ ಯಾವ ಬೆಳೆಗಳೂ ಬೆಳೆದಿಲ್ಲ. ಮುಂಗಾರಿನಲ್ಲಿ ತರಕಾರಿ ಮತ್ತು ಜೋಳದ ಬೆಳೆಗೆ ವಿಪರೀತ ಹಾನಿಯಾಗಿದೆ. ಅದರಿಂದ, ರೈತರಿಗೆ ಏನಾದರೂ ಪರಿಹಾರ ಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಮಳೆ ಕಡಿಮೆಯಾದ್ದರಿಂದ ದನಗಳಿಗೆ ಕೂಡಾ ಮೇವಿನ ತೊಂದರೆ ಇರುವುದರಿಂದ ಮೇವಿನ ವ್ಯವಸ್ಥೆಯನ್ನೂ ಮಾಡಬೇಕು. ನಮ್ಮ ಆಳಂದ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಷವೆಂದು ಘೋಷಣೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅದೇ ರೀತಿ ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ಕೂಡಾ ಇದೆ. ಯಾವುದೇ ಹಳ್ಳಿಗಳಿಗೆ ಹೋದರೂ ಕುಡಿಯುವ ನೀರು ಇಲ್ಲವೆಂದು ಜನರು ಹೇಳುತ್ತಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಪರಿಹಾರ ಮಾಡಲು ಎಲ್ಲಾ ಕಡೆ ಕೊಳವೆ ಬಾವಿಗಳನ್ನು ಹಾಕಿ ಎಂದು ಕೇಳಿಕೊಂಡರೆ, ಪೈಪ್‌ಗಳು, ಮೆಟೀರಿಯಲ್ ಇಲ್ಲವೆಂದು ಹೇಳುತ್ತಿದ್ದಾರೆ. ಅವರು ಪೈಪ್‌ಗಳನ್ನು ಒದಗಿಸಿ ಕೊಳ್ಳುವುದರಲ್ಲಿ ಬೇಸಿಗೆ ಕಾಲ ಮುಗಿದುಹೋಗಿರುತ್ತದೆ.

ಆದ್ದರಿಂದ, ತಕ್ಷಣ ಕುಡಿಯುವ ನೀರನ್ನು ಒದಗಿಸುವ ಬಗ್ಗೆ ಸರ್ಕಾರ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಾ, ಇನ್ನು ಮಂದೆ ಕುಡಿಯುವ ನೀರಿಗೆ ತೊಂದರೆ ಬರದ ರೀತಿಯಲ್ಲಿ ಪರ್ಮನೆಂಟ್ ಪರಿಹಾರ ಕಂಡುಹಿಡಿಯಬೇಕು. ನಮ್ಮ ಕಡೆ ಹೆಚ್ಚಾಗಿ ಮಳೆ ಆಧಾರಿತ ವ್ಯವಸಾಯ ಮಾಡುವುದರಿಂದ ಕೆರೆಗಳಲ್ಲಿ ಮತ್ತು ನಾಲೆಗಳಲ್ಲಿ ನೀರು ನಿಲ್ಲುವ ಹಾಗೆ ನಾಲಾ ಬಂದ್‌ಗಳನ್ನು ಹಾಕಬೇಕು. ಧಾರವಾಡ ಹುಬ್ಬಳ್ಳಿ ನಗರದಲ್ಲಿ ಯಾವ ರೀತಿ ಚೀಫ್ ಇಂಜಿನಿಯರ್ ಆಫೀಸರನ್ನು ಪ್ರತ್ಯೇಕವಾಗಿ ತೆರೆಯಲಾಗಿದೆಯೋ ಅದೇ ರೀತಿ ನಮ್ಮ ಕಡೆಯೂ ಚೀಫ್ ಇಂಜಿನೀಯರ್ ಆಫೀಸರನ್ನು ಪ್ರತ್ಯೇಕವಾಗಿ ಮಾಡಬೇಕು. ಇನ್ನು ಮಹಾರಾಷ್ಟ್ರ ರಾಜ್ಯದ ಬಾಂಬೆಯಲ್ಲಿ ಅಧಿವೇಶನ ನಡೆದರೂ ನಾಗಪುರದಲ್ಲೂ ಅಧಿವೇಶನವನ್ನು ಯಾವರೀತಿ ನಡೆಸುತ್ತಿದ್ದಾರೋ

ಅದೇ ರೀತಿ ಗುಲ್ಬಾರ್ಗಾ ಜಿಲ್ಲೆಯಲ್ಲೂ ನಮ್ಮ ಸರ್ಕಾರದ ಅಧಿವೇಶನವನ್ನು ನಡೆಸುವುದಕ್ಕೆ ಏರ್ಪಾಡು ಮಾಡಬೇಕು. ಆಮೇಲೆ ಸನ್ಮಾನ್ಯ ಸದಸ್ಯರಾದ ನೇಗೇಗೌಡರು ಸರ್ಕಾರಿ ಅಧಿಕಾರಿಗಳ ಬಗ್ಗೆ ಸವಿಸ್ಥಾರವಾಗಿ ಹೇಳಿದ್ದಾರೆ. ನಾನು ಶಾಸಕನಾದ ಮೇಲೆ ಜನವರಿ 26ನೇ ತಾರೀಕು ಗಣರಾಜ್ಯೋತ್ಸವದ ದಿವಸ ಧ್ವಜಾರೋಹಣ ಮಾಡಲು ಹೋದಾಗ ಕಛೇರಿ ಹಾಜರಿ ಪುಸ್ತಕವನ್ನು ಸರ್ಕಾರಿ ಅಧಿಕಾರಿಗಳ ಬಗ್ಗೆ ಸವಿಸ್ಥಾರವಾಗಿ ಹೇಳಿದ್ದಾರೆ. ನಾನು ಶಾಸಕನಾದ ಮೇಲೆ ಜನವರಿ 26ನೇ ತಾರೀಕು ಗಣರಾಜ್ಯೋತ್ಸವದ ದಿವಸ ಧ್ವಜಾರೋಹಣ ಮಾಡಲು ಹೋದಾಗ ಕಛೇರಿ ಹಾಜರಿ ಪುಸ್ತಕವನ್ನು ತರಿಸಿ ನೋಡಿದಾಗ ಬಹಳಷ್ಟು ಆಫೀಸರ್‌ಗಳು ಬಾರದೇ ಇರುವುದು ತಿಳಿಯಿತು. ಯಾರು ಆ ದಿವಸ ಬಂದಿರಲಿಲ್ಲವೋ ಅವರಿಗೆ ಗೈರು ಹಾಜರಿ ಹಾಕಿಸಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದರೂ ಇನ್ನೂವರೆಗೂ ಅವರ ಮೇಲೆ ಕ್ರಮ ಕೈಗೊಂಡಿಲ್ಲ. ಆ ಆಫೀಸರ್‌ಗಳನ್ನು ಯಾರು ಕೇಳುವವರಿಲ್ಲ. ಅವರು ಮನಸ್ಸಿಗೆ ಬಂದಾಗ ಆಫೀಸ್‌ಗೆ ಬರುತ್ತಾರೆ, ಫೋನ್ ಮಾಡಿ ಅಧಿಕಾರಿಗಳನ್ನು ಕೇಳಿದರೆ ಅವರು ಟೂರ್ ಹೋಗಿದ್ದಾರೆಂದು ಅಲ್ಲಿರತಕ್ಕಂಥ ಚಪ್ರಾಸಿಗಳು ಉತ್ತರ ಕೊಡುತ್ತಾರೆ

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ಇದರ ಬಗ್ಗೆ ತಮ್ಮ ಗಮನಕ್ಕೆ ತರುವುದೇನೆಂದರೆ, ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವದ ದಿನಗಳಲ್ಲಿ ತಹಶೀಲ್ದಾರ್‌ಗಳು ಧ್ವಜಾರೋಹಣವನ್ನು ಮಾಡುತ್ತಾರೆ ತಾಲ್ಲೂಕಿನ ಜನ ಪ್ರತಿನಿಧಿಗಳಾದ ಶಾಸಕರು ಸುಮ್ಮನೆ ಅತಿಥಿಗಳಾಗಿ ಕುಳಿತರುತ್ತಾರೆ. ಇದು ಪ್ರಜಾಪ್ರಭುತ್ವಕ್ಕೆ ತೀವ್ರ ಅಗೌರವ ಮತ್ತು ಅತ್ಯಂತ ಕೆಟ್ಟ ಸಂಪ್ರದಾಯ. ಇದು ಆಗಬಾರದು. ಸುಮಾರು ನಾಲ್ಕೈದು ವರ್ಷಗಳ ಹಿಂದೆ ನನ್ನ ತಾಲ್ಲೂಕಿನಲ್ಲಿ ಧ್ವಜಾರೋಹಣ ಸಂದರ್ಭದಲ್ಲಿ ನಾನು ಮುಖ್ಯ ಅತಿಥಿಯಾಗಿ ಹೋಗಿದ್ದಾಗ ತಹಶೀಲ್ದಾರ್‌ರವರೇ ಧ್ವಜಾರೋಹಣ ಮಾಡಿದರು. ನಾನು ನೇರವಾಗಿ ಜಗಳ ಮಾಡುವುದು ಸರಿಯಲ್ಲವೆಂದು ಸುಮ್ಮನೆ ಬಂದು ನಂತರದ ನಾಲ್ಕೈದು ಸಮಾರಂಭಗಳಿಗೆ ನಾನು ಹೋಗದೆ ತಪ್ಪಿಸಿಕೊಂಡೆ. ಧ್ವಜಾರೋಹಣ ಆಹ್ವಾನ ಪತ್ರಿಕೆಯಲ್ಲಿ ತಹಶೀಲ್ದಾರರಿಂದ ಧ್ವಜಾಹೋರಣ ಮುಖ್ಯ ಅತಿಥಿ ಹಾಗೂ ಅಧ್ಯಕ್ಷರು ಶಾಸಕರಾಗಿರುತ್ತಾರೆಂದು ಮುದ್ರಿಸುರುತ್ತಾರೆ. ಇದು ಸರಿಯಲ್ಲ. ಖಂಡಿತವಾಗಿ ಈ ಸಾರಿಯಿಂದಲೇ ಈ ಪದ್ಧತಿ ಹೋಗಬೇಕು. ಮುಂದಿನ ಗಣರಾಜ್ಯೋತ್ಸವದಲ್ಲಾಗಲೀ ಅಥವಾ ಸ್ವಾತಂತ್ರ್ಯೋತವದಲ್ಲಾಗಲೀ ಅಥವಾ ರಾಷ್ಟ್ರದ ಮತ್ತು ರಾಜ್ಯದ ಕಾರ್ಯಕ್ರಮಗಳು ಬಂದಾಗ ತಹಶೀಲ್ದಾರ್ ಅಥವಾ ಬೇರೆ ಅಧಿಕಾರಿಗಳು ಧ್ವಜಾರೋಹಣ ಮಾಡತಕ್ಕಂಥ ಸಂಪ್ರದಾಯ ಸಂಪೂರ್ಣವಾಗಿ ಹೋಗಬೇಕು. ನಾನಂತೂ ಇನ್ನು ಮುಂದೆ ತಹಶೀಲ್ದಾರ್‌ರವರು ಧ್ವಜಾರೋಹಣ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಆ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲ. ತಹಶೀಲ್ದಾರ್‌ಗಳ ಮೇಲೆ ನನಗೆ ವೈಯಕ್ತಿಕ ದ್ವೇಷ ಏನಿಲ್ಲ. ಆದರೆ, ತಹಶೀಲ್ದಾರುರುಗಳು ಧ್ವಜಾಹೋರಣ ಮಾಡುವಂಥ ನೀತಿಯನ್ನು ಸರ್ಕಾರವು ಮೊದಲು ಬದಲಾವಣೆ ಮಾಡಬೇಕು. ಕೂಡಲೇ ಒಂದು ಕ್ರಾಂತಿಕಾಂಕವಗಿ ಬದಲಾವಣೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಸ್ವಾತಂತ್ರೋತ್ಸವ ಮತ್ತು ಗಣರಾಜ್ಯೋತ್ಸವ ಕಾರ್ಯಕ್ರಮಗಳಿಗೆ ಹೋಗುತ್ತೇನೆ ಆದರೆ ಅಧಿಕಾರಿಶಾಹಿಗಳು ಧ್ವಜಾರೋಹಣ ಮಾಡತಕ್ಕಂಥ ಆ ಕಾರ್ಯಕ್ರಮಗಳಲ್ಲಿ ನಾನು ಭಾಗವಹಿಸುವುದಿಲ್ಲ, ಅಧಿಕಾರಿ ಶಾಹಿಗಳಿಂದ ಧ್ವಜಾರೋಹಣ ಮಾಡುವುದು ನಿಜಕ್ಕೂ ಅಪಮಾನ. ಈ ಅಪಮಾನವನ್ನು ಸಹಿಸುವುದಕ್ಕಾಗುವುದಿಲ್ಲವೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ತಮ್ಮ ವಿಚಾರಧಾರೆಗಳೂ ಬೇರೆ ದಿಕ್ಕಿನಲ್ಲಿ ಇರುವುದರಿಂದ ಇಂಥ ಕೆಟ್ಟ ಸಂಪ್ರದಾಯವನ್ನು ತೆಗೆದು ಹಾಕಿ ಒಳ್ಳೆ ಸಂಪ್ರದಾಯವನ್ನು ತರಲು ಒಪ್ಪುತ್ತೀರೆಂದು ಭಾವಿಸುತ್ತೇನೆ.

ಅಧ್ಯಕ್ಷರು : ಈ ವಿಷಯದಲ್ಲಿ ತಮ್ಮೊಡನೆ ನಾವು ಸಹ ಸ್ಪಂದಿಸಿದ್ದೇವೆ.

ಶ್ರೀ ಕೆ.ಎನ್ ನಾಗೇಗೌಡ : ಆಫೀಸರ್ಸ್‌ನ್ನು ಕಂಟ್ರೋಲ್ ಮಾಡುವಲ್ಲಿ ಮಾನ್ಯ ಜಾಲಪ್ಪನವರು ಮತ್ತು ಸಿಂಧ್ಯಾರವರು ಪ್ರಮುಖರು.

7.10 ಪಿ.ಎಂ

ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ಸಂದರ್ಭದಲ್ಲಿ ಮಂತ್ರಿಗಳು ಉಪಸ್ಥಿತರಿದ್ದು ಧ್ವಜಾರೋಹಣ ಮಾಡುವ ಅವಕಾಶ ಇದೆ. ಆದರೆ ಅದೇ ಶಾಸಕರುಗಳಿಗೆ ಆ ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲ. ಧ್ವಜಾರೋಹಣವನ್ನು ಅಧಿಕಾರಿಗಳು ಮಾಡುವುದು ಶಾಸಕರು ಅದನ್ನು ನೋಡುತ್ತಾ ಕುಳಿತುಕೊಳ್ಳುವುದು ನಡೆದುಕೊಂಡು ಬಂದಿದೆ. ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ಧ್ವಜಾರೋಹಣವನ್ನು ಮಾಡುವುದಕ್ಕೆ ಶಾಸಕರಿಗೂ ಆ ದಿನದಂದು ಅವಕಾಶವನ್ನು ಕಲ್ಪಿಸಿಕೊಡಬೇಕು. ಶಾಸಕರು ಧ್ವಜಾರೋಹಣ ಮಾಡುವುದನ್ನು ಜನರು ಕೂಡ ಇಚ್ಚೆಪಡುತ್ತಾರೆ. ಈಗ ನಮ್ಮನ್ನು ಅಲ್ಲಿ ಕುಳ್ಳಿರಿಸಿಕೊಂಡು ತಹಶೀಲ್ದಾರ್ ಆಗಲೀ, ಬೇರೆ ಯಾವುದೇ ಅಧಿಕಾರಿಗಳಾಗಿರಲಿ, ಧ್ವಜಾರೋಹಣ ಮಾಡಲು ತುಂಬಾ ಮುಜುಗರ ಪಟ್ಟುಕೋಳ್ಳುತ್ತಾರೆ. ಅದ್ದರಿಂದ ಈ ಬಗ್ಗೆ ಮಾನ್ಯ ಕಂದಾಯ ಸಚಿವರು ಈ ಕುರಿತಾಗಿ ಸಚಿವ ಸಂಪುಟದಲ್ಲಿ ಒಂದು ನಿರ್ಣಯವನ್ನು ಮಂಡಿಸಿ ಅದನ್ನು ಸರಿಪಡಿಸ ಬೇಕು. ಆ ಕುರಿತಾಗಿ ಕಂದಾಯ ಸಚಿವರು ಒಂದು ಆಶ್ವಾಸನೆಯನ್ನು ನಮಗೆ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರು ತಮ್ಮ ತೀರ್ಪನ್ನು ಈ ಕುರಿತಾಗಿ ಕೊಡಬೇಕು. ತಾವುಗಳು ತೀರ್ಪುಕೊಡದೇ ಕುಳಿತಿದ್ದೀರಿ. ತಾವು ಅನೇಕ ವಿಚಾರಗಳಲ್ಲಿ ಬಹಳ ಉತ್ತಮರೀತಿಯಲ್ಲಿ ತಮ್ಮ ತೀರ್ಪನ್ನು ಸಂಬಂಧಪಟ್ಟ ಹಾಗೆ ಕೂಡಲೇ ಕೊಡುತ್ತೀರಿ. ತಾವು ತಮ್ಮ ಅನಿಸಿಕೆತಗಳನ್ನು ಹೇಳ ಬೇಕೆಂದು ಪ್ರಾರ್ಥಿಸಿ, ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಸ್ಪಷ್ಟೀಕರಣ ನೀಡ ಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯು ಇವೊತ್ತಿನದಲ್ಲ. ಹಲವಾರು ಬಾರಿ ಚರ್ಚೆಗೆ ಬಂದಿದೆ. ಸಾಮಾನ್ಯವಾಗಿ ಈ ಬಗ್ಗೆ ಇರುವ ನಿಯವಗಳ ಅನುಸಾರವಾಗಿ ಧ್ವಜಾರೋಹಣವನ್ನು ಮಾಡುತ್ತಿದ್ದಾರೆ. ಈ ಕುರಿತಾಗಿ ದೇಶದಾದ್ಯಂತ ಒಂದೇ ನಿಯಮಗಳ ಪಾಲನೆಯಾಗುತ್ತಿದ್ದು ಅದನ್ನೇ ನಾವೂ ಅನುಸರಿಸುತ್ತಿದ್ದೇವೆ. ಕೇಂದ್ರ ಸರಕಾರದ ಗೈಡ್‌ಲೈನ್ಸ್ ಪ್ರಕಾರವೇ ಎಲ್ಲಾ ಕಥೆಗಳಲ್ಲಿ ಈ ಪವಿತ್ರ ಕಾರ್ಯವನ್ನು ಮಾಡುತ್ತಿದ್ದಾರೆ. ತಾವು ಹೇಳಿದ ಹಾಗೆ ನಮಗೂ ಮುಜುಗರ, ಅಧಿಕಾರಿಗಳಿಗೂ ಮುಜುಗರದ ಪರಿಸ್ಥಿತಿಯಾಗುತ್ತದೆ. ಈ ಬಗ್ಗೆ ನಾನು ಗೃಹ ಖಾತೆಯವರನ್ನು ಸಂಪರ್ಕಿಸಿ, ಅದೇ ರೀತಿಯಲ್ಲಿ ಕೇಂದ್ರ ಸರಕಾರದವರಲ್ಲಿ ಕೂಡ ಈ ಬ್ಬಗ್ಗೆ ಇರುವ ನಿಯಮಗಳನ್ನು ಅವಲೋಕಿಸಿ ಮಾನ್ಯ ಸದಸ್ಯರುಗಳ ಕಳಕಳಿಯನ್ನು ಕೂಡ ಅವರಿಗೆ ತಿಳಿಸುತ್ತೇವೆ. ತಾವು ಹೇಳಿದ ಹಾಗೆ ಜನನಾಯಕರಾಗಿ ಸಮಾರಂಭದಲ್ಲಿ ಕುಳತು ಅಧಿಕಾರಿಗಳು ಮಾಡುವ ಧ್ವಜಾರೋಹಣವನ್ನು ಮಿಕಿಮಿಕಿ ಕಣ್ಣುಬಿಟ್ಟು ಕೊಂಡು ಕುಳಿತು ನೋಡುವುದನ್ನು ಯಾರೂ ಒಪ್ಪುವುದಿಲ್ಲ. ಇದೇ ಕಾರಣಕ್ಕಾಗಿ ನಾನು ಕೂಡ 5 ವರ್ಷಗಳಿಂದ ಸಮಾರಂಭಕ್ಕೆ ಹೋಗಿಲ್ಲ. ಈ ವಿಚಾರದಲ್ಲಿ ಇರುವ ಪ್ರೋಟೋಕಾಲ್ ವಿಚಾರವನ್ನು ತಿಳಿದುಕೊಂಡು ನಮ್ಮ ಕೈಯಲ್ಲಿ ಏನು ಮಾಡುವುದಕ್ಕೆ ಸಾಧ್ಯವಿದೆ ಎಂಬುದನ್ನು ತಿಳಿದುಕೊಂಡು ಅದನ್ನೆಲ್ಲಾ ಮಾಡಲು ಯತ್ನಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರು ಕಡೆಗೂ ತಮ್ಮ ಒಂದು ಅನಿಸಿಕೆಯನ್ನು ಈ ಕುರಿತಾಗಿ ಹೇಳಲಿಲ್ಲ. ತಾವು ದಯಮಾಡಿ ಈ ವಿಚಾರದ ಬೆಳಕು ಚೆಲ್ಲ ಬೇಕು.

ಅಧ್ಯಕ್ಷರು : ಈ ಬಗ್ಗೆ ಕೇಂದ್ರ ಸರಕಾರದ ಮಾರ್ಗಸೂಚಿ ನಿಯಮಗಳು ಎನಿವೆ ಅದರ ಪ್ರಕಾರವೇ ಈಗ ನಮ್ಮ ರಾಷ್ಟ್ರಧ್ವಜಾರೋಹಣ ನಡೆಯುತ್ತಾ ಇದೆ. ಮಾನ್ಯ ಕಂದಾಯ ಸಚಿವರು ಆ ಬಗ್ಗೆ ಹೆಚ್ಚಿನ ವಿವರಗಳನ್ನು ಪಡೆದು ತಿಳಿಸುತ್ತೇನೆ ಎಂದು ಹೇಳಿದ್ದಾರೆ. ಆದ್ದರಿಂದ ಇನ್ನು 8-10 ದಿನಗಳಲ್ಲಿ ಈ ಬಗ್ಗೆ ಒಂದು ಕ್ಲಾರಿಫಿಕೇಶನ್ ಮಾಡಿಸೋಣ.

ಶ್ರೀ ಸುಭಾಶ್ ರುಕ್ಮಯ್ಯ ಗುತ್ತೇದಾರ್ : ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲಾ ಪರಿಷತ್‌ನಲ್ಲಿ ಅಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಣೆ ಮಾಡುತ್ತಾ ಇಲ್ಲ. ಸ್ಟೋರ್‌ನ ಲೆಕ್ಕವನ್ನಾಗಲಿ, ಮತ್ತಿತರ ಯಾವುದೇ ಲೆಕ್ಕಗಳನ್ನಾಗಲಿ, ಸರಿಯಾಗಿ ಯಾರೂ ಇಟ್ಟಿಲ್ಲ, ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತೊಂದು ತಾಲ್ಲೂಕಿಗೆ ವರ್ಗವಾಗಿ ಹೋದರೂ ಕೂಡ ತಮ್ಮ ಹಿಂದಿನ ಕಚೇರಿಯಲ್ಲಿನ ಲೆಕ್ಕಪತ್ರಗಳನ್ನು ಸೂಕ್ತ ರೀತಿಯಲ್ಲಿ ಕೊಟ್ಟು ಹೋಗುತ್ತಿಲ್ಲ, ಸರಕಾರದವರು ಅಧಿಕಾರಿಗಳಿಗೆ ಸೂಕ್ತ ಎಚ್ಚರಿಕೆ ನೀಡ ಬೇಕು. ಸರಕಾರದ ಹಣವು ಸರಿಯಾಗಿ ಜನರಿಗಾಗಿ ಉಪಯೋಗವಾಗಬೇಕು. ಕಾಂಟ್ರಾಕ್ಟರಗಳ ಜೊತೆಗೆ ಅಧಿಕಾರಿಗಳು ಶಾಮೀಲಾಗಿ ಕಾಮಗಾರಿಗಳಲ್ಲಿ ಅವ್ಯವಹಾರವನ್ನು ಮಾಡುತ್ತಿದ್ದಾರೆ. ಜಿಲ್ಲಾಪರಿಷತ್‌ನವರು ಹಳೆಯ ಗೋಕಟ್ಟೆಗಳಿಗೆ ಹೊಸ ಗೋಕಟ್ಟೆ ಎಂದು ತೋರಿಸಿ ಬಿಲ್‌ನ್ನು ತೆಗೆದುಕೊಂಡ ಪ್ರಕರಣಗಳೂ ಇವೆ. ನಮ್ಮ ಭಾಗದ ರಸ್ತೆಗಳ ವಿಚಾರವಾಗಿ ತುಂಬಾ ಬೇಸರದಿಂದ ಹೇಳ ಬೇಕಾಗಿದೆ. ನಮ್ಮ ಭಾಗವು ಮಹಾರಾಷ್ಟ್ರದ ಗಡಿಪ್ರದೇಶದ ಭಾಗವಾಗಿದೆ. ಮಹಾರಾಷ್ಟ್ರದಿಂದ ಸಾಕಷ್ಟು ಟ್ರಕ್‌ಗಳು ದಿನನಿತ್ಯವೂ ನಮ್ಮ ಭಾಗದ ಮೂಲಕ ಕರ್ನಾಟಕಕ್ಕೆ ಬರುತ್ತವೆ. ಮಹಾರಾಷ್ಟ್ರದಲ್ಲಿನ ರಸ್ತೆಗಳು ತುಂಬಾ ಚೆನ್ನಾಗಿವೆ. ಅದೇ ಡ್ರೈವರ್‌ಗಳು ಕರ್ನಾಟಕ ಪ್ರವೇಶಿಸುತ್ತಿದ್ದಂತೆಯೇ ಕರ್ನಾಟಕ ಸರಕಾರವನ್ನು ರಸ್ತೆಯ ವಿಚಾರದಲ್ಲಿ ಬೈಯ್ದಾಡುವಂಥ ಪರಿಸ್ಥಿತಿ ಇದೆ.

ಕರ್ನಾಟಕದ ರೋಡ್‌ಗಳ ಬಗ್ಗೆ ಅವರಿಗೆ ತುಂಬಾ ತಿರಸ್ಕಾರದ ಮಾತುಗಳು ಇವೆ. ಇದನ್ನು ಹೋಗಲಾಡಿಸಬೇಕು. ನಮ್ಮ ಭಾಗದಲ್ಲಿನ ರಸ್ತೆಗಳನ್ನು ಚೆನ್ನಾಗಿ ಮಾಡಬೇಕು. ಹೈದ್ರಾಬಾದ್ ಕರ್ನಾಟಕ ಪ್ರದೇಶದ ರಸ್ತೆಗಳನ್ನು ಉತ್ತಮ ಪಡಿಸುವುದರ ಜೊತೆಗೆ ನಮ್ಮ ಭಾಗದಲ್ಲಿರುವ ಕುಡಿಯುವ ನೀರುನ ಸಮಸ್ಯೆಯನ್ನು ಪರಿಹರಿಸಿ ಕೊಡಬೇಕೆಂದು ಒತ್ತಾಯಪಡಿಸುತ್ತೇನೆ. ಇನ್ನೊಂದು ಗಂಭೀರವಾದ ಸಮಸ್ಯೆ ಅಂದರೆ ಗಡಿಪ್ರದೇಶವಾದ ನಮ್ಮ ಊರುಗಳಿಗೆ ಮಹಾರಾಷ್ಟ್ರದ ಗೂಂಡಾಗಳು ಪ್ರವೇಶಿಸಿ ದಾಂಧಲೆ ಮಾಡುತ್ತಾರೆ. ಅಲ್ಲಿಂದ ಗಡಿಪಾರು ಮಾಡಿದವರು, ತಲೆಮರೆಸಿಕೊಂಡವರು ನಮ್ಮಲ್ಲಿಗೆ ಬಂದು ಕುಕೃತ್ಯಗಳಲ್ಲಿ ತೊಡಗುತ್ತಾರೆ. ಅದಕ್ಕಾಗಿ ಮಾನ್ಯ ಗೃಹಸಚಿವರಲ್ಲಿ ನನ್ನ ವಿನಂತಿ ಏನೆಂದರೆ ನಮ್ಮ ಭಾಗದಲ್ಲಿ ಬಿಗಿ ಬಂದೋಬಸ್ತ್‌ನ ವ್ಯವಸ್ಥೆಯನ್ನು ಮಾಡಬೇಕು, ಒಳ್ಳೆಯ ಪೋಲೀಸ್ ಅಧಿಕಾರಿಗಳನ್ನು ಹಾಕಿ ನಮ್ಮ ಭಾಗದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವಂತೆ ವ್ಯವಸ್ಥೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ. ಈ ಗೂಂಡಾಗಳಿಂದಾಗಿ ನಮ್ಮ ಭಾಗದ ಜನರು ಕಷ್ಟವನ್ನು ಅನುಭವಿಸುವಂತಾಗಿದೆಯಾದ ಕಾರಣ ಸರಕಾರದವರು ಎಚ್ಚರಿಕೆ ವಹಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಇನ್ನು ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯಯು ಇದೆ.

ಆಳಂದ್ ತಾಲ್ಲೂಕ್‌ನಲ್ಲಿ ಒಂದು ಶುಗರ್‌ಫ್ಯಾಕ್ಟರಿ ಇದೆ. ನಮ್ಮ ತಾಲ್ಲೂಕ್‌ನಲ್ಲಿ ನೇಕಾರರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ನಮ್ಮಲ್ಲಿ ಖಾದಿ ಮಂಡಳಿಯ ಒಂದು ಘಟಕ ಇದೆ. ಅದರಲ್ಲಿ ಸುಮಾರು 1500 ಜನ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಆದರೆ ಅವರಿಗೆ ನೂಲಿನನ ಪೂರೈಕೆಯನ್ನು ಸರಿಯಾಗಿ ಮಾಡುತ್ತಾ ಇಲ್ಲವಾದ ಕಾರಣ ನೇಕಾರರು ಕಷ್ಟದಲ್ಲಿರುವಂತಾಗಿದೆ. ಅದನ್ನು ಸರಿಪಡಿಸಿ ನಮ್ಮ ಭಾಗದಲ್ಲಿ ಹೆಚ್ಚಿನ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಿ ಅಲ್ಲಿನ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವಂತೆ ಮಡ ಬೇಕಾಗಿ ಕೇಳಿಕೊಳ್ಳುತ್ತೇನೆ.ನಾನು ಹೇಳಿದ ವಿಚಾರಗಳನ್ನು

ಸರಕಾರದವರು ಗಮನದಲ್ಲಿಟ್ಟಕೊಂಡು ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಕೇಳಿಕೊಂಡು ನನಗೆ ಅವಕಾಶ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕಾಗಿ ವಂದನಾರ್ಪಣೆಯನ್ನು ಸಲ್ಲಿಸುವ ಗೌರವಪೂರ್ಣವಾದ ಕೆಲಸವು ಈಗ ನಡೆಯುತ್ತಾ ಇದೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸಲ್ಲಿಸುವ ಮೊದಲ ಭಾಷಣಕಾರರಾಗಿ ಮಾನ್ಯ ನಾಗೇಗೌಡರು ತಮ್ಮ ಅರ್ಥಪೂರ್ಣವಾದ ಭಾಷಣವನ್ನು ಮಾಡಿದ್ದಾರೆ. ಆದರೆ ಆಡಳಿತ ಪಕ್ಷದವರಿಂದಲೇ ಈ ಭಾಷಣಕ್ಕೆ ಗೌರವ ಸಿಗುತ್ತಾ ಇಲ್ಲ ಎಂದು ಬೇಸರದಿಂದ ಹೇಳಬೇಕಾಗಿದೆ. 37ಜನ ಮಂತ್ರಿಗಳಲ್ಲಿ ಎರಡೂವರೆ ಜನ ಮಂತ್ರಿಗಳು ಮಾತ್ರ ಇಲ್ಲಿ ಹಾಜರಿದ್ದಾರೆ. ಅದೇ ರೀತಿಯಲ್ಲಿ ಅಧಿಕಾರಿಗಳ ಸ್ಥಾನದಲ್ಲಿಯೂ ಯಾವ ಅಧಿಕಾರಿಗಳೂ ಕಾಣುತ್ತಾ ಇಲ್ಲ. ಇದೊಂದು ಕಾಟಾಚಾರ ಎಂಬ ನಿರ್ಲಕ್ಷ್ಯಭಾವನೆಯು ಅವರಲ್ಲಿ ಬಂದಿರ ಬಹುದು. ತಾವು ಅಧ್ಯಕ್ಷಪೀಠದಲ್ಲಿ ಆಸೀನರಾಗಿ ಎಲ್ಲಾ ಸದಸ್ಯರಿಗೂ ಸಮಾನವಾದ ಅವಕಾಶವನ್ನು ಕೊಟ್ಟುಕೊಂಡು ಪ್ರೋತ್ಸಾಹಿಸುತ್ತಾ ಇದ್ದೀರಿ. ಅನೇಕ ಮಾನ್ಯ ಸದಸ್ಯರುಗಳು ಸರಕಾರಕ್ಕೆ ಅನೇಕ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ.

ಗುತ್ತೇದಾರ್‌ರವರು ಚೆನ್ನಾಗಿ ಮಾತನಾಡಿದ್ದಾರೆ. ಅದೆಲ್ಲಾ ಇಲ್ಲಿ ಕಡತಕ್ಕೆ ಹೋಗುತ್ತದೆ ಸರಿ, ಸಚಿವರು ನಾನು ಕಿವಿಗೆ ಹಾಕಿ ಕೊಂಡಿದ್ದೇನೆ, ಕೇಳುತ್ತಿದ್ದೇನೆ ಎಂದು ಹೇಳುತ್ತಾರೆ. ಕೇಳುತ್ತಾರೆ ಸರಿ, ಆದರೆ ಅವರೇನು ಕಂಪ್ಯೂಟರ್ ಅಲ್ಲ, ಸರ್ರನೆ ಎಲ್ಲ ತುಂಬಿಕೊಡುಬಿಡುವುದಕ್ಕೆ ನಮ್ಮಲ್ಲಿ ಇತ್ತೀಚಿನ ದಿನಗಳಲ್ಲಿ ಏನಾಗಿದೆ? ನನ್ನ ಹೆಸರಿನ ಮುಂದಿರುವ ಎಲ್ಲ ಕಾಗದಪತ್ರಗಳನ್ನೂ ಸಭೆಯ ಮುಂದಿರುತ್ತೇನೆ ಎನ್ನುತ್ತಾರೆ ಅದೇನು ಒಂದು ರೀತಿ ನಾಟಕೀಯವಾಗಿದೆ, ಯಾವುದು ಆ ಕಾಗದಪತ್ರಗಳು, ಆಮೇಲೆ ಯಾರಾದರೂ ಗೈರುಹಾಜರಾದರೆ ಅವರ ಕಾಗದಪತ್ರಗಳನ್ನೂ ನಾನೇ ಮಂಡಿಸುತ್ತೇನೆ ಅನ್ನುತ್ತಾರೆ.ನೀವು ಒಳ್ಳೆಯ ದೃಷ್ಟಿಯಿಂದ ಚಿಂತನೆ ಮಾಡುವವರು, ನಿಮ್ಮ ವ್ಯಕ್ತಿತ್ವ ಬಹಳ ಬೆಳೆಯುತ್ತಿದೆ. ಈ ಸಂದರ್ಭದಲ್ಲಿ ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ, ಒಬ್ಬ ಅಧಿಕಾರಿಯಾದರೂ ಅಲ್ಲಿದ್ದಾರೆಯೇ? ಇದು ಅಗೌರವ, ಈ ಒಂದು ಭಾಷಣಕ್ಕೆ ತೋರಿದ ಅಗೌರವ ಇದರಲ್ಲಿ ಬೇರೆ ಮಾತಿಲ್ಲ. ಮುಖ್ಯಮಂತ್ರಿ ಉಪಮುಖ್ಯಮಂತ್ರಿಗಳಿಂದ ಹಿಡಿದು 37 ಜನ ಮಂತ್ರಿಗಳಿದ್ದಾರೆ. 10 ಜನ ಮಂತ್ರಿಗಳಾದರೂ ಬೇಡವೇ? ಈಗ ಎರಡೂ ಸದನಗಳು ನಡೆಯುತ್ತಿದೆ ಸ್ವಾಮಿ, ನೀವು ನೇರವಾಗಿ ಆ ಸದನದಲ್ಲಿ ಎಷ್ಟು ಜನ ಇದ್ದಾರೆಂದು ನೋಡಿಸಿ. ಇರಲಿ, ಆ ಸದನಕ್ಕೆ ಹೋಗಬಾರದು ಅಂತ ಅಲ್ಲ. ತಾವು ದಯಮಾಡಿ ಮೂರನೇ ಮಹಡಿಗೆ ನಿಮ್ಮ ವ್ಯವಸ್ಥೆ ಕಳಿಸಿ ಅಲ್ಲಿ ಎಷ್ಟು ಜನ ಮಂತ್ರಿಗಳು ಅವರದೇ ಆದ ವ್ಯವಸ್ಥೆಯಲ್ಲಿ ಅವರ ಕಾರ್ಯಮಾಡಿ ಕೊಂಡು ಕೂತಿದ್ದಾರೆ ಎಂದು ತಿಳಿದುಕೊಳ್ಳಿ. ಈ ತರಹ ಆದರೆ, ನಾವು ಕೂತೇ ಇರುತ್ತೇವೆ. ಇನ್ನು ಬೆಳಗಿನ ಹೊತ್ತು 9.30ಕ್ಕೆ ಸಭೆ ಇದ್ದರೆ 9 ಗಂಟೆಗೆ ಎದ್ದುಬಿದ್ದು ಬಂದು ತಮ್ಮ ಚೇಂಬರ್‌ನಲ್ಲಿ ತಮ್ಮನ್ನು ಕಂಡು ಇಂಥ ವಿಷಯವನ್ನು ಕುರಿತು ಮಾತಾಡಬೇಕೆಂದಿದ್ದೇನೆ ಎಂದು ತಮ್ಮ ಗಮನಕ್ಕೆ ತರುತ್ತೇನೆ.

ಆದರೆ ಅಧಿಕಾರಿಗಳ ಸಚಿವರ ಗೈರುಹಾಜರಿಯಿಂದ ನಮಗೆ ನೋವಾಗುತ್ತದೆ, ಅದರಲ್ಲೂ ಗವರ್ನರ್‌ರ ಭಾಷಣದ ಮೇಲಿನ ಚರ್ಚೆ ಸಂದರ್ಭದಲ್ಲಿ ಮಾತನಾಡುವಾಗ, ಈ ವಂದನಾ ನಿರ್ಣಯದ ಮೇಲೆ ವಾಟಾಳ್‌ನಾಗರಾಜ್‌ರವರು ಮಾತನಾಡುವಾಗ ಪುಸ್ತಕವನ್ನು ಹರಿದುಹಾಕಿದರರು ಎಂದು ನನ್ನ ಮೇಲೆ ನಿರ್ಣಯ ತಂದು ದಿನಗಟ್ಟಲೆ ಚರ್ಚೆ ನಡೆಸಿದರು. ಆದರೆ ಯಾವ ಸರ್ಕಾರ ಈ ವಂದನಾ ನಿರ್ಣಯ ತಂದಿದೆ ಅದನ್ನು ಎಷ್ಟು ಅಗೌರವದಿಂದ ಕಾಣುತ್ತಿದ್ದಾರೆಂದರೆ ಹೇಳಲು ನೋವಾಗುತ್ತದೆ. ಆ ಅಧಿಕಾರಿವರ್ಗದವರೇನು ಈ ಸದನಕ್ಕಿಂತ ದೊಡ್ಡವರೇನಲ್ಲ, ತಮ್ಮ ಪೀಠ ತಮ್ಮ

ಮಾತು ಬಹಳ ಪವಿತ್ರವಾದುದು. ಮೂರನೇ ಮಹಡಿಯಲ್ಲಿ ತಮ್ಮ ಚೇಂಬರ್‌ಗಳಲ್ಲಿ ಜನರನ್ನು ಕೂಡಿಸಿಕೊಂಡು ಆ ಪಟೇಲ ಬಂದನೆ, ಆ ಶ್ಯಾನುಭೋಗ ಬಂದಾನೆ ಎಂದು ಚರ್ಚೆ ನಡೆಸುತ್ತಿರುತ್ತಾರೆ. ಮತ್ತೆ ಸದನ ನಡೆಯುವಾಗ ಪ್ರವಾಸ ಹೋಗಲೋಬಾರದು. ನಾನು ಅತ್ಯಂತ ದುಃಖದಿಂದ ಆ ಪದ ನಾನು ಬಳಸಬಾರದು, ಅದನ್ನು ಬಳಸಿದರೆ ಅಗೌರವವಾಗುತ್ತದೆ, ಇದರ ಬಗ್ಗೆ ತಾವು ಗಮನಿಸಬೇಕೆಂದು ಕಳಕಳಿಯಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು : ಅಧ್ಯಕ್ಷರೇ, ಇಲ್ಲಿನ ಅಧಿಕಾರಿಗಳ ಸಚಿವರ ಗೈರುಹಾಜರಿ ನೋಡಿದರೆ ಹೊಸದಾಗಿ ಬಂದಿರುವ ನಮ್ಮಂಥ ಸದಸ್ಯರಿಗೆ ಆಶ್ಚರ್ಯವಾಗುತ್ತದೆ, ಇದು ಏನು ಇಷ್ಟೊಂದು ನಿರ್ಲಕ್ಷ್ಯ ತೋರುತ್ತಿದ್ದಾರಲ್ಲ, ಮುಂದೆ ನಾವೂ ಹೀಗೆ ಮಾಡಬಹುದೇನೋ ಎಂದು ಅನ್ನಿಸುತ್ತಿದೆ, ವಾಸ್ತವಿಕವಾಗಿ ಈ ಸದನದಲ್ಲಿ ನಮ್ಮ ಕ್ಷೇತ್ರಗಳ ಕುಂದುಕೊರತೆಗಳನ್ನು ನಾವು ಪ್ರಸ್ತಾಪಿಸಿದಾಗ ಅದನ್ನು ಪರಿಹರಿಸಲು ಸಂಬಂಧಿಸಿದ ಸಚಿವರು ಇರಬೇಕಾಗುತ್ತದೆ. ನಮಗೆ ಇದರಿಂದ ನೋವು ಅವಮಾನವಾಗಿದೆ.

SRI QAMARUL ISLAM : Mr.Speaker, Sir, this is not the feelilng of only Shri. Vatal Nagaraj. This is the feeling of all the Members of this House who are present. This has become the practice for the officers. They are taking the House very lightly.

MR.SPEAKER :Yes, we have taken cognisance of it.

SRI QUMARUL ISLAM : The matter is reitered many times. You are the custodian of the House I hope you will definitely take corrective steps.

ಅಧ್ಯಕ್ಷರು : ಮುಖ್ಯಮಂತ್ರಿಗಳು ಮತ್ತು ರಮೇಶ್ ಜಿಗಜಿಣಗಿಯವರು ಬಾಬು ಜಗಜೀವನರಾಂ ಅವರ ಹುಟ್ಟುಹಬ್ಬದ ಕಾರ್ಯಕ್ರಮಕ್ಕೆ ಹೋಗುತ್ತಿರುವಾದಾಗಿ ತಿಳಿಸಿದ್ದಾರೆ. ಉಳಿದವರದ್ದು ನನಗೇನೂ ಗೊತ್ತಿಲ್ಲ. ಅವರು ಬದಲಾವಣೆಯಾಗಬೇಕು.

ಮಂತ್ರಿಗಳ ಹೇಳಿಕೆ.

ಶ್ರೀ ವೈ.ಕೆ. ರಾಮಯ್ಯನವರ ಮೇಲೆ ಹಾಕಿರುವ ಕೇಸ್‌ಗಳನ್ನು ವಾಪಸ್ ತೆಗೆದುಕೊಂಡಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) : ಅಧ್ಯಕ್ಷರೇ, ವೈ.ಕೆ. ರಾಮಯ್ಯನವರು ಸೆರೆಮನೆಯಲ್ಲಿ ಇರುವ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ವಾಟಾಳ್‌ನಾಗರಾಜ್, ಬಂಗಾರಪ್ಪ ಶ್ರೀ ಎಸ್. ಶಿವನಂಜಪ್ಪ ಇವರೆಲ್ಲರೂ ತಮ್ಮ ಭಾವನೆಗಳನ್ನು ವ್ಯಕ್ತಮಾಡಿದ್ದಾರೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಇಂದು ದೆಹಲಿಯಿಂದ ಪ್ರವಾಸ ಮುಗಿಸಿ ಬಂದ ಮೇಲೆ ಈ ಸದನದ ಗೌರವನ್ವಿತ ಸದಸ್ಯರ ಅಭಿಪ್ರಾಯ ಮತ್ತು ಅಧ್ಯಕ್ಷರೆ ಅಭಿಪ್ರಾಯಗಳನ್ನು ಅವರ ಗಮನಕ್ಕೆ ತಂದಿದ್ದೇನೆ. ಶ್ರೀ ವೈ.ಕೆ. ರಾಮಯ್ಯನವರ ಮೇಲೆ ಪೋಲೀಸರು ಏನು ಅಸಭ್ಯ ನಡವಳಿಕೆ ಸಂಬಂಧಿಸಿದ ಕೇಸನ್ನು ಹಾಕಿದ್ದರೋ, ಅದನ್ನು ವಾಪಸ್ ತೆಗೆದುಕೊಳ್ಳಲು ಸರ್ಕಾರ ತೀರ್ಮಾನ ಮಾಡಿದೆ. ಮುಖ್ಯಮಂತ್ರಿಗಳು ಸಂಬಂಧಪಟ್ಟ ಆಜ್ಞೆಕೂಡ ಮಾಡಿದ್ದಾರೆ. ಇನ್ನು ಮುಂದೆ ವೈ.ಕೆ. ರಾಮಯ್ಯನವರು ಕೋಪದಿಂದ ಅಸಭ್ಯದಿಂದ ವರ್ತಿಸುವ ತಮ್ಮ ಬುದ್ಧಿಯನ್ನು ಹತೋಟಿಯಲ್ಲಿಟ್ಟುಕೊಂಡು ಸೂಕ್ತವಾಗಿ ವರ್ತಿಸುತ್ತಾರೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಹಾಗೆಯೇ ಶಿವನಂಜಪ್ಪನವರು ನಾಳೆ ದಿವಸ ತುಮಕೂರು ಜಿಲ್ಲೆಯಲ್ಲಿ ಕೆಲವು ಭಾಗಗಳಲ್ಲಿ ಹೇಮಾವತಿ ನೀರು ಬಿಡಬೇಕೆಂದು ಒತ್ತಾಯಿಂದ ಜಿಲ್ಲೆಯ ಜನ